ಮಾಡಿದ್ದಾರೆ, ಅದು ಹಣಕಾಸು ಇಲಾಖೆ ಸಂಬಂಧಿಸಿದ ಒಂದು ಕೊಠಡಿಯಾಗಿದೆ. ಅಲ್ಲಿ ಯಾವದೇ ತರಹದ ಫೈಲುಗಳು ಇರಲಿಲ್ಲ. ಎರಡು ಕಂಪ್ಯೂಟರ್‌ಗಳು ಮಾತ್ರ ಈ short-circuit ನಿಂದ ಅನಾಹುತವಾಗಿದೆ. ಆದರೆ ಅಲ್ಲಿ ಯಾವುದೇ ಕಡತಗಳು ಇರಲಿಲ್ಲ. ಮತ್ತು ಯಾವುದೇ valuable ವಸ್ತುಗಳು ಇರಲಿಲ್ಲ. ಅಲ್ಲಿ ಯಾವುದೇ ತರಹದ ಹೆಚ್ಚಿನ ಅನಾಹುತಗಳು ಆಗಲಿಲ್ಲ. ಅದಕ್ಕಾಗಿ ಇನ್ನು ಹೆಚ್ಚಿನ ವರದಿಯನ್ನು ತರಿಸಿ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು :- ಆಯಿತು. ಮಾನ್ಯ ಶರಣಪ್ರಕಾಶ್ ರುದ್ರಪ್ಪ ಪಾಟೀಲ್‌ರವರು ತಾವು ಮಾತನಾಡಿ.

8. ಶಾಸನ ರಚನೆ

ಪರ್ಯಾಯಲೋಚನಾ ಪ್ರಸ್ತಾಪದ ಮೇಲೆ ಮುಂದುವರೆದ ಚರ್ಚೆ 2007 ನೇ ಸಾಲಿನ ಕರ್ನಾಟಕ ಕೃಷಿ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) (ತಿದ್ದುಪಡಿ) ವಿಧೇಯಕ

ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) :- ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲನೆಯದಾಗಿ ಈ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರಗಳ ನಿಯಂತ್ರಣ ಮತ್ತು ತಿದ್ದುಪಡಿ ವಿಧೇಯಕವನ್ನು ಏನು ಸರ್ಕಾರ ಮಂಡಿಸಿದೆ, ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇದು ಬಹಳ ದಿನಗಳ ಹಿಂದೆ ಪಾಸಾಗಬೇಕಾಗಿರುವಂತಹ ಬಿಲ್ ಆಗಿದೆ. ಕಳೆದ ಸದನದಲ್ಲಿಯೂ ಕೂಡ ಇದು ಮಂಡನೆಯಾಯಿತು. ಇದರ ಬಗ್ಗೆ ಚರ್ಚೆಯಾಗಲಿಲ್ಲ. ಆದರೆ ಈ ಬಿಲ್ಲು ರೈತರ ಪರ ಇದೆ, ಇದರಿಂದ ರೈತರಿಗೆ ಅನುಕೂಲವಾಗಿದೆ ಎನ್ನುವುದರಲ್ಲಿ ಎರಡು ಮಾತು ಇಲ್ಲ. ಬಹುಶಃ ತಾವು ಇರಲಿಲ್ಲ, ಈ ಸದನದಲ್ಲಿ ಈ ಬಿಲ್ಲಿನ ಬಗ್ಗೆ ಚರ್ಚೆಯಾಗುವಾಗ ನಾವು ನೋಡಿದ್ದೇವಲ್ಲಾ, ಹಿರಿಯ ಸದಸ್ಯರೂ ಕೂಡ ಅವರವರ ಅಭಿಪ್ರಾಯಗಳನ್ನು ಸಹ ಹೇಳಿದ್ದಾರೆ. ಮಾನ್ಯ ಕೃಷ್ಣ ಬೈರೇಗೌಡರು ಈ ಬಿಲ್ಲಿನ ಬಗ್ಗೆ ಬಹಳ ವಿಸ್ತಾರವಾಗಿ explanation ಕೊಟ್ಟಿದ್ದಾರೆ, ಅವರು ಇದರ ಬಗ್ಗೆ ಎಳೆಎಳೆಯಾಗಿ ಬಿಡಿಸಿ ಹೇಳಿದ್ದಾರೆ. ಇದು ಯಾವುದೇ ರೀತಿಯಾಗಿಯೂ ಕೂಡ ರೈತರಿಗೆ ಹಾನಿಯಾಗುವಂತಹದ್ದಲ್ಲ. ಇವತ್ತು ಈ ಬಿಲ್ಲಿನ ಉದ್ದೇಶವೇನು? ಎಂಬುದು ಕೂಡ ನಾವು ಅರ್ಥ ಮಾಡಿಕೊಳ್ಳ ಬೇಕಾಗುತ್ತದೆ. ಏಕೆಂದರೆ ಕೆಲವು ಜನರು ಏನು ತಪ್ಪು ಅಭಿಪ್ರಾಯಗಳಲ್ಲಿದ್ದಾರೆಂದರೆ, ಈ ಬಿಲ್ಲು ಕೇವಲ ಕೇಂದ್ರಸರ್ಕಾರದ ಮಾನ್ಯ ಶರದ್‌ಪವಾರ್‌ರವರು impose ಮಾಡುತ್ತಿದ್ದಾರೆ, ಅಥವಾ ಕೇಂದ್ರ ಸರ್ಕಾರ impose ಮಾಡುತ್ತಿದೆ ಎನ್ನುವ ತಪ್ಪು

ಭಾವನೆ ಜನರಲ್ಲಿ ಹೋಗಬಾರದು. ಈ ಬಿಲ್ಲಿನಲ್ಲಿ ಏನು ಇದೆ ಎಂಬುದರ ಬಗ್ಗೆ ನಾವೆಲ್ಲರೂ ಕೂಡ ಇಲ್ಲಿ ಬಂದಿರುವವರು ರೈತರ ಪ್ರತಿನಿಧಿಗಳಾಗಿದ್ದೇವೆ. ಈ ರಾಜ್ಯದ ಬಹುತೇಕ ಜನಸಂಖ್ಯೆ ರೈತರಾಗಿರುವದರಿಂದ ನಾವು ಈ ಒಂದು ವಿಧೇಯಕವನ್ನು ತರುವುದರಿಂದ ಈ ರಾಜ್ಯದ ರೈತರ ಮೇಲೆ ಏನು ಪರಿಣಾಮ ಬೀಳುತ್ತದೆ ಎಂಬುದನ್ನು ಕೂಡ ನಾವೆಲ್ಲರೂ ಕೂಡ ಪರಿಶೀಲನೆಯನ್ನು ಮಾಡಬೇಕಾಗುತ್ತದೆ ಹಾಗೂ ಆತ್ಮಶೋಧನೆಯನ್ನು ಕೂಡ ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ ಈ ಸದನದಲ್ಲಿ ಇವತ್ತು ನಾವು ಏನು ಹೇಳುತ್ತಿದ್ದೇವೆ. ಈ ಸದನದಲ್ಲಿ ನಾವು ಯಾರ ಪರವಾಗಿ ಮಾತನಾಡುತ್ತಿದ್ದೇವೆ. ಈ ಸದನದಲ್ಲಿ ಈ ಬಿಲ್ಲನ್ನು ಯಾವ ರೀತಿಯಾಗಿ ವ್ಯಾಖ್ಯಾನ ಮಾಡುತ್ತಿದ್ದೇವೆ ಎಂಬ ಬಗ್ಗೆ ಎಲ್ಲವೂ ಕೂಡ ಕಡತಕ್ಕೆ ಹೋಗುತ್ತದೆ. ಬಹುಶಃ ಇತಿಹಾಸದಲ್ಲಿ ಇವತ್ತು ಮುಂದೆ ಬರುವಂತಹ ಪೀಳಿಗೆಗೆ ತೊಂದರೆಯಾಗಬಾರದು. ನಮ್ಮ ದೇಶದಲ್ಲಿ ಐ.ಟಿ.ಯಲ್ಲಾಗಲಿ, ಇವತ್ತು manufacturing ನಲ್ಲಾಗಲಿ, ಅಥವಾ ಬೇರೆ ಬೇರೆ ಕಡೆಗಳಲ್ಲಿ growth rate 8 ರಿಂದ 9 % ನಮ್ಮ agriculture ನಲ್ಲಿ ಇವತ್ತು ನಮ್ಮ ದೇಶದಲ್ಲಿ ಏನು growth rate ಎನ್ನುವುದನ್ನು ನಾವುಗಳು ಮನಗಂಡ ಮೇಲೆ ಕೇಂದ್ರ ಸರ್ಕಾರ ಯಾವ ರೀತಿಯಾಗಿ ಇದನ್ನು ನಾವು ಸರಿಪಡಿಸಬೇಕು ಎಂಬ ಬಗ್ಗೆ ಗಮನ ಹರಿಸಬೇಕು. Agriculture Growth Rate 1.5% ರಿಂದ 2% ಇದೆ, ಇದನ್ನು ಕನಿಷ್ಟ 4% ಗಾದರೂ ತರಬೇಕು. ಅದನ್ನು ತರಬೇಕಾದರೆ ನಾವು ಏನೇನು ಮಾಡಬೇಕು? ಈ ದೇಶದಲ್ಲಿ ರೈತರು ಸಂಕಷ್ಟದಲ್ಲಿದ್ದಾರೆ. ಅವರಿಗೆ ನಾವು ಯಾವ ರೀತಿಯಾಗಿ ಸಹಾಯವನ್ನು ಮಾಡಬೇಕು ಎಂಬ ಬಗ್ಗೆ ಕೂಲಂಕಷವಾಗಿ ಚರ್ಚೆಯಾದ ಮೇಲೆ ಇವತ್ತು ಈ ಬಿಲ್ಲನ್ನು ಎಪಿಎಂಸಿ ಆ್ಯಕ್ಟ್‌ನ್ನು ಅಮೆಂಡ್‌ಮೆಂಟ್ ಮಾಡುವುದರ ಮುಖಾಂತರ agriculture sector ನಲ್ಲಿ investment ಮಾಡಬೇಕು. ಹಣವೂ ಹೂಡಿಕೆಯಾಗಬೇಕು, ಏಕೆಂದರೆ ರೈತ ನಾನು ಇವತ್ತು ಕಷ್ಟಪಟ್ಟು ದುಡಿದರೂ ಕೂಡ ಅವನ ಹತ್ತಿರ ಹಣವಿಲ್ಲ. ಅವನು investment ಮಾಡಬೇಕು, ನಮ್ಮ ಉತ್ಪನ್ನ ಹೆಚ್ಚು ಮಾಡಬೇಕು, ನಾವು ಕೂಡ ಈ ಸಮಾಜದಲ್ಲಿ ಒಬ್ಬ ಸ್ವಾಭಿಮಾನಿಯಾಗಿ ಬದುಕಬೇಕೆಂದರೆ, ಇವತ್ತು ರೈತನಿಗೆ ಕಷ್ಟವಾಗಿದೆ. ಅದಕ್ಕಾಗಿ ನಾವು ಇವೆಲ್ಲವನ್ನು ನಿವಾರಣೆ ಮಾಡಬೇಕು. ಯಾವ ರೀತಿಯಾಗಿ ಮಾಡಬೇಕೆಂದು ಕೂಲಂಕಷವಾಗಿ ವಿಚಾರ ಮಾಡಿದ ಮೇಲೆ ಮೊಟ್ಟಮೊದಲನೆಯದು farmers ಗೆ credit ಸಿಗಬೇಕು. ಇವತ್ತು ನಮ್ಮ ಇಡೀ ರಾಜ್ಯದಲ್ಲಿ ನೋಡಿದರೆ ಕೇವಲ 25 ರಿಂದ 30% ಬಹಳ ಅಂದರೆ 35% formers ಗೆ ಮಾತ್ರ farmer credit ಸಿಗುತ್ತದೆ. ಆದುದರಿಂದ

ಇವತ್ತು Nationalised Bank ಇರಬಹುದು, Co-Operative Banks ಇರಬಹುದು, VSSN ಇರಬಹುದು, ಇವುಗಳ ಬಾಕಿಯನ್ನು ಹಿಡಿದುಕೊಂಡು, ಬಹುತೇಕ ರೈತರಿಗೆ ಕೂಡ ಇವತ್ತು credit ನ್ನು ಕೊಡುವುದಕ್ಕಾಗುವುದಿಲ್ಲ., ಇದು ಒಂದು ಕಡೆಯಾಗಿದೆ. ಇನ್ನೊಂದು ಕಡೆ ರೈತ ಬೆಳೆದಿರುವಂತಹ ಏನು ಗೂಡ್ಸ್ ಇದೆ, ಅದಕ್ಕೆ ಅವನು ಇತ್ತ ಬೆಲೆ ಕಟ್ಟುವ ಹಾಗಿಲ್ಲ. ಯಾರು ಬೆಲೆಯನ್ನು ಕಟ್ಟುತ್ತಿದ್ದಾರೆ? ಇವತ್ತು ಮಧ್ಯವರ್ತಿಗಳು ಬೆಲೆಯನ್ನು ಕಟ್ಟುತ್ತಿದ್ದಾರೆ. ರೈತನಿಗೆ ತಾನು ಬೆಳೆದಿರುವಂತಹ ಪದಾರ್ಥವನ್ನು ತಾನು ಹಿಡಿದಿಟ್ಟುಕೊಳ್ಳುವಂತಹ ಶಕ್ತಿ ಅವನಿಗಿಲ್ಲ. ಏಕೆಂದರೆ ತತ್‌ಕ್ಷಣವಾಗಿ ಅವನು ಮಾರ್ಕೆಟ್‌ನಿಂದ ಸಾಲವನ್ನು ತಂದು ಇವತ್ತು 3 ರಿಂದ 4% ಬಡ್ಡಿ ನೀಡಿ ಸಾಹುಕಾರರ ಹತ್ತಿರ 36% ನಂತೆ ಬಡ್ಡಿಗೆ ಹಣವನ್ನು ತಂದು ಅದನ್ನು ವಾಪಸ್ಸು ಕೊಡುವುದು ಇದೆ. ಅದಕ್ಕಾಗಿ ಅವನು ತತ್‌ಕ್ಷಣವಾಗಿ ಮಾರಬೇಕು. ಅದನ್ನು ಮಾರಿದರೆ ಲಾಭವನ್ನು ಮಧ್ಯವರ್ತಿಗಳು ತೆಗೆದುಕೊಳ್ಳುತ್ತಿದ್ದಾರೆ. ಇವತ್ತು spestrum ಅನ್ನು ನೋಡಿದರೆ ಇವತ್ತು ಕೃಷ್ಣಾ ಬೈರೇಗೌಡರು ಬಹಳ ಚೆನ್ನಾಗಿ ಹೇಳಿದರು. ಇವತ್ತು ರೈತರು ಬೆಳೆದಿರತಕ್ಕಂಥ ಪದಾರ್ಥಗಳಿಗೆ ಏನು ಬೆಲೆ ಸಿಗುತ್ತಿದೆ, ಆ consumer ಗೆ ಯಾವ ಬೆಲೆ ಸಿಗುತ್ತಿದೆ? ಬಹಳ ವ್ಯತ್ಯಾಸವಿದೆ, ಇವತ್ತು ರೈತರು ಬೆಳೆದಿರತಕ್ಕಂಥ ಪದಾರ್ಥಕ್ಕೆ 50% ಕ್ಕಿಂತ ಜಾಸ್ತಿ ಇವತ್ತು ಮಧ್ಯವರ್ತಿಗಳು ಹಣ ಮಾಡುತ್ತಿದ್ದಾರೆ. ಇವತ್ತು ಹಣ್ಣು ಮತ್ತು ತರಕಾರಿಗಳಿಗಂತೂ ಹಗಲುದರೋಡೆ ನಡೆಯುತ್ತಿದೆ. ಇವತ್ತು ಕೇವಲ ಈ ಒಂದು ಬಿಲ್ ತರುವುದರಿಂದ ನಮ್ಮ ಅನಿಸಿಕೆ ಏನೆಂದರೆ ಖಂಡಿತವಾಗಿ competition ಆಗುತ್ತದೆ. ಇವತ್ತು ಒಬ್ಬರಲ್ಲಿ, ಇನ್ನೂ ನಾಲ್ಕೈದು ಜನ ಬರುತ್ತಾರೆ. ಇವತ್ತು ದೊಡ್ಡ ಹೂಡಿಕೆದಾರರು ಬಂದರೂ ಕೂಡ ರೈತರಿಗೆ choice ಇದೆ. ಯಾರ ಹತ್ತಿರ ಹೋಗಬೇಕು. ಇವತ್ತು ಕೆಲವು ಸದಸ್ಯರು ಕೆಲವು ಆತಂಕಗಳನ್ನು ವ್ಯಕ್ತಪಡಿಸಿದರು. ಅಂದರೆ contract farming ನಿಂದಾದರೆ ಈ ಅನಾಹುತ ಆಗಿಬಿಡುತ್ತದೆ. ಏನಾಗುತ್ತದೆಂಬುದು ಕೂಡ ನಮಗೆ ಗೊತ್ತಾಗಬೇಕಲ್ಲವೇ? ಇವತ್ತು ರೈತನಿಗೆ ಈ ಕಾಂಟ್ರ್ಯಾಕ್ಟ್ ಫಾರ್ಮನಿಂದ ಏನು ಅನಾಹುತವಾಗುತ್ತದೆಂದು ನೀವು convince ಮಾಡಬೇಕು. ಏಕೆಂದರೆ ಇವತ್ತು ಬಹಳಷ್ಟು contract farming ಗಳು ಕೂಡ ಆಗಿವೆ. ಅದರಲ್ಲಿ ಯಾವುದೇ ರೈತನಿಗೆ choice ಇದೆ. ಅದರಲ್ಲಿ ಅವನು ಕನಿಷ್ಠ ಬೆಲೆಯನ್ನು ಕೊಟ್ಟೇ ಕೊಡುತ್ತೇವೆಂದು ಅಗ್ರಿಮೆಂಟ್ ಮಾಡಿಕೊಳ್ಳಬಹುದು. ಈಗಲೂ ಕೂಡ contract farming ನಡೆಯುತ್ತಿದೆ, ಆದರೆ ಯಾವುದು ಕಾನೂನು ಬದ್ಧವಾಗಿಲ್ಲ. ಅದರಲ್ಲಿ ರೈತನಿಗೆ ರಕ್ಷಣೆ ಇಲ್ಲ. ಈ ಬಿಲ್ಲಿನಿಂದ ಕಾನೂನು ಬದ್ಧವಾಗಿರತಕ್ಕಂಥ

ರಕ್ಷಣೆ ಸಿಗುತ್ತದೆ, ರೈತನಿಗೆ ಚಾಯ್ಸ್ ಇದೆ. ನಮ್ಮ ಅಭಿಪ್ರಾಯವೇನೆಂದರೆ ಇವತ್ತು Agriculture processing ಆಗಲಿ, Cold storages ಆಗಲಿ, ವಿಶೇಷವಾಗಿ ರೈತನಿಗೆ ನಾಲ್ಕು ಕಾಸು ಜಾಸ್ತಿ ಸಿಗಬೇಕು. Poverty alleviation ಎಂದು ಹೇಳುತ್ತೇವೆ. ದೇಶದಲ್ಲಿ Poverty alleviation ಕಾರ್ಯಕ್ರಮ ತಂದಾಗ ಇವತ್ತು ಯಾರಿಗೆ ಹೆಚ್ಚು ಹಣ ಸಿಗಬೇಕು? ಪ್ರಮುಖವಾಗಿ ದೇಶದಲ್ಲಿ ಎರಡು ವರ್ಗದ ಜನ ಇದ್ದಾರೆ. ಅವರು ರೈತರು ಮತ್ತು ಕೂಲಿಕಾರರು. ನಾವು ರೈತರ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ರೈತನ income source ನಲ್ಲಿ ಹೆಚ್ಚಳವಾಗಬೇಕು. ಅವನ standard of living ಹೆಚ್ಚಿಗೆ ಆಗಬೇಕು. ಅವನ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಸಿಗಬೇಕು ಅಂದರೆ ನಾಲ್ಕಾಸು ಅವನ ಕೈಯಲ್ಲಿ ಸಿಗಬೇಕು. ಇವತ್ತು ಅವನಿಗೆ ಚಾಯ್ಸ್ ಇದೆ. ಒಂದು ವೇಳೆ ದೊಡ್ಡ ಹೂಡಿಕೆದಾರರು ಬಂದು ಅವನ ಬಳಿ contract ಮಾಡಿಕೊಂಡು ನಾನು ಇಷ್ಟು ದರದಲ್ಲಿ purchase ಮಾಡುತ್ತೇನೆಂದರೆ ಅದರಲ್ಲಿ ತಪ್ಪೇನಿದೆ. ಅದರಲ್ಲೇನು ರೈತನು ಸಹಿ ಮಾಡಲೇಬೇಕೆಂಬ ಕಡ್ಡಾಯವೇನಿಲ್ಲ. ಇಲ್ಲವಾದರೆ ಬಿಡಬಹುದು, ಅಷ್ಟರಮಟ್ಟಿಗೆ ಸ್ವಾತಂತ್ರ್ಯ ರೈತನಿಗಿದೆ. ವಿಶೇಷವಾಗಿ ನಮಗೇನು ಬೇಕಾಗಿದೆ ನಮ್ಮ ರೈತರು ಬೆಳೆದಿರತಕ್ಕಂಥ ಪದಾರ್ಥಕ್ಕೆ ಒಳ್ಳೆಯ ಮಾರ್ಕೆಟ್ ಸಿಗಬೇಕು. ಈಗ ಯಾರಾದರೂ ಒಬ್ಬ ದೊಡ್ಡ investor ಬಂದು ನಾನು International market ನಲ್ಲಿ ಏನು ಇವತ್ತು ಅವಶ್ಯಕತೆ ಇದೆ ಅದನ್ನು ನಾನು ಮಾರ್ಕೆಟಿಂಗ್ ಮಾಡುತ್ತೇನೆ, ನೀವು ಬೆಳೆಯನ್ನು ಬೆಳೆದುಕೊಡಿ ಎಂದು ನಮ್ಮ ರಐತರ ಹತ್ತಿರ ಬಂದು ಅಗ್ರಿಮೆಂಟ್ ಮಾಡಿಕೊಂಡರೆ ತಪ್ಪೇನು? ಇವತ್ತು ನಮ್ಮ ರೈತರಿಗೆ ನಾಲ್ಕಾಸು ಜಾಸ್ತಿ ಸಿಗಬೇಕಾದರೆ ನಮ್ಮ ಕೃಷಿ ಪ್ರಧಾನವಾಗಿರತಕ್ಕಂಥ ದೇಶ. ಇಲ್ಲಿ ಇವತ್ತು ಎಲ್ಲಾ investors ಬಂದು ನಾವು international market ನಲ್ಲಿ ಈ ಪದಾರ್ಥಕ್ಕೆ ಜಾಸ್ತಿ ಸಿಗುತ್ತದೆ. We are hoping ನಾವೇನು ಇವತ್ತು ಅಪೇಕ್ಷೆ ಪಡುತ್ತೇವೆಂದರೆ ನಮಗೆ ಒಳ್ಳೆಯ ಮಾರ್ಕೆಟ್ ಸಿಗಬೇಕು. ರೈತನಿಗೆ ಸ್ವಲ್ಪ ಹಣ ಜಾಸ್ತಿ ಸಿಗಲಿ ಎನ್ನುವುದೇ ನಮ್ಮ ಮುಖ್ಯ ಉದ್ದೇಶವಾಗಿದೆ. ಅದೇ ರೀತಿ ಇವತ್ತು spot exchange ಬಗ್ಗೆ ಕೂಡ ನಮ್ಮ ಹಿರಿಯ ಸದಸ್ಯರು ಹೇಳಿದರು. Spot exchange ಇದ್ದರೆ ಖಂಡಿತವಾಗಿ ರೈತನಿಗೆ ಅದರಿಂದ ಅನುಕೂಲವಾಗುತ್ತದೆನ್ನುವುದರಲ್ಲಿ ಎರಡು ಮಾತಿಲ್ಲ. ಕೆಲವೊಂದು ಬೇಡಿಕೆಗಳ ಬಗ್ಗೆ ನಾನು ಮಾತನಾಡುವಾಗ ಇವತ್ತು ಪ್ರತಿಯೊಂದು ರೈತಮಿತ್ರ ಕೇಂದ್ರದಲ್ಲಿಯೂ internet facility ಇರಬೇಕು, ಇವತ್ತು ಯಾವ ಮಾರ್ಕೆಟ್‌ನಲ್ಲಿ ಏನು ಪ್ರೈಸ್ ಇರಬೇಕು ಎಂಬ ಮಾನಿಟರಿಂಗ್ ಮತ್ತೆ ರೈತರಿಗೆ ಅದರ ಬಗ್ಗೆ ಮಾಹಿತಿ ಕೊಡತಕ್ಕಂಥ

ಒಂದು ಕಾರ್ಯಕ್ರಮ ಇತ್ತು, ಆದರೆ ಈಗ ಆ ಕಾರ್ಯಕ್ರಮ ಇತ್ತು, ಯಾರೂ ಅದನ್ನು operate ಮಾಡುತಿಲ್ಲ. ಈ spot exchanges ಎಲ್ಲಾ ಮಾರ್ಕೆಟ್‌ನಲ್ಲಿ ಬಂದರೆ ಆಗ ಎ.ಪಿ.ಎಂ.ಸಿ. ಯಿಂದಲೇ ಮಾಡಿ ಅಥವಾ ಯಾರಾದರೂ ಬರಲಿ, ಇದರಿಂದ ರೈತನಿಗೆ ಇಡೀ ವಿಶ್ವದಲ್ಲಿ ಯಾವ ಪದಾರ್ಥಕ್ಕೆ ಏನು ಬೆಲೆ ಇದೆ, ಯಾವ ಮಾರ್ಕೆಟ್‌ನಲ್ಲಿ ಏನು ಬೇಡಿಕೆ ಇದೆ ಎನ್ನತಕ್ಕಂಥದ್ದು ಅವನಿಗೆ finger tip ನಲ್ಲಿ ಅವನಿಗೆ ಮಾರ್ಕೆಟ್‌ನಲ್ಲಿ ಸಿಗುತ್ತದೆ. ಇದರಲ್ಲಿ ಯಾವುದೇ ರೀತಿಯಾದ ಅನ್ಯಾಯ ಆಗತಕ್ಕಂಥ ಯಾವ ಸಂಭವವೂ ಕೂಡ ಇಲ್ಲ. ಅದಕ್ಕಾಗಿ ವಿಶೇಷವಾಗಿ ಇದರ ಬಗ್ಗೆ ಅವಕಾಶ ಕೊಡಬೇಕೆಂಬುದನ್ನು ಸಹ ಈ ವಿಧೇಯಕದಲ್ಲಿ ತಂದಿದ್ದಾರೆ. ಇನ್ನೊಂದು, ಎರಡು ವರ್ಷಗಳ ಹಿಂದೆ ನಾನು ಇಸ್ರೇಲ್‌ಗೆ ಕೂಡ ಹೋಗಿದ್ದೆ. ಇಸ್ರೇಲ್‌ನಲ್ಲಿ ಬಹಳಷ್ಟು ನಮಗೆ ಏನಾದರೂ ಕಲಿಯಲಿಕ್ಕೆ ಸಿಗಬಹುದು ಎಂದು ನಾನು ಹೋಗಿ ನೋಡಿದರೆ, ಅಲ್ಲಿಗಿಂತ ಇವತ್ತು ನಮ್ಮ ದೇಶದ agriculture ನಲ್ಲಿ ಇಷ್ಟೊಂದು experience, ಇಷ್ಟೊಂದು vast opportunity ಇಎ, ಇಷ್ಟು scope ಇದೆ, ನೀವು investment ಮಾಡಿದರೆ ಖಂಡಿತವಾಗಿ ನಾವು ಅಗ್ರಿಕಲ್ಚರ್‌ನಲ್ಲೇ ಇಡೀ ವಿಶ್ವದಲ್ಲಿಯೇ ಮುಂದು ಬರಬಹುದು. ಬೇರೆ ಬೇರೆ ದೇಶಗಳು ಅಪೇಕ್ಷಿಸುವ ಬೆಳೆಗಳನ್ನು ನಾವು ಬೆಳೆದುಕೊಡಬಹುದು. ಇವತ್ತು ಬೇರೆಯವರ ಕಂಪನಿಯಿಂದ ಆಮದು ಮಾಡುವುದಕ್ಕಿಂತ ನಾವೇ ಬೆಳೆದು ಕೊಡಬಹುದು. ಅಂಥ ಶಕ್ತಿ ನಮ್ಮ ದೇಶಕ್ಕಿದೆ. ಅದರ knowledge ಇದೆ, ಇವತ್ತು 65% ಜನ ಅದರಲ್ಲಿ ತೊಡಗಿದ್ದಾರೆ. ವಿಶೇಷವಾಗಿ ಬೇರೆ ಬೇರೆ ವಲಯಗಳಲ್ಲಿ ಸಾವಿರಾರು ರೂ.ಗಳನ್ನು invest ಮಾಡಿದ್ದೇವೆ. ನಮ್ಮ ಕೈಗಾರಿಕಾ ಸಚಿವರು ಸುಮಾರು 30,000–00 ಕೋಟಿ ರೂ.ಗಳು ನಮ್ಮ ರಾಜ್ಯದಲ್ಲಿ investment ಬರುತ್ತಿದೆ ಎಂಬ ಮಾಹಿತಿಯನ್ನು ಕೊಟ್ಟಿದ್ದಾರೆ, ಆದರೆ ಅದು ಎಷ್ಟು ಜನರಿಗೆ employment generation ಮಾಡುತ್ತಿದೆ ಎಂದು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಕೇವಲ ಅದು ಎರಡರಿಂದ ಐದು ಸಾವಿರ ಜನಕ್ಕೆ ಉದ್ಯೋಗ ಕೊಡುತ್ತಿದೆ. ಆದರೆ ಅದೇ ಬಂಡವಾಳ ಒಂದು ವೇಳೆ ಕೃಷಿ ಕ್ಷೇತ್ರದಲ್ಲಿ ಹೂಡಿದರೆ ಲಕ್ಷಾಂತರ ಜನರಿಗೆ ಇವತ್ತು ಉದ್ಯೋಗ ದೊರೆಯುತ್ತದೆ. ನಮ್ಮ ರಾಜ್ಯದಲ್ಲಿ ಸುಮಾರು 60ಕ್ಕಿಂತ ಹೆಚ್ಚು ಜನ ಕೃಷಿಯಲ್ಲಿ ತೊಡಗಿದ್ದಾರೆ. ಒಂದು ವೇಳೆ ಕೃಷಿ ವಲಯವನ್ನು ನಾವು improvement ಮಾಡಿದರೆ Employment ಕೂಡ generate ಆಗುತ್ತದೆ. ನೂರು ಪಟ್ಟು employment generation ಆಗುತ್ತದೆ. ಎಲ್ಲಿಯವರೆಗೆ ನಮ್ಮ agriculture growth rate improve ಆಗುವುದಿಲ್ಲವೋ ಅಲ್ಲಿಯವರೆಗೆ ನಮ್ಮ

economy growth ಆಗಲಿಕ್ಕೆ ಸಾಧ್ಯವಿಲ್ಲವೆಂಬುದನ್ನು ಕೇಂದ್ರ ಸರ್ಕಾರ ಮನಗಂಡು ಈ ಬಿಲ್ ಅನ್ನು ಅವರು insist ಮಾಡಿದ್ದಾರೆಯೇ ವಿನಃ ಇದನ್ನು ಶರದ್ ಪವಾರ್‌ರವರ, ಕೇಂದ್ರ ಸರ್ಕಾರದ ಸ್ವಂತ ಹಿತಾಸಕ್ತಿ ಇಲ್ಲ. ಇನ್ನೊಂದು ಮಾತನ್ನು ಇಲ್ಲಿ ಹೇಳಬಯಸುತ್ತೇನೆ, ಕೆಲವು ಮಾನ್ಯ ಸದಸ್ಯರು ಈ ಬಿಲ್ಲನ್ನು Joint Select Committee ಗೆ ರೆಫರ್ ಮಾಡಬೇಕೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು, ಆದರೆ ಅದರ ಅವಶ್ಯಕತೆ ಏನಿದೆ ಎಂಬುದು ನಮಗಂತೂ ಅರ್ಥವಾಗಲಿಲ್ಲ, ಇದರ ಬಗ್ಗೆ ನಮ್ಮ ಹಿರಿಯ ಕೆಲವು ನಾಯಕರೆಲ್ಲಾ ಹೇಳಿದರು. ಆದರೆ ಅದರ ಅವಶ್ಯಕತೆ ಇಲ್ಲವೆಂದು ನನಗೆ ಅನ್ನಿಸುತ್ತದೆ. ಏಕೆಂದರೆ ಇಲ್ಲಿ ಯಾವುದೇ ಒಬ್ಬ ರೈತನ ಸಮಸ್ಯೆಯ ಬಗ್ಗೆ, ರೈತನಿಗೆ ಅನುಕೂಲವಾಗತಕ್ಕಂಥ ಬಿಲ್ ನಮ್ಮ ಸದನದಲ್ಲಿ ಬಂದಾಗ ಯಾವ್ಯಾವ ಸದಸ್ಯರು ಏನೇನು ಅಭಿಪ್ರಾಯವನ್ನು ವ್ಯಕ್ತಪಡಿಸಲು ಇಚ್ಛಿಸುತ್ತಾರೋ ಅದನ್ನು ಈ ಸದನದಲ್ಲಿಯೇ ವ್ಯಕ್ತಪಡಿಸಲಿ. ಏಕೆಂದರೆ Joint Select Committee ಗೆ ಹೋದರೆ ಕೇವಲ ಕೆಲವೇ ಜನರ ಅಭಿಪ್ರಾಯಗಳು ವ್ಯಕ್ತವಾಗುತ್ತವೆ. ಇಲ್ಲಿ ಈ ಸದನದಲ್ಲಿ ಎಲ್ಲರೂ ರೈತರ ಜನಪ್ರತಿನಿಧಿಗಳಾಗಿರುವುದರಿಂದ ರೈತರ ಪರ ಅಥವಾ ರೈತರ ಪರ ಇಲ್ಲವೆನ್ನುವ ಅವರ ಅಭಿಪ್ರಾಯವನ್ನು ಸದನದಲ್ಲಿಯೇ ಹೇಳಲಿ. ಅದಕ್ಕೆ ಪ್ರತ್ಯೇಕವಾಗಿ Joint Select Committee ಗೆ ಹೋಗುವ ಅವಶ್ಯಕತೆಯಿಲ್ಲ ಎಂದು ನನಗೆ ಅನ್ನಿಸುತ್ತಿದೆ ಮಾನ್ಯ ಅಧ್ಯಕ್ಷರೇ, ಕೃಷ್ಣಾ ಭೈರೇಗೌಡರು ಅದನ್ನೇ ಹೇಳಿದರು, ಆದರೆ ಕೆಲವು amendments ಅನ್ನು ಮಾನ್ಯ ಸಚಿವರು ಗಮನಿಸಲೇಬೇಕಾಗುತ್ತದೆ. ಏಕೆಂದರೆ ಈ Licensing Authority ಅನ್ನು ನೀವೇನು ಡೈರೆಕ್ಟರ್‌ಗೆ ಕೊಟ್ಟಿದ್ದೀರಿ ಅದು ಖಂಡಿತವಾಗಿಯೂ ಸರ್ಕಾರದಲ್ಲಿರಬೇಕು. ಏಕೆಂದರೆ ಇದು ಪ್ರಜಾಪ್ರಭುತ್ವ, ಪ್ರಜಾಪ್ರಭುತ್ವದಲ್ಲಿ ಜನಪ್ರತಿನಿಧಿಗಳು ಜನರೊಂದಿಗೆ ನೇರ ಸಂಪರ್ಕದಲ್ಲಿರುವುದರಿಂದ ಜನಪ್ರತಿನಿಧಿಗಳ ನಿಯಂತ್ರಣ ಕೂಡ ಬಹಳ ಮುಖ್ಯವಾಗಿದೆ ಹಾಗಾಗಿ ಅದು ಸರ್ಕಾರದಲ್ಲಿರಬೇಕು, ಮತ್ತೊಂದು ಏನೆಂದರೆ ಮಾರ್ಕೆಟಿಂಗ್, ರೆಗ್ಯುಲೇಟಿಂಗ್ ಯಾರು ಮಾಡಬೇಕು ಎನ್ನುವುದು ಕೂಡ ಪ್ರಶ್ನೆಯಾಗಿದೆ. ಶ್ರೀ ಡಿ.ಆರ್. ಪಾಟೀಲರು ಅದಕ್ಕೆ ತಿದ್ದುಪಡಿ ಸಜೆಸ್ಟ್ ಮಾಡಿದ್ದಾರೆ. ಏನೆಂದರೆ ಯಾವುದೇ ಮಾರ್ಕೆಟ್ ಆಗಲಿ, ಪ್ರೈವೇಟ್ ಇನ್‌ವೆಸ್ಟರ್ಸ್ ಬಂದು ನಮ್ಮ ತಾಲ್ಲೂಕಿನಲ್ಲಿ ಒಂದು ವೇಳೆ ನಾಲ್ಕು ಜನ ಸೆಪರೇಟ್ ಮಾರ್ಕೆಟ್ ಅನ್ನು ಹಾಕಿದರೆ ಅದನ್ನು ಬೆಂಗಳೂರಿನಿಂದ ಅಧಿಕಾರಿಗಳು ನಿಯಂತ್ರಣ ಮಾಡಲಿಕ್ಕಾಗುವುದಿಲ್ಲ. ಅದಕ್ಕೆ ಅಲ್ಲಿರತಕ್ಕಂಥ ಎ.ಪಿ.ಎಂ.ಸಿ.ಕಾರ್ಯದರ್ಶಿ as per act ಅದನ್ನು ನಿಯಂತ್ರಣ ಮಾಡುವುದನ್ನೂ ಕೂಡ ಅಲ್ಲಿರತಕ್ಕಂಥ ಸೆಕ್ರೆಟರಿಗೆ ನೀವು ಅದನ್ನು ವಹಿಸಿಕೊಡಬೇಕೇ ವಿನಃ ಇಲ್ಲಿಂದ

ಅದನ್ನು ನಿಯಂತ್ರಣ ಮಾಡಲಿಕ್ಕಾಗುವುದಿಲ್ಲ. ಅಲ್ಲಿ ನಿಮ್ಮ APMC ಬಲಪಡಿಸಬೇಕು. ಬೇರೆಯುವರಿಗೂ ಕೂಡ ಅವಕಾಶವನ್ನು ಕೊಡಬೇಕು. Healthy competition ಇರಬೇಕು. ಹಾಗಾಗಿ ಅಲ್ಲಿನ ನಿಯಂತ್ರಣವನ್ನು ಕಾರ್ಯದರ್ಶಿಯವರಿಗೆ as per Act ಮಾಡಲಿಕ್ಕೆ ಅವಕಾಶ ಕೊಟ್ಟರೆ ಅದರಲ್ಲಿ ಯಾವುದು ತೊಂದರೆಯಿಲ್ಲವೆಂದು ನನಗೆ ಅನ್ನಿಸುತ್ತದೆ. ಹಾಗಾಗಿ ಈ ಮೂರು ಪ್ರಮುಖವಾದ amendments ಇರುವುದರಿಂದ ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಮನವಿ ಮಾಡುವುದೇನೆಂದರೆ ಈ ಬಿಲ್ ಅನ್ನು Joint Select Committee ಗೆ ಕೊಡುವ ಅವಶ್ಯಕತೆ ಇಲ್ಲ. ಈ Amendments ನೀವೇ ತಂದು ಇಂದು ಅಥವಾ ನಾಳೆಯೇ ಈ ಬಿಲ್ ಅನ್ನು ಪಾಸ್ ಮಾಡಿ ಈ ರಾಜ್ಯದ ರೈತರಿಗೆ ನಾವು ರೈತರ ಪರ ಇದ್ದೇವೆಂದು, ರೈತರ ಉನ್ನತಿಗಾಗಿ ಹೋರಾಟ ಮಾಡುತ್ತಿದ್ದೇವೆಂದು ತೋರಿಸಿಕೊಂಡ ಬೇಕಾಗುತ್ತದೆ, ಇಂಥ ಅವಕಾಶ ಬಂದಾಗ ಮತ್ತೆ ಅದನ್ನು ನಾವು ಮುಂದಕ್ಕೆ ಹಾಕಿ ರೈತರಿಗೆ ಅನ್ಯಾಯ ಮಾಡಬಾರದು, ಹಾಗಾಗಿ ಈ ಬಿಲ್ ಇವತ್ತೇ ಪಾಸ್ ಆಗಬೇಕೆಂದು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ, ಧನ್ಯವಾದಗಳು.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) :- ಮಾನ್ಯ ಅಧ್ಯಕ್ಷರೆ, ಸರ್ಕಾರ ತಂದಿರುವ APMC Bill ಅನ್ನು ನಾನು ವೈಯಕ್ತಿಕವಾಗಿ ಸ್ವಾಗತಿಸುತ್ತೇನೆ. ಇದು ಬಹಳ ಹಿಂದೆಯೇ ಆಗಬೇಕಾಗಿತ್ತು. ಹಿಂದೆ ನಾನು ಮಂತ್ರಿಯಾಗಿದ್ದಾಗ, ಈ ಕುರಿತಾದ ಮಸೂದೆಯನ್ನು ತರಬೇಕೆಂದು ಆಗಿನ APMC ಮಂತ್ರಿಗಳಿಗೆ ಬಹಳ ಒತ್ತಾಯ ಮಾಡಿದ್ದೆ. ಆದರೆ, ಅವರು ಮಸೂದೆ ತರುವಂತಹ ಪರಿಸ್ಥಿತಿಗೆ ಯಾಕೋ ಅವತ್ತು reach ಆಗಲಿಲ್ಲ. ಆದರೂ ಕೂಡ ಇವತ್ತು ಬಹಳ ಸಂತೋಷವಾಗಿದೆ. ಇವತ್ತು ನಮ್ಮ APMC ಮಂತ್ರಿಗಳು ಈ Act ಅನ್ನು ತಂದಿರುವುದಕ್ಕೆ ನಾನಂತೂ ಸ್ವಾಗತಿಸುತ್ತೇನೆ. ರೈತ ನಾನು ಬೆಳೆದಂತಹ ಬೆಳೆಗೆ ಒಳ್ಳೆಯ ಬೆಲೆ ಸಿಗಬೇಕು. ಈ ಹಿಂದೆ APMC ಯಲ್ಲಿ ಒಂದು Act ಮಾಡಿದ್ದೆವು. ಜಾಲಪ್ಪನವರು ಹಿಂದೆ ಸಹಕಾರ ಮತ್ತು APMC ಮಂತ್ರಿಗಳಾಗಿದ್ದರು. ಆಗ ಏನು ಕಮೀಷನ್ ಕೊಡಬೇಕಿತ್ತೋ, ಅದನ್ನು Commission Agent ಕೊಡಬೇಕಾಗಿತ್ತು. ಆದರೆ, ಇವತ್ತಿಗೂ ಯಾವುದೇ APMC ಗೆ ಹೋದರೂ ಕಮೀಷನ್ ಅನ್ನು ರೈತರಿಂದಲೇ ಕಲೆಕ್ಟ್ ಮಾಡುತ್ತಾರೆ. ರೈತರಿಂದ ಒಂದು ಪೈಸೆಯನ್ನೂ ತೆಗೆದುಕೊಳ್ಳಬಾರದೆಂದು APMC Act ನಲ್ಲಿ ನಿರ್ದಿಷ್ಟವಾಗಿ ಹೇಳಿದ್ದೇವೆ. ಇವತ್ತಿಗೂ ರೈತರಿಂದ ಕಮೀಷನ್ ತೆಗೆದುಕೊಳ್ಳುವ ಮೂಲಕ ಅವರನ್ನು ದರೋಡೆ ಮಾಡುವುದು ನಿಂತಿಲ್ಲ. ನಾವು

ಕಾನೂನನ್ನು ಒಳ್ಳೆಯ ಉದ್ದೇಶದಿಂದ ಮಾಡುತ್ತೇವೆ. ಆದರೆ, APMC ಯಲ್ಲಿ ಅದರ ground realities ಏನಾಗುತ್ತಿದೆ ಎಂಬುದು ನೋಡುವವರಿಗಷ್ಟೇ ಗೊತ್ತಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ :- APMC ಯಲ್ಲಿ ಎರಡೂ ಕಡೆಯಿಂದ ತೆಗೆದುಕೊಳ್ಳುತ್ತಾರೆಂದು ಹೇಳುತ್ತೀರಲ್ಲ, ಎಲ್ಲಿ APMC ಯವರು ಅದಕ್ಕೆ ಹೊಂದಾಣಿಕೆಯಾಗಿರುತ್ತಾರೋ, ಅಲ್ಲಿ ತೆಗೆದುಕೊಳ್ಳುತ್ತಾರೆ. ಉಳಿದ ಕಡೆಗಳಲ್ಲಿ ತೆಗೆದುಕೊಳ್ಳುವುದಿಲ್ಲ. ನಮ್ಮ ಕಡೆ ತೆಗೆದುಕೊಳ್ಳುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್ :- Except Bangalore, ಎರಡೂ ಕಡೆಗಳಲ್ಲಿ ತೆಗೆದುಕೊಳ್ಳುತ್ತಾರೆ. ವ್ಯಾಪಾರಸ್ಥರ ಕಡೆಯಿಂದಲೂ, ರೈತರ ಕಡೆಯಿಂದಲೂ ತೆಗೆದುಕೊಳ್ಳುತ್ತಾರೆ.

ಶ್ರೀ ಕೆ. ಶ್ರೀನಿವಾಸಗೌಡ :- ಅಧ್ಯಕ್ಷರೆ, ನಮ್ಮಲ್ಲಿ agriculture ನಿಂದ employment 66.6% ಅಂದರೆ, 115.3 ಲಕ್ಷದಷ್ಟು ಜನರಿಗೆ employment ಸಿಗುತ್ತದೆ. ಜಮೀನಿನ ಬಗ್ಗೆ ಹೇಳುವುದಾದರೆ, ಇವತ್ತು ನಮ್ಮ ರಾಜ್ಯದಲ್ಲಿ total holding ಇರುವುದು 70.79 ಲಕ್ಷ ಹೆಕ್ಟೇರುಗಳು, marginal 32.52 ಲಕ್ಷ ಹೆಕ್ಟೇರುಗಳು, Small farmers 19.09 ಲಕ್ಷ, semi medium 12.59 ಲಕ್ಷ ಇದನ್ನು ನಾನು ಹೆಕ್ಟೇರುಗಳಲ್ಲಿ ಹೇಳುತ್ತಿದ್ದೇನೆ. Medium 5.69 ಲಕ್ಷ, Large 09 ಲಕ್ಷ, ಇದು ರೈತರ average holdings. ನಮ್ಮ ರಾಜ್ಯದಲ್ಲಿ 123.07 ಹೆಕ್ಟೇರ್ ಅಂದರೆ, ಸುಮಾರು 104.1 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ನಾವು ಬಿತ್ತನೆ ಮಾಡುತ್ತೇವೆ. ಅದರಲ್ಲಿ divide ಮಾಡಿದಾಗ, ನೀವು ದೊಡ್ಡ farmers ಗೆ ಕೊಡುವುದಕ್ಕೆ 09 ಲಕ್ಷ ಹೆಕ್ಟೇರ್‌ಗಳಷ್ಟು ಮಾತ್ರ ಇರುವುದು. APMC ಗೆ ಇದು ಯಾವ ತರಹ ಹೋಗುತ್ತದೆ ಎಂಬುದಕ್ಕೆ ಹೇಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ average size of holding 1.74 ಹೆಕ್ಟೇರ್‌ಗಳು. ಈ 1.74 ಹೆಕ್ಟೇರ್‌ನಲ್ಲಿರುವ ರೈತ ಎಷ್ಟು ಬೆಳೆಯಬಹುದು? ಈ ವಾಸ್ತವಾಂಶಗಳೆಲ್ಲವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಬೆಳೆದಂತಹ ಬೆಳೆಗಳನ್ನು ನಾವು ಈ APMC ಗೆ ತೆಗೆದುಕೊಂಡು ಹೋಗುತ್ತೇವೆ. ಇದರ ಜೊತೆಗೆ, APMC Act ಗೂ ಮೊದಲೇ ಮುಂಬೈನಲ್ಲಿ NCDX (National Commodity of Derivative Exchange) ಎಂದು ಮಾಡಿದ್ದಾರೆ. ನೀವು ಹೇಗೆ money exchange ಎಂದು ಮಾಡಿದ್ದೀರಿ, ಅದೇ ರೀತಿ NCDX ಎಂದು Exchange ಮಾಡಿದ್ದಾರೆ. ವ್ಯಾಪಾರದಲ್ಲಿ ಇವತ್ತು 35,000

ಕೋಟಿ agriculture commodities ಆ CDX ನಲ್ಲಿ turn over ಇದೆ. ಅಲ್ಲಿ ಬೇರೆಯವರು ಮಾಡಬಹುದು. ಈಗ ಉದಾಹರಣೆಗೆ, ನಮ್ಮ ಹಳ್ಳಿಯಲ್ಲಿ ನಾನು ಕುರಿಗಳನ್ನು ಮೇಯಿಸುತ್ತೇನೆ. ಇವತ್ತು ನಾನು ಕುರಿಗಳನ್ನು APMC ಯಲ್ಲಿ wholesale ನಲ್ಲಿ ಮಾರಿದರೆ, ಒಂದು ಕೆ.ಜಿ.ಗೆ ಸುಮಾರು 75 ರಿಂದ 80 ರೂಪಾಯಿಗಳು ಸಿಗಬಹುದು. ನಾವೇನೂ ಕುಯ್ದು ಮಾರುವುದಿಲ್ಲ, ಹಾಗೆಯೇ ಮಾರುತ್ತೇವೆ. ಅದನ್ನು ನಾನು ಬೇರೆ ಮಾರುಕಟ್ಟೆಗೆ ನೇರವಾಗಿ ನಮ್ಮ ಊರಿನಲ್ಲಿ ಮಾರಿದರೆ, 110 ರಿಂದ 120 ರೂಪಾಯಿಗಳು ಸಿಗುತ್ತದೆ. ಇಲ್ಲಿ ಶಿಡ್ಲಘಟ್ಟದ ಶಾಸಕರಿಲ್ಲ. ಅಲ್ಲಿನ ಆನೂರಿನಲ್ಲಿ ಕುರಿ ಕೆಂಪಣ್ಣ ಒಬ್ಬನಿದ್ದಾನೆ. ಆ ಮನುಷ್ಯನಿಗೆ ಬರೀ 3 ಎಕರೆ ಜಮೀನು ಇದೆ. ಆತ ಕುರಿಗಳನ್ನು ಬಿಟ್ಟು ಇನ್ನೇನೂ ಸಾಕುವುದಿಲ್ಲ. ಈ ದೇಶದಲ್ಲಿ, ಪ್ರಪಂಚದಲ್ಲಿ ಯಾವ್ಯಾವ varieties ಕುರಿಗಳಿವೆಯೋ, ಅವೆಲ್ಲವನ್ನೂ ಆತ ಸಾಕುತ್ತಾನೆ. ಅದನ್ನು ತಂದು ನೇರವಾಗಿ ಮಾರಬೇಕಾದರೆ, APMC ಗೆ ಆತ tax ಕೊಡಬೇಕು. ಏಕೆ tax ಕೊಡಬೇಕು, ಸ್ವಾಮಿ? ಪೇಪರ್ ಮಾರುವವನು ಯಾವತ್ತಾದರೂ ನಿಮ್ಮ APMC ಗೆ tax ಕೊಟ್ಟು ಮಾರುತ್ತಾನೆಯೇ? ಅಥವಾ ಗುಂಡುಸೂಜಿ ಮಾರುವವನು APMC ಗೋ ಅಥವಾ ಇನ್ಯಾವುದಕ್ಕೋ ಕೊಟ್ಟು, sales tax ಬಿಟ್ಟು ಇನಾವುದನ್ನಾದರೂ ಮಾರುತ್ತಾನೆಯೇ? ಇದು ರೈತನ ಮೇಲೆ ಮಾಡುವಂತಹ ದಬ್ಬಾಳಿಕೆ. ರೇಷ್ಮೆಗೂಡಿಗೆ ಹಿಂದೆ ಬಹಳ ತೊಂದರೆಯಾಗುತ್ತಿದ್ದುದರಿಂದ ಅದಕ್ಕೊಂದು ಮಾರುಕಟ್ಟೆ ಸ್ಥಾಪಿಸಿ, ಆ ಮಾರುಕಟ್ಟೆ ಮೂಲಕ ಮಾರಬೇಕೆಂದಾಗ ರೈತರು ಸ್ವಲ್ಪ ನಿಟ್ಟುಸಿರು ಬಿಡುವಂತಾಯಿತು. ಅದಕ್ಕೂ ರಾಷ್ಟ್ರೀಯ ರೇಷ್ಮೆ ಮಂಡಳಿ ಈಗ ಒಂದು ಗ್ರಹಚಾರ ತಂದಿದೆ. ಅದರ ಬಗ್ಗೆ ನಾನು ಅನಂತರ ಮಾತನಾಡುತ್ತೇನೆ. ಇವತ್ತು NCDX ವರ್ಷವೊಂದಕ್ಕೆ 35,000 ಕೋಟಿ ರೂಪಾಯಿಗಳಷ್ಟು ವ್ಯಾಪಾರ ಮಾಡುತ್ತಿರುವಾಗ, ಇಡೀ ರಾಜ್ಯದಲ್ಲಿ ಒಟ್ಟು ಎಷ್ಟು APMC ಗಳಿರಬಹುದು? ಇವತ್ತು ಈ ವ್ಯಾಪಾರ ಶುರುವಾಗಿದೆ. ಇವತ್ತು commodities, ಬರೀ ಒಂದು ದೇಶದಲ್ಲಲ್ಲ, ಯಾವುದೇ ದೇಶದ ನಮ್ಮ ಗೋಡೌನ್‌ನಲ್ಲಿ ಹಾಕಿ, ಮೂರು ತಿಂಗಳಿನಲ್ಲಿ ನಾವು ಇಂತಿಷ್ಟು ಬೆಲೆ ಕೊಡುತ್ತೇವೆಂದು NCDX ನವರು declare ಮಾಡುತ್ತಾರೆ. ನಮ್ಮ ಮಹಾಮಂಡಲದಲ್ಲಿ ಆ NCDX ಮಾಹಿತಿಗಳನ್ನು ಹಾಕಿಸಿದ್ದೇನೆ. ಬೇಕಾದರೆ, ಬಂದು ನೋಡಿ. ಇದನ್ನು ಬಿಟ್ಟು, ರೈತರ ಮೇಲೆ ಗದಾಪ್ರಹಾರ ಮಾಡುವಂತಹ ಪರಿಸ್ಥಿತಿ ಏನಿತ್ತು, ಇದನ್ನು ಅನೇಕ ರಾಜ್ಯಗಳಲ್ಲಿ ಏಕೆ ತಂದರು? ಮಹಾರಾಷ್ಟ್ರದಲ್ಲಿ private players set to change Maharashtra's fortune. ಮಾನ್ಯ ಅಧ್ಯಕ್ಷರೆ, direct

marketing ನಲ್ಲಿ Reliance Fresh 1,500 ಕೋಟಿ ರೂಪಾಯಿಗಳಷ್ಟು investment ಮಾಡಿದೆ. ಅದೇ ರೀತಿ Konkan Farm Margo Cashew and kokum 1,500 ಕೋಟಿ ರೂಪಾಯಿಗಳು, ಆದಿತ್ಯ ಬಿರ್ಲಾ ಗ್ರೂಪ್‌ನವರು Horticulture ಗೆ 500 ಕೋಟಿ ರೂಪಾಯಿಗಳು, Metro Cash & Carry ಯವರು 550 ಕೋಟಿ ರೂಪಾಯಿಗಳು, ITC 200 ಕೋಟಿ ರೂಪಾಯಿಗಳು, Kargil India 100 ಕೋಟಿ ರೂಪಾಯಿಗಳು, Nasikನಲ್ಲಿರುವ Horticulture ನಲ್ಲಿ Premium Farm Dresh 110 ಕೋಟಿ ರೂಪಾಯಿಗಳು ಮತ್ತು NDDB 100 ಕೋಟಿ ರೂಪಾಯಿಗಳನ್ನು invest ಮಾಡಿದೆ. ಸ್ವಾಮಿ, agriculture ಗೆ ಸಕಾರ ತನ್ನ ಬಜೆಟ್‌ನಲ್ಲಿ ಎಷ್ಟು ಹಣ ಇಡುತ್ತದೆ ಎಂಬುದನ್ನು ನೀವೇ ಹೇಳಿ. ಅಷ್ಟು ಬಜೆಟ್ ಇಟ್ಟು, ಇವತ್ತು ಇಷ್ಟೆಲ್ಲವನ್ನೂ ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಿದೆಯೇ? ನಿಜ, ಒಂದು ಕಡೆ WTO ಬಗ್ಗೆ ಅಲ್ಲಲ್ಲಿ ನಮ್ಮ ಪ್ರತಿಭಟನೆಗಳಾದಾಗ, developing Countries ಗೆ ಇದರಿಂದ ಸ್ವಲ್ಪ ತೊಂದರೆಯಾಗುತ್ತದೆಂಬ ಮಾತುಗಳನ್ನಾಡುತ್ತಿದ್ದೇವೆ. ನಾವ್ಯಾರು ಮುಚ್ಚುಮರೆ ಇಲ್ಲದೇ ಮಾತನಾಡಬೇಕಾಗುತ್ತದೆ. ಆದರೆ ಇವತ್ತು ನಮ್ಮ ಪರಿಸ್ಥಿತಿ, ನಾನು ಬೆಳೆದ ರಾಗಿಯಾಗಲಿ, ಭತ್ತ ಆಗಲಿ, ಮಾರುವುದಕ್ಕೆ ಒಬ್ಬ ದಳ್ಳಾಳಿಯನ್ನು ಕೇಳಿ ಏಕೆ ಮಾರಾಟ ಮಾಡಬೇಕು? ನನಗಿಷ್ಟವಾಗುವಂತೆ ನನಗೆ ಒಳ್ಳೆಯ ರೇಟ್ ಕೊಡುತ್ತಾರೆಂದರೆ, ಮಾರೋಣ. ಒಬ್ಬ ದಳ್ಳಾಳಿ ಎತ್ತಿಕೊಂಡು ಹೋಗಿ ಅಲ್ಲಿಟ್ಟಾಗ ನನಗೆ voice ಇರುವುದಿಲ್ಲ. ಅಲ್ಲಿ ನನಗೆ ಒಂದು ಚೂರು voice ಇರುವುದಿಲ್ಲ. ಅವರು ಹೇಳಿದಂತಹ, ಕೂಗಿದಂತಹ ರೇಟಿಗೆ ನಾನು ಕೊಟ್ಟು ಕಣ್ಮುಚ್ಚಿಕೊಂಡು ವಾಪಸ್ಸು ಬರಬೇಕು. ಇದ್ಯಾವ ನ್ಯಾಯ ಸ್ವಾಮಿ? ಇವತ್ತು ಇದನ್ನು ಮಾರಬಾರದು. ಇದನ್ನು private ನವರಿಗೆ ಕೊಡುವ ಮೂಲಕ ರೈತರಿಗೆ ಒಳ್ಳೆಯ ರೇಟ್ ಸಿಗುವಂತೆ ಅವರ ಮೇಲೂ ಏನಾದರೊಂದು ಹಿಡಿತ ಇಟ್ಟುಕೊಳ್ಳಿ. ಅವರು cheat ಮಾಡುವಂತಹ ಪರಿಸ್ಥಿತಿಗೆ ಬಂದರೆ, ಅವರ ಮೇಲೆ ಹಿಡಿತವಿಟ್ಟುಕೊಳ್ಳುವುದು ಸರ್ಕಾರದ ಕೈಯಲ್ಲಿದೆ. ಅದೇನೂ ದೊಡ್ಡ ಕೆಲಸವಲ್ಲ. Contract farming ಬಗ್ಗೆ ಹೇಳುತ್ತಿದ್ದರು. ಸ್ವಾಮಿ, Contract farming ಎಂದರೆ, ಕೆಲವರ ಲೆಕ್ಕಾಚಾರ ಹೇಗಿದೆಯೆಂದರೆ, ಬೇರೆಯವರ ಬಗ್ಗೆ ನಾನು ಹೇಳಲಿಚ್ಛಿಸುವುದಿಲ್ಲ. National Seed Corporation (NSC) ಇದೆ. ನಾನು ಮುಸುಕಿನ ಜೋಳವೋ ಅಥವಾ Jower ಬಿತ್ತನೆ ಬೀಜಗಳನ್ನು ಬೆಳೆದುಕೊಡಬೇಕೆಂದರೆ, ಅವರಿಗೆ ನಾನು ಮೊದಲೇ agreement ಮಾಡಿಕೊಡಬೇಕು. ನನಗೆ ಇಪ್ಪತ್ತು ಎಕರೆ ಕೊಡಿ, ಇಷ್ಟು seed

ಅನ್ನು ನಾನು ತೆಗೆದುಕೊಂಡು ಹೋಗಿ, ಬಿತ್ತನೆ ಮಾಡಿ ಬೆಳೆದಂತಹ seed ಅನ್ನು ನಿಮಗೇ ವಾಪಸ್ಸು ಕೊಡುವುದಾಗಿ NSC ಯೊಂದಿಗೆ ನಾನು contract ಮಾಡಿಕೊಳ್ಳುತ್ತೇನೆ. This is called Contract Farming. ದಯವಿಟ್ಟು ಇದರ ಮೇಲೆ ಬೇರೆ ಬೇರೆ ರೀತಿಯ ಚಿಂತನೆಗಳನ್ನು ಹರಿಸಬಾರದು. ನಾನೂ contract farming ಮಾಡಿದ್ದೇನೆ. ಇವತ್ತೂ ಕೂಡ NSC ಯಿಂದ ಬಿತ್ತನೆ ಬೀಜಗಳನ್ನು ತೆಗೆದುಕೊಂಡು ಬಂದು ಬೆಳೆಯುವ ರೈತನಾಗಿರುವುದರಿಂದ ನನಗೆ ಈ ವಿಷಯ ಗೊತ್ತಿದೆ. ನನಗೆ ಇಂತಿಷ್ಟು ಬೆಲೆ ಸಿಗುತ್ತದೆಂದು ಮೊದಲೇ ನನಗೆ ಧೈರ್ಯ ಬಂದರೆ, ಇನ್ನೂ ಒಂದಿಷ್ಟು ಎಕರೆಯಲ್ಲಿ ಬೆಳೆಯುತ್ತೇನೆ. ಅದರಲ್ಲಿ ತಪ್ಪೇನಿದೆ? ಅದು contract farming 'ಓಹೋ, ಜಮೀನು ಹೋಗಿಬಿಡುತ್ತದೆ, ಜಮೀನಿಗೆ ಪಹಣಿ ಬರೆಯುತ್ತಾರೆ' ಎಂದರೆ, ಇವೆಲ್ಲವೂ ground realities ಇಲ್ಲದೇ ಮಾತನಾಡುವಂತಹ ವ್ಯವಹಾರವೇ ವಿನಾ ನೇರವಾಗಿ ಒಬ್ಬ ರೈತನಿಗೆ ತೊಂದರೆಯಾಗುವಂತಹ ಪರಿಸ್ಥಿತಿಯಿಂದ ನಾವು, ಸರ್ಕಾರ ಕಾಪಾಡಬೇಕಾಗುತ್ತದೆ. ಒಂದೇ ಒಂದು ವಿಚಾರ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಸರ್ಕಾರದ ಯಾವುದೇ ಬಂಡವಾಳವಿಲ್ಲದೇ ಚಿಕ್ಕ ಸೌತೇಕಾಯಿ (Gherkin) ಯನ್ನು ನಮ್ಮ ರಾಜ್ಯದಲ್ಲಿರುವ 39,178 ಎಕರೆಗಳಲ್ಲಿ ಬೆಳೆಯುತ್ತಿದ್ದೇವೆ. ನಿನ್ನೆ ಯಾರೋ ಇದರ ಬಗ್ಗೆಯೂ ಮಾತನಾಡಿದರು. Number of farmers contracted. ಇದು Contract ಗೆ Farming. 41,606 ಜನ ರೈತರು ಬೆಳೆಯುತ್ತಾರೆ. Annual Turn Over 22,503.20 ಲಕ್ಷ. ಯಾವ ಸರ್ಕಾರದ ಕಂಪನಿ ಇದನ್ನು ಮಾಡುತ್ತಿದೆ? ಅವರು ನನ್ನ ಕ್ಷೇತ್ರದಲ್ಲಿ ಎಷ್ಟು ಜನರನ್ನು ಚೀಟ್ ಮಾಡಿದ್ದಾರೆ, ಚಿಕ್ಕನಾಯಕನಹಳ್ಳಿಗೆ ಹೋದರೆ, ಸಿರಾಕ್ಕೆ ಬನ್ನಿ ಎಂದು ಎಷ್ಟು ಜನರಿಗೆ ಹೇಳಿ ಕಳುಹಿಸುತ್ತಾರೆ, ಸಿರಾಕ್ಕೆ ಬಂದರೆ, ಮಧುಗಿರಿಗೆ ಬಾ ಎಂದು ಎಷ್ಟು ಕಡೆ ಹೇಳಿ ಕಳುಹಿಸುತ್ತಾರೆ, ಇವನ್ನೆಲೆಲ್ಲಾ ಒಂದು ರೌಂಡ್ ಕರೆದುಕೊಂಡು ಹೋಗಿ ತೋರಿಸಿಕೊಂಡು ಬರುತ್ತೇನೆ. Ground reality ಯಾರಿಗೆ ಗೊತ್ತಿದೆ ಯಾರಿಗೆ ಗೊತ್ತಿಲ್ಲ ಎಂಬುದನ್ನು ದಯಮಾಡಿ ಬಂದು ನೋಡಬೇಕು. ಶ್ರೀ ಶ್ರೀನಿವಾಸಗೌಡರು ಯಾವ ಮಟ್ಟದ ರೈತರು ಎಂಬುದು ನಮಗೆ ಗೊತ್ತು. ಇಫ್ಕೊ, ಕ್ರಿಫ್ಕೊ, ಈ ರಾಜ್ಯದ ರೈತರ ಸಮಸ್ಯೆಯನ್ನು ಬಗೆಹರಿಸಿದ್ದರೆ, ನಾವು ಇಲ್ಲಿ ಇಷ್ಟುದ್ದ ಭಾಷಣ ಕೇಳುವ ಅಗತ್ಯತೆ ಇರಲಿಲ್ಲ. ದಯಮಾಡಿ ನೀವು ನಮ್ಮ ಜೊತೆ ಬನ್ನಿ.

ಶ್ರೀ ಕೆ. ಶ್ರೀನಿವಾಸಗೌಡ :- ನಾನು ಇಫ್ಕೊ, ಕ್ರಿಫ್ಕೋ ಎಲ್ಲಾ ಕಡೆ ಕೆಲಸ ಮಾಡಿದ್ದರಿಂದಲೇ ಇಷ್ಟೆಲ್ಲಾ ನಿಮಗೆ ಹೇಳಲು ಆಗಿದ್ದು, ಇಲ್ಲದಿದ್ದರೆ ನೀವು ಇಷ್ಟು

ಮಾಹಿತಿಯನ್ನು ಕೊಡಲು ಆಗುತ್ತಿರಲಿಲ್ಲ. ನೀವು ಹೇಳಿದ್ದನ್ನು ನೀವು ಹೇಳಿದ್ದೀರಿ. ನಾನು ಹೇಳುವುದನ್ನು ಹೇಳಬೇಕಾಗುತ್ತದೆ. ನಮ್ಮ Ground realities ಏನು ಎಂಬುದು ಇವರಿಗೆ ಅರ್ಥವಾಗಬೇಕು ಎಂಬ ಉದ್ದೇಶದಿಂದಲೇ ನಾನು ಹೇಳಿದ್ದು. ಇವತ್ತು ಎಪಿಎಂಸಿ ಯಲ್ಲಿ ನಾವು ಬೆಳೆದ ಯಾವುದೇ ಧಾನ್ಯ ಇರಬಹುದು, ಪದಾರ್ಥಗಳಾಗಬಹುದು ಅವುಗಳ ಮೇಲೆ ಹಿಡಿತ ಇರಬಾರದು. ರೈತರಿಗೆ ಹತ್ತು ರೂಪಾಯಿ ಜಾಸ್ತಿ ಸಿಗುವುದಾಗಿದ್ದರೆ ಮಾರುವಂಥ ಶಕ್ತಿ ಬರಬೇಕೇ ವಿನಹ ಬೇರೆ ಆಗಬಾರದು ಎಂಬುದೇ ನನ್ನ ಮೂಲ ಉದ್ದೇಶ. ಇಂಥ ಒಳ್ಳೆಯ ಆ್ಯಕ್ಟ್‌ನ್ನು ಬೇರೆ ಬೇರೆ ರೀತಿಯಲ್ಲಿ ತಿರುಚಿ ಮಾತನಾಡುವುದು ಸರಿಯಲ್ಲ. ಆದ್ದರಿಂದ ಇದು ಜಂಟಿ ಸದನದ ಸಮಿತಿಗೂ ಹೋಗಬೇಕಾಗಿಲ್ಲ. ಇವತ್ತು ನಮ್ಮ ಕರ್ನಾಟಕದಿಂದ ಸುಮಾರು 62,639 ಕೋಟಿ ರೂಪಾಯಿ ಮೌಲ್ಯದ exports ಇದೆ. ಯಾವ ಸರ್ಕಾರದ ಇಲಾಖೆಯುವರು ಇದನ್ನು ಮಾಡುತ್ತಾರೆ? ಇದೆಲ್ಲ ರೈತರು ಬೆಳೆಯದಂಥಲ್ಲವೇ? ಅದು ರೈತರು ಬೆಳೆದಂಥ ಹಣ್ಣು, ತರಕಾರಿ, ಬೆಳೆಗಳು, ಸಕ್ಕರೆ ಇರಬಹುದು. ನಾನು ಕೃಷಿ ಇಲಾಖೆಯ ಬಗ್ಗೆ ಮಾತನಾಡುವಾಗ ಇದರ ಬಗ್ಗೆ ಇನ್ನಷ್ಟು ಬೆಳಕನ್ನು ಚೆಲ್ಲುತ್ತೇನೆ. ಇವತ್ತು share of agricultural exports 4.53% ಇದೆ. ನಾನು ಯಾವುದೂ ಮಾಹಿತಿ ಇಲ್ಲದೇ ಮಾತನಾಡುವುದಿಲ್ಲ. ನನ್ನ ಹತ್ತಿರ ಎಲ್ಲಾ ಮಾಹಿತಿ ಇದ್ದರೆ ಮಾತ್ರ ಮಾತನಾಡುತ್ತೇನೆ. ನಾನು ಎರಡು ವರ್ಷದ ಹಿಂದೆ ಬ್ರೆಜಿಲ್ ದೇಶಕ್ಕ ಹೋಗಿದ್ದೆ. ನಾವೂ ಕೂಡ ಉತ್ತಮವಾದ ಕಾಫಿಯನ್ನು ಬೆಳೆಯುತ್ತೇವೆ. ಆದರೆ ನಮ್ಮ Air port ನಲ್ಲಿ ಎಲ್ಲಿಯೂ ಕೂಡ ಕಾಫಿಪೌಡರ್‌ಅನ್ನು ಮಾರಾಟ ಮಾಡಲು ಅವಕಾಶ ಇರುವುದನ್ನು ನಾನು ನೋಡಿಲ್ಲ. ಬ್ರೆಜಿಲ್‌ಗೆ ನಮ್ಮ ಜೊತೆ ಭಾರತದಿಂದ ಬಂದಿದ್ದ ನಮ್ಮ ಅಧಿಕಾರಿಗಳು ಸಹ ಅಲ್ಲಿನ Air port ಕಾಫಿ ಪುಡಿಯನ್ನು ಕೊಂಡುಕೊಂಡರು. ಆದರೆ ನಮ್ಮ ದೇಶದಲ್ಲಿ ಅತೀ ಹೆಚ್ಚಾಗಿ ಕಾಫಿಯನ್ನು ಬೆಳೆಯುತ್ತಿದ್ದರೂ ನಮ್ಮಲ್ಲಿ ಆ ರೀತಿ ಆಕರ್ಷಣೆ ಮಾಡಿ ಮಾರಾಟ ಮಾಡುವ ವ್ಯವಸ್ಥೆ ಇಲ್ಲ. ರೈತರಿಗೆ ನಾಲ್ಕು ಕಾಸು ಎಲ್ಲೇ ಸಿಕ್ಕಲಿ ಅವನಿಗೆ ಸಹಕಾರ ಸಹಾಯ ಮಾಡಬೇಕಾಗಿದ ಜವಾಬ್ದಾರಿ ಸರ್ಕಾರದ ಮೇಲಿದೆ. ಆ ಸರ್ಕಾರ ಈ ಸರ್ಕಾರವೆಂದು ನಾನು ಹೇಳಲು ಇಷ್ಟಪಡುವುದಿಲ್ಲ. ಇನ್ನೂ ಬೇರೆ ಸದಸ್ಯರು ಮಾತನಾಡಬೇಕೆಂದು ಇದ್ದಾರೆ. ಇವತ್ತೇ ಈ ಬಿಲ್ಲು ಆಗಬೇಕು. ಇದು ಯಾವುದೇ selection committee ಗೆ ಹೋಗಬೇಕಾಗಿಲ್ಲ. Joint Select Committee ಗೆ ಹೋಗಬೇಕಾಗಿಲ್ಲ. ಇದನ್ನು ನೀವು ಒಪ್ಪಿ ಇವತ್ತೇ pass ಮಾಡಿಕೊಡಲು ನಾವಂತೂ ಸಿದ್ಧರಾಗಿದ್ದೇವೆ. ದಯವಿಟ್ಟು ಇದನ್ನು

ಪಾಸ್ ಮಾಡಿಕೊಡಬೇಕು. ಇದರ ಬಗ್ಗೆ agriculture ಮೇಲೆ ಮಾತನಾಡುವಾಗ ಹೆಚ್ಚು ಮಾತನಾಡುತ್ತೇವೆ. ಆದ್ದರಿಂದ ನಾನು ಹೆಚ್ಚು ಮಾತನಾಡದೇ ಇಂಥ ಒಳ್ಳೆಯ ಬಿಲ್ಲನೇನು ತಂದಿದ್ದೀರಿ ಅದರಲ್ಲಿ ಕೆಲವು ಹಿಡಿತಗಳು ಬೇಕಾಗುತ್ತದೆ. ಮಾಧುಸ್ವಾಮಿಯವರು ಹೇಳಿದರು, ಎಲ್ಲಾದರೂ ಆ ರೀತಿ ಚೀಟ್ ಮಾಡುವಂಥ ಪರಿಸ್ಥಿತಿ ಕ್ರಿಯೇಟ್ ಆದರೆ ಅವರ ಮೇಲೆ ಹಿಡಿತ ಇಟ್ಟುಕೊಟ್ಟಲು ಒಂದು ಆ್ಯಕ್ಟ್‌ನ್ನು ತನ್ನಿ. ಏಕೆಂದರೆ ಎಲ್ಲಾ ಮಾಡಿದ್ದೇವೆ ಸರ್ಕಾರದ್ದು ಏನೂ ಇಲ್ಲ ಎಂದು ಕೈತೊಳೆದುಕೊಳ್ಳುವುದನ್ನು ನಾನೂ ಒಪ್ಪುವುದಿಲ್ಲ. ಅದಕ್ಕೆ ಒಂದು ಅಮೆಂಡ್ ಮಾಡಿ ನೀವು ಇದನ್ನು ನೇರವಾಗಿ ಒಪ್ಪಿಕೊಳ್ಳಬೇಕಾಗಿದೆ. ನನಗೆ ಈಗ ತಾನೇ ಒಂದು ವಿಚಾರ ಗೊತ್ತಾಯಿತು. ಇದೇ ಆ್ಯಕ್ಟ್‌ನ್ನು ಬೇರೆ ರಾಜ್ಯದವರು ಕಾಪಿ ಮಾಡಿದ್ದಾರೆ ಎಂದು ಅಧಿಕಾರಿಯೊಬ್ಬರು ನನಗೆ ಹೇಳಿದರು. ಈ act ನ್ನು ನಾವು ಮೊದಲೇ ತರಬೇಕಾಗಿತ್ತು. ನಿಧಾನವಾಗಿಯಾದರೂ ತಂದಿದ್ದೀರಿ, ಒಳ್ಳೆಯ APMC Act ನ್ನು ತಂದಿದ್ದೀರಿ. ಈ private ರವರ ಮೇಲೆ ಯಾವುದೋ ಒಂದು ವಿಧವಾದ ಹಿಡಿತ ಇರುವ ಬಗ್ಗೆ ಇದನ್ನು ಅಮೆಂಡ್‌ಮೆಂಟ್ ಮಾಡಬೇಕು. ಚೀಟ್ ಮಾಡುವುದಾಗಲಿ, ರೈತರಿಗೆ ಮೋಸ ಮಾಡುವುದಾಗಲಿ, ರೈತರಿಂದ ತೆಗೆದುಕೊಂಡು ಅವರಿಗೆ ಹಣವನ್ನು ಕೊಡದೇ ಇರುವುದಾಗಲಿ ಇಂಥದ್ದರ ಮೇಲೆ ಯಾವುದಾದರು ಒಂದು ಹಿಡಿತವನ್ನು ಇಟ್ಟುಕೊಂಡು ಈ ಬಿಲ್ಲನ್ನು ಇವತ್ತೇ ಪಾಸ್ ಮಾಡಿಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಡಿ.ಆರ್. ಪಾಟೀಲ್ (ಗದಗ) :- ಮಾನ್ಯ ಅಧ್ಯಕ್ಷರೆ, ನಾನು ಅವರು ತಂದಂಥ ಬಿಲ್ಲಿಗೆ 12 ನೇ ಅಮೆಂಡ್‌ಮೆಂಟ್‌ಗಳನ್ನು suggest ಮಾಡಿದ್ದೇನೆ. ಅದರಲ್ಲಿ ಕೆಲವನ್ನು ಸರ್ಕಾರ ಒಪ್ಪಿಕೊಂಡಿದೆ. ಕೆಲವನ್ನು ಒಪ್ಪಿಲ್ಲ. ಅವುಗಳ ಬಗ್ಗೆಯೂ ಅವರಿಂದ ಪ್ರತಿಕ್ರಿಯೆಯನ್ನು ಅಪೇಕ್ಷಿಸಿ ನನ್ನ ಮಾತನ್ನು ಹೇಳುತ್ತಿದ್ದೇನೆ. ನಿನ್ನೆ ನಮ್ಮ ಖರ್ಗೆ ಸಾಹೇಬರು ಪ್ರಶ್ನೆ ಎತ್ತಿದಾಗ 'Agriculturist definition ಈಗ Act ನಲ್ಲಿ ಏನಿದೆ ಅದನ್ನೇ ಇಡಬೇಕು. ನೀವು amendment ತಂದಿದ್ದನ್ನು ತರಬಾರದು ಎಂದು ಹೇಳಿದ್ದರು. ಅದಕ್ಕೆ ತಾವು ಒಪ್ಪಿದ್ದಿರಿ. ಆದರೆ ನಿಮ್ಮ official amendment ಇನ್ನೂ ಬರಲೇ ಇಲ್ಲ. official amendment ಬಂದರೆ ಆ process complete ಆಗುತ್ತದೆ. ದಯವಿಟ್ಟು ಆ amendment ತರುವ ಬಗ್ಗೆ ಕೂಡಲೇ ವ್ಯವಸ್ಥೆ ಮಾಡಬೇಕು. ನಾವು ಏನು amendment ತರುತ್ತೇವೆ ಇದರ consequences ಏನೇನಾಗುತ್ತದೋ ಎಂಬ ಬಗ್ಗೆ ಯಾರಿಗೂ ಕಲ್ಪನೆ ಇಲ್ಲದಂತೆಯೇ ತಂದುಬಿಡುತ್ತೇವೆ. ಈಗ ನೀವು 'Agriculturist'

definition ನ್ನು change ಮಾಡಿದಿರಿ. ಈ change ಮಾಡಿದ difinition ಪ್ರಕಾರ ಎಪಿಎಂಸಿ Chairman, Vice Chairman ಬೇಕಾದವರು ಆಗಬಹುದು. ನೀವು change ಮಾಡಿದ್ದರಿಂದ ಅಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈಗ change ಮಾಡುವುದಿಲ್ಲವೆಂದು ಹೇಳಿದ್ದೀರಿ. ರೈತರೇ ಅಲ್ಲಿ ಅಧ್ಯಕ್ಷರಾಗಿರುವಂಥ ವ್ಯವಸ್ಥೆ ಮುಂದುವರೆಯುತ್ತದೆ. ತಮಗೆ ಗೊತ್ತಿರಬಹುದು. ಮೊದಲು ವ್ಯಾಪಾರಸ್ಥರು, ದಲಾಲರು ಮೂರು ಮಂದಿ ಇರುತ್ತಿದ್ದರು. ಏಳು ಮಂದಿ ರೈತ ಪ್ರತಿನಿಧಿಗಳು ಇರುತ್ತಿದ್ದರು. ನಮ್ಮನ್ನು divide ಮಾಡಿ ಅವರೇ control ಮಾಡುತ್ತಿದ್ದರು. ಇದು ಬದಲಾಗಬೇಕು ಎಂಬ ದೃಷ್ಟಿಯಿಂದ ಮೂರು ಮಂದಿ agricultural ಪ್ರತಿನಿಧಿಗಳನ್ನು ಹನ್ನೊಂದು ಮಂದಿ ಮಾಡಿದರು. ಹನ್ನೊಂದು ಮಂದಿ ಇದ್ದರೂ divede ಮಾಡುವುದರಲ್ಲಿ ಅವರು ಭಾರಿ ಯಶಸ್ವಿಯಾಗುತ್ತಾರೆಂದು ಅವರನ್ನು ಮತ್ತೆ ಒಬ್ಬರನ್ನೇ ಇಟ್ಟರಿ. ಈಗ ಅವರು ನಿಷ್ಕ್ರಿಯರಾಗಿದ್ದಾರೆ. ಅವರೇನು ಅಷ್ಟು influence ಮಾಡಲು ಆಗುವುದಿಲ್ಲ. ಒಬ್ಬರೇ ಇರುವುದರಿಂದ ಅವರು influence ಮಾಡಲು ಆಗುವುದಿಲ್ಲ. ಬಹಳ ಕಡೆ ವ್ಯಾಪಾರಸ್ಥರ control ನಲ್ಲಿ ಇಲ್ಲದಂಥ ರೈತರೇ ಇವತ್ತು ಎಪಿಎಂಸಿ control ಮಾಡುವಂಥ ವ್ಯವಸ್ಥೆ ಇದೆ. ಆದ್ದರಿಂದ ದಯವಿಟ್ಟು ಕೂಡಲೇ ಅದನ್ನು delete ಮಾಡಬೇಕು. ನಿಮ್ಮ official amendment ಅನ್ನು ಕಳುಹಿಸಿಕೊಡಬೇಕು. ಈಗ clause 8 'immediately' ಎನ್ನವುದರ ಬದಲು 'within two days' ಎಂದು ಹೇಳಿದ್ದೆವು. ತಾವು 'within two working days' ಎಂದು ಹೇಳಿದ್ದೀರಿ. That is acceptable. Clause 12 ರಲ್ಲಿ Private market yard ನಲ್ಲಿ producers, sellers ಸಹ ಅವರ market yard ನ್ನು ಉಪಯೋಗ ಮಾಡಲು ಅವರಿಗೆ ಏನಾದರೂ fees ಕೊಡಬೇಕು ಎಂದು ತಮ್ಮ ಅಮೆಂಡ್‌ಮೆಂಟ್‌ನಲ್ಲಿದೆ. ರೈತರು ಅವರ market yard ನ್ನು ಉಪಯೋಗ ಮಾಡಲು fees ನ್ನು ಕೊಡಬೇಕು ಎಂದರೆ ಹೇಗೆ? ದಯವಿಟ್ಟು ಅದನ್ನು ನೀವು drop ಮಾಡಿ. Producers and sellers shall be omitted. Section 64 A. ಇದನ್ನು ಒಪ್ಪುತ್ತೀರಲ್ಲಾ? ಮಾನ್ಯ ಸಚಿವರೆ ನೀವು ಇಲ್ಲಿ ಒಪ್ಪುತ್ತೇನೆ ಎಂದರೆ ಮಾತ್ರ ರೆಕಾರ್ಡ್ ಆಗುತ್ತದೆ. ಅನಂತರ revolving fund ನ ಸಲುವಾಗಿ Section 64 B. ಇದೆ. Revolving Fund ನಲ್ಲಿ Director, Agricultural Marketing ಎಂದು ಹೇಳಿ ಅವರು operative ಮಾಡುವಂತೆ ನೀವು ಮಾಡಿದ್ದೀರಿ. ಈಗ ಇದ್ದ ವ್ಯವಸ್ಥೆಯೊಳಗೆ M.D. Karnataka Agricultural Marketing Board ನವರು ಮಾಡುತ್ತಾರೆ.

ಇಷ್ಟು ವ್ಯವಸ್ಥೆ ಇದ್ದರೂ ಸಹ indirect ಆಗಿ ಮತ್ತೆ ರಾಜ್ಯ ಸರ್ಕಾರ ಅದನ್ನು control ಮಾಡಿ ಆ payment release ಆಗಬೇಕಾದರೆ ತಿಂಗಳಗಟ್ಟಲೆ ಆಗುತ್ತದೆ. ನೀವು ಅದನ್ನು ಕಾನೂನಿನಲ್ಲೇ ಮಾಡಿಬಿಟ್ಟರೆ ಮುಗಿದೇ ಹೋಯಿತು. ಆದ್ದರಿಂದ Director, Agricultural Marketing ಎನ್ನುವುದರ ಬದಲಾಗಿ M.D. Karnataka Agricultural Marketing Board ಎಂದು ಮಾಡಿ. He will be under the control of elected representatives. ದಯವಿಟ್ಟು M.D. Karnataka Agricultural Marketing Board ಎನ್ನುವ ಅಮೆಂಡ್‌ಮೆಂಟ್‌ನ್ನು accept ಮಾಡಬೇಕು. ಅದಕ್ಕೆ ಸಚಿವರೇ ಚೇರ್‌ಮನ್. ಅನಂತರ Clause 14,in section 72A , 72C, 72E ನಲ್ಲಿ with prior concurrence of concerned Agricultural Produce Market Committee ಎಂದು ನಾವು ಹೇಳಿದ್ದೇವೆ. ಈಗ ನೀವು private market yard ನಲ್ಲಿ license ಮಾಡಲು ಅಧಿಕಾರವನ್ನು ಸರ್ಕಾರದಲ್ಲಿ ಇಟ್ಟುಕೊಳ್ಳಿ ಎಂಬುದಕ್ಕೆ ನಾವು ಒಪ್ಪಿದ್ದೇವೆ. ಆದರೆ ಆ private market yard ನಲ್ಲಿ ಯಾವ ದಲಾಲರು, ವ್ಯಾಪಾರಸ್ಥರು ಕೆಲಸ ಮಾಡುತ್ತಾರೆ. ಅವರಿಗೆ license ಕೊಡಲೂ ನೀವು ತಂದಿರುವ ಬಿಲ್ಲಿನಲ್ಲಿ, Director ಗೆ ಅಧಿಕಾರವನ್ನು ಕೊಟ್ಟಿದ್ದೀರಿ. ಬೆಂಗಳೂರಿನಿಂದಲೇ ಅವರಿಗೆ license ಕೊಡುವುದು ಏಕೆ? ನೀವು ಎಪಿಎಂಸಿ ರೋಲ್ ಏನು ಎಂಬುದನ್ನೇ ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. APMC is a Regulating Authority. ಇಲ್ಲಿಯವರೆಗೆ ನೀವು private market establish ಮಾಡಲು ಅವಕಾಶ ಮಾಡುತ್ತಿದ್ದರು. ಇನ್ನು ಮೇಲೆ ನಾವು market yard ನ್ನು establish ಮಾಡುವಂಥ ಅಧಿಕಾರ ಅವರಿಗೇ ಇರಬೇಕು. ಎಪಿಎಂಸಿ ರೈತರಿಂದ ಆಯ್ಕೆಯಾದಂಥ, ರೈತ ಪ್ರತಿನಿಧಿಗಳನ್ನು ಒಳಗೊಂಡಿರುವಂಥ ಒಂದು ವ್ಯವಸ್ಥೆ. ಆ Regulating Authority ಯ ರೋಲ್ private market ನಲ್ಲಿ ಇರಬಾರದು ಎಂದು ನೀವು ಮಾಡುವುದಾದರೆ ನಾಳೆ ಹುಲಿಕೋಟೆಯಲ್ಲಿ ನಾನೇ ಒಂದು private market yardನ್ನು ಮಾಡುತ್ತೇನೆ. ಅದಕ್ಕೇನು ರಿಲಾಯನ್ಸ್, Multi-National ನವರೇ ಬರಬೇಕೆಂದು ಇಲ್ಲ. D.R.Patil can also do under your Act. ನಾನು ಅದನ್ನು ಮಾಡುತ್ತೇನೆ. ಆಗ ನಿಮ್ಮ ಕಾನೂನು ಏನು apply ಆಗುವುದೇ ಇಲ್ಲ. ಗದಗಿನ market ನಲ್ಲಿ ಕಾನೂನು apply ಆಗುತ್ತದೆ. ಆಗ ಆ ದಲ್ಲಾಲರು, ವ್ಯಾಪಾರಸ್ಥರು ಇಲ್ಲಿಗೆ ಬರುತ್ತಾರೆ, ಅವರು ಅಲ್ಲಿ ಏಕೆ ಇರುತ್ತಾರೆ? ಇಷ್ಟು ಹಣ ಖರ್ಚು ಮಾಡಿ ನಾವು ಅಲ್ಲಿ ಒಂದು market yard ಅನ್ನು establish ಮಾಡಿ

ಅಲ್ಲೂ ಇಲ್ಲೂ level playing field ಇದ್ದರೆ ಅಡ್ಡಿ ಇಲ್ಲ. ನೀವು ಇವರಿಗೆ ಎಲ್ಲಾ free ಬಿಡುವುದು, ಅವರಿಗೆ ಎಲ್ಲಾ control ಇಡುವುದು ಎಂದರೆ ಹೇಗೆ ಆಗುತ್ತದೆ? ದಯವಿಟ್ಟು ಅಲ್ಲೂ ಸಹ market area ನಲ್ಲಿ APMC be the Regulating Authority. Not any individual officer. APMC is also headed by your Secretary who is controlled by Director, Agriculture Marketing and the Government. ಅಲ್ಲಿನ Chief Executive Government representative ಆಗಿರುತ್ತಾರೆ. ಆದ್ದರಿಂದ ಅದನ್ನು ತಾವು ಒಪ್ಪುತ್ತೀರಿ ಎಂದು ತಿಳಿದಿರುತ್ತೇನೆ. ನೀವು ಒಪ್ಪುವುದಿಲ್ಲವೆಂದರೆ ಇನ್ನಷ್ಟು ಹೇಳುತ್ತೇನೆ. ತಾವು ಇದನ್ನು ಒಪ್ಪಿದರೆ ಇದರಲ್ಲಿ ಏನೂ ತೊಂದರೆ ಇಲ್ಲ. Market yard establish ಮಾಡಲು ಸರ್ಕಾರದಲ್ಲಿ ಅಧಿಕಾರ ಇರಲಿ. ಆ Market yard ನಲ್ಲಿ ಯಾರ್‍ಯಾರು ಕೆಲಸ ಮಾಡುತ್ತಾರೆ including hamals ಅವರಿಗೆ ಲೈಸೆನ್ಸ್ ಕೊಡಲು concerned APMC ಗೆ ಅಧಿಕಾರ ಇರಲಿ ಎಂದು ನಾನು ಹೇಳುತ್ತಿದ್ದೇನೆ.

(4–30 ಗಂಟೆ)

ಶ್ರೀ ಶರಣಬಸಪ್ಪ ದರ್ಶನಾಪುರ :– Private Market Yard ಮಾಡಲಿಕ್ಕೆ ಇವತ್ತು ಸರ್ಕಾರ permission ಕೊಡುತ್ತಿದೆ. In turn ಅಲ್ಲಿಂಯೇ registration ಮಾಡುತ್ತಾರೆ. Private Market Yard ಮಾಡಲಿಕ್ಕೆ Government ನಿಂದ permission ತೆಗೆದುಕೊಂಡಿರುವವರೇ ಅಲ್ಲಿ registration ಮಾಡಲಿಕ್ಕೆ permission ಕೊಡುತ್ತಾರೆ. Registration ಅನ್ನು ಅವರು ಅಲ್ಲಿಯೇ ಮಾಡಿಕೊಳ್ಳುತ್ತಾರೆ.

ಶ್ರೀ ಡಿ.ಆರ್. ಪಾಟೀಲ್ :– ಅವರು Registration ಮಾಡುತ್ತಾರೆ ಸರಿ. ಆದರೆ ಆ private market yard ನೊಳಗೆ ಕೆಲಸ ಮಾಡುವ ದಲ್ಲಾಲರು, ವ್ಯಾಪಾರಸ್ಥರು, ಹಮಾಲರು. weighmen ಅವರಿಗೆಲ್ಲಾ ಲೈಸೆನ್ಸ್ ಕೊಡುವವರು ಯಾರು? ಈಗ Director of Agricultural Marketing ನವರು license ಕೊಡಬೇಕೆಂದು ನಿಮ್ಮ ಬಿಲ್‌ನಲ್ಲಿ ಪ್ರಾವಿಷನ್ ಇದೆ. ಅವರೆಲ್ಲಾ ಬೆಂಗಳೂರಿಗೆ ಬಂದು ಅರ್ಜಿ ಕೊಟ್ಟು ಲೈಸೆನ್ಸ್ ತೆಗೆದುಕೊಳ್ಳಬೇಕಾಗಿದೆ. ಇದನ್ನು ನೀವು ಏಕೆ ಇಟ್ಟುಕೊಳ್ಳುತ್ತೀರಿ? Why do you want to reduce the role of APMC which are constituted by elected representatives of the

farmers? ಯಾರ ಹಿತರಕ್ಷಣೆ ಸಲುವಾಗಿ ನಾವು ಈ ಎಲ್ಲಾ ವ್ಯವಸ್ಥೆಯನ್ನು ಮಾಡುತ್ತಿದ್ದೇವೋ, ಆ representative ಗೆ ನೀವು ಅವಕಾಶ ಕೊಡಿ. ಅವರನ್ನು ಕೇಳುವುದಕ್ಕೆ ಹೋಗಬೇಡಿ. ದಯವಿಟ್ಟು role of the APMC ಬಗ್ಗೆ ನಮಗೆ clearity ಇರಲಿ. It's a Regulating Authority. Regulating Authority fot the agriclultural marketing activity. ಇಲ್ಲಿಯವರೆಗೆ ಪ್ರೈವೆಟ್‌ನವರಿಗೆ ಯಾರಿಗೂ market yard establish ಮಾಡುವುದಕ್ಕೆ ಅವಕಾಶ ಇರಲಿಲ್ಲವಾದ್ದರಿಂದ, ಎಪಿಎಂಸಿದ್ದು market yard establish ಮಾಡಿವೆ. ಅದರ role ಅನ್ನು ನಾವು clear ಆಗಿ ಇಟ್ಟುಕೊಂಡೆವು ಎನ್ನುವುದಾದರೆ, ನೂರಾರು private market yards ಬಂದರೂ ನಮಗೇನೂ ಚಿಂತೆ ಇಲ್ಲ. competition ಆದಮೇಲೆ, ಎಷ್ಟು competition ಜಾಸ್ತಿ ಆಗುತ್ತದೋ, ಅಷ್ಟು ಅದರ ಉಪಯೋಗ ಮಾಡಿಕೊಳ್ಳುವಂತಹ ರೈತನಿಗೆ ಅದರಿಂದ ಲಾಭ ಆಗೇ ಆಗುತ್ತದೆ. ಆದ್ದರಿಂದಾಗಿ ಆ competition ಅನ್ನೇ ತರಬೇಡಿ ಎಂದು ನಾವು ಹೇಳುವುದಿಲ್ಲ. competition ತೆಗೆದುಕೊಂಡು ಬನ್ನಿ, ಆದರೆ ಅಲ್ಲಿಯ ವ್ಯವಸ್ಥೆಯನ್ನು monitor ಮಾಡಲಿಕ್ಕೆ ರೈತರ ಪ್ರತಿನಿಧಿಗಳಿಗೇ ಅವಕಾಶ ಇರಬೇಕು ಅಂದರೆ ಸ್ಥಳೀಯ ಎಪಿಎಂಸಿ ಗೇ ಅವಕಾಶ ಇರಬೇಕು. ಆ ಒಂದು ಬದಲಾವಣೆಯನ್ನು ತಾವು ತರಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಮಹಿಮಾ ಜೆ. ಪಟೇಲ್ :- APMC yard ಏನು ಇರುತ್ತದೋ, ಅದಕ್ಕೊಂದು competitive ಬೇರೆ ಇನ್ನೊಂದು yard ಅನ್ನು ಮಾಡಬೇಕು ಎನ್ನುವುದಕ್ಕೆ ನಾವು ಯೋಚನೆ ಮಾಡುತ್ತಿದ್ದೇವೆ. ಅಲ್ಲಿಯ ದಲ್ಲಾಲರು, ವ್ಯಾಪಾರಸ್ಥರು ಮತ್ತೆ APMC ಯಿಂದಲೇ permission ತೆಗೆದುಕೊಳ್ಳಬೇಕು ಎನ್ನುವುದಾದರೆ, APMC ಏಕೆ permission ಕೊಡುತ್ತದೆ? ಅವರ competitor ಗೆ ಏಕೆ ಅವರು permission ಕೊಡುತ್ತಾರೆ? Competition ಅನ್ನು ಯಾರು ತಾನೇ ಇಷ್ಟ ಪಡುತ್ತಾರೆ? ಯಾರೂ ಸಹ Competition ಅನ್ನು ಇಷ್ಟಪಡುವುದಿಲ್ಲ. ಹಾಗಾಗಿ Director ರವರೇ ಅದಕ್ಕೆ permission ಕೊಡುವಂತಿರುವುದು ಸರಿಯಾಗಿದೆ. ಅದು ದೂರ ಆಗಬಹುದು. ಆದರೆ ಯಾರಾದರೂ Director ಕಡೆಯಿಂದ ಅಲ್ಲಿಯೇ permission ಕೊಡುವಂತಹ officer ಇದ್ದರೆ, ಅವರಿಂದಲೇ permission ತೆಗೆದುಕೊಳ್ಳಬಹುದು ಎಂದು ಮಾಡಬಹುದು.

ಶ್ರೀ ಡಿ.ಆರ್. ಪಾಟೀಲ್ :- ಮಾನ್ಯ ಮಹಿಮಾರವರೆ, ಅದಕ್ಕಾಗಿಯೇ ಈಗ role of the APMC must be very clear ಎಂದು ನಾವು ಕೇಳುತ್ತಿದ್ದೇವೆ.

The role of the APMC is to regulate the marketing activities. ಈ concept clear ಆಯಿತು ಎಂದರೆ, ಆ doubt ಬರುವುದೇ ಇಲ್ಲ. ಈಗ ಏನಾಗುತ್ತದೆ ಎಂದರೆ, ಅಲ್ಲಿ APMC ತಮ್ಮ market yard ನೊಳಗೆ ಲೈಸೆನ್ಸ್ ಕೊಡುತ್ತಾರೆ, ಇದು competitive ಆಗುತ್ತದೆಂದು ಅಲ್ಲಿ ಕೊಡಲಿಕ್ಕಿಲ್ಲವೆಂದು ನಿಮಗೊಂದು ಸಂಶಯ ಬರುತ್ತಿದೆ. ಅವರು permission ಕೊಡಲಿಕ್ಕಿಲ್ಲವೆಂದರೆ, there is a appeal provision. ಅವರು Director ರವರಿಗೇ appeal ಮಾಡಬಹುದಾಗಿದೆ. I cannot summarily reject. ಆ ಪ್ರಶ್ನೆ ಬರುವುದಿಲ್ಲ. ನಮಗೆ ಅಲ್ಲಿ ಬರುವವರು ರೈತ ಪ್ರತಿನಿಧಿಗಳೇ. ರೈತರ ಹಿತ ರಕ್ಷಣೆ ಮಾಡುವಲ್ಲಿ ಈಗ ಇದ್ದ ವ್ಯವಸ್ಥೆ ಸರಿಯಿಲ್ಲವೆಂದು ನಮಗೆಲ್ಲರಿಗೂ ಮನವರಿಕೆ ಆಗಿದೆ. ಆದರೆ ಅನಿವಾರ್ಯವಾಗಿ, ಆ ವ್ಯವಸ್ಥೆ ಬಿಟ್ಟು ಬೇರೆ ವ್ಯವಸ್ಥೆಯಿಲ್ಲವೆಂದು ನವು ಅವರು ಹೇಳಿದಂತೆ ಕುಣಿದಾಡುತ್ತಿದ್ದೇವೆ. ನಾವೇ competition ಅನ್ನು wel-come ಮಾಡುತ್ತಿದ್ದೇವೆ. competition ಬಂದಾಗ ಅಲ್ಲಿ ಅವರನ್ನು control ಮಾಡುವವರು ಯಾರು? who is to control? ಅಲ್ಲಿ ರೈತರಿಗೆ ಅನ್ಯಾಯವಾಯಿತು ಎಂದಿಟ್ಟುಕೊಳ್ಳಿ. ಅಲ್ಲಿ ರೈತರಿಗೆ payment ನಲ್ಲಿ ಅನ್ಯಾಯ ಆಗಬಹುದು, weigh ಮಾಡುವುದರಲ್ಲಿ ಅನ್ಯಾಯ ಆಗಬಹುದು, grading ನಲ್ಲಿ ಅನ್ಯಾಯ ಆಗಬಹುದು, ಆ ರೀತಿಯ ಅನ್ಯಾಯಗಳೆಲ್ಲಾ ಆದರೆ ಅದನ್ನು control ಮಾಡುವವರ್ಯಾರು? ಬೆಂಗಳೂರಿನಿಂದ ಅದನ್ನೆಲ್ಲಾ control ಮಾಡಬೇಕೋ? ಅಥವಾ ಅಲ್ಲಿಯ APMC ನವರು Control ಮಾಡಬೇಕೋ? ಅದಕ್ಕೆ role of the APMC must be very clear. APMC role ಏನು ಎನ್ನುವುದನ್ನು clear ಮಾಡಿಕೊಂಡು ಬಿಟ್ಟೆವು ಎಂದರೆ, ಈ ಪ್ರಶ್ನೆ ಬರುವುದಿಲ್ಲ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ :- ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಅನುಮಾನ. ಮಾನ್ಯ ಪಾಟೀಲ್ ಸಾಹೇಬರು ಇದನ್ನೂ ಕೂಡ clarify ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. APMC ಯನ್ನು ಹಿಂದೆ actually RMC ಎಂದು ಕರೆಯುತ್ತಿದ್ದರು. It is a regulatory body. ಅವರು ಹೇಳಿದ ಹಾಗೆ ಎಲ್ಲಿಯೂ ಮಾರ್ಕೆಟ್ ಇಲ್ಲವೆಂದು ಮಾರ್ಕೆಟ್ ಸ್ಥಾಪನೆ ಮಾಡಲಿಕ್ಕೆ ಹೊರಟರು. ಇವತ್ತು ಅವರು ಹೇಳುತ್ತಾರೆ, ನಾನೂ ಮಾತನಾಡುತ್ತಾ ಅದೇ ಮಾತನ್ನು ಹೇಳಿದ್ದೆ. Regulatory authority APMC ಜೊತೆಗೇ ಇರಬೇಕು. ಏಕೆಂದರೆ ಅದರಲ್ಲಿ ರೈತ ಪ್ರತಿನಿಧಿಗಳು ಇರುತ್ತಾರೆ. ಆದರೆ ಒಂದು ಸಂದರ್ಭದಲ್ಲಿ APMC market ನವರು partial ಆಗಿ ನಡೆದುಕೊಂಡರೆ ಹೇಗೆ?

permission ಕೊಡುವುದಕ್ಕೇನೂ ತೊಂದರೆಯಿಲ್ಲ, appeal process ಇದೆ, ಅದು ಹೇಗೋ ನಡೆಯುತ್ತದೆ. ಆದರೆ day to day regulation ನಲ್ಲಿ ಏನಾದರೂ APMC ಪರವಾಗಿ ಪಕ್ಷಪಾತವಾಗಿ ನಡೆದುಕೊಂಡರೆ ಹೇಗೆ? If a Regulating body starts acting partially in favour of APMC market ಆಗ ಏನು ಆಗುತ್ತದೆ? ಇದರಿಂದ competition ಗೆ ತೊಂದರೆಯಾಗುವುದಿಲ್ಲವೇ?

ಶ್ರೀ ಡಿ.ಆರ್. ಪಾಟೀಲ್ :- ಇಲ್ಲ ಈಗ ಈ ಏಪಿಎಂಸಿ ಯನ್ನು ಕಂಟ್ರೋಲ್ ಮಾಡುವವರು ಯಾರು? ರೈತ ಪ್ರತಿನಿಧಿಗಳೇ. ಆ ರೈತ ಪ್ರತಿನಿಧಿಗಳಿಗೆ ಇನ್ನೊಂದು ಮಾರ್ಕೆಟ್‌ನಲ್ಲಿ ತಮ್ಮ ರೈತರಿಗೆ ಚೆನ್ನಾಗಿ ರೇಟ್ ಬರುತ್ತದೆ ಎಂದರೆ, ಅದನ್ನು ಮುಚ್ಚಬೇಕೆಂಬ ವಿಚಾರ ಇರುವುದಿಲ್ಲ. ಏಕೆಂದರೆ, ಆತನೂ ರೈತನೇ ಆಗಿರುತ್ತಾನೆ. ಅವನೂ ಮಾರಾಟ ಮಾಡುತ್ತಿರುತ್ತಾನೆ. ನನಗೆ ಮಾರಾಟ ಮಾಡಲಿಕ್ಕೆ, ನಾನು private market ನಲ್ಲಾದರೂ ಮಾರಾಟ ಮಾಡಬಹುದು, APMC market ನಲ್ಲಾದರೂ ಮಾರಾಟ ಮಾಡಬಹುದು. ಅದರಿಂದ ಏನೂ problem ಇರುವುದಿಲ್ಲ. ಹಾಗೆ ನಾವು harass ಮಾಡಲಿಕ್ಕೆ ಸಾಧ್ಯವೇ ಇಲ್ಲ. Even we may welcome that system, if they are better. ಆದರೆ ಅಲ್ಲಿ ಅನ್ಯಾಯ ನಡೆದರೆ we cannot be just onlookers. We must control that.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಮಂತ್ರಿಗಳನ್ನು ನಾನು ಕೇಳುವುದೇನೆಂದರೆ, ಈಗಾಗಲೇ 18 ರಾಜ್ಯಗಳು ಒಪ್ಪಿಕೊಂಡಿದ್ದಾವೆ, ಅವರು ಏನೇನು ಮಾಡಿದ್ದಾರೆಂಬುದನ್ನು ತರಿಸಿಕೊಂಡಿದ್ದಿರಾ? ವೆರಿಫೈ ಮಾಡಿದ್ದಿರಾ? ಮಾಡಿಲ್ಲ, ತರಿಸಿಕೊಂಡು ವೆರಿಫೈ ಮಾಡಿ, ಇದರಿಂದ ರೈತರಿಗೆ ಅನುಕೂಲ ಮಾಡಿ.

ಶ್ರೀ ಶರಣಪ್ಪ ದರ್ಶನಾಪುರ :- ಅಧಿಕಾರಿಗಳೆಲ್ಲಾ ಹೋಗಿ ಬೇರೆ ರಾಜ್ಯಗಳಲ್ಲಿ ಏನು ಮಾಡಲ್ ಆ್ಯಕ್ಟ್ ಇವೆ ನೋಡಿಕೊಂಡು ಬಂದೆ ಇಲ್ಲಿ ನಾವುಮಾಡಿರುವುದು.

ಶ್ರೀ ಎಸ್.ಎಸ್. ಪಾಟೀಲ್ :- ನಮಗನಿಸಿದಂತೆ, ಪರ್ಯಾಯವಾದ APMC yard ತಯಾರಾಗುತ್ತದೆ. ಏಕೆಂದರೆ, ನಾಳೆ ದಿವಸ ಕೇಂದ್ರ ಸರ್ಕಾರದವರು, ಬೇರೆ ರಾಜ್ಯದವರು ಬದಲಾವಣೆ ಮಾಡಿದ್ದಾರೆ ನೀವು ಬದಲಾವಣೆ ಮಾಡಿರೆಂದು ಹೇಳಬಹುದು, ಆ ಮಾತು ಬೇರೆ. ಆದರೆ ಅಲ್ಲಿ ಮತ್ತೊಂದು APMC ಯಾರ್ಡ್ ತಯಾರಾದಾಗ ಈ APMC ಗತಿಯೇನು? ಇದನ್ನು ಮುಚ್ಚುತ್ತೀರೇನು? ಹಾಗಾದರೆ ನಿರ್ಣಯ ಮಾಡಿರಿ. ಈ APMC ಗಳು ಬೇಡ, ಇವು ಸರಿಯಾಗಿ ನಡೆಯುವುದಿಲ್ಲ, ಈಗ ಅವುಗಳಿಗೆ ಚುನಾವಣೆ ಮಾಡುವುದಕ್ಕೆ ಹೊರಟಿದ್ದಾರೆ, ಅವುಗಳಿಗೆ ಕಸಗುಡಿಸುವವರನ್ನು ತೆಗೆದುಕೊಳ್ಳುವ ಅಧಿಕಾರವಿಲ್ಲದ ರೀತಿಯಲ್ಲಿ ಇಟ್ಟಿದ್ದೀರಿ.

ಶ್ರೀ ಶರಣಬಸಪ್ಪ ದರ್ಶನಾಪುರ :- ಈಗಿರುವ ವ್ಯವಸ್ಥೆಗೆ ಖಾಸಗಿ ಮಾರುಕಟ್ಟೆ ಯಾರ್ಡ್ ಬಂದಂಥ ಸಂದರ್ಭದಲ್ಲಿ ಈ APMC ಗೆ ಏನು ಆಗುವ ಪ್ರಶ್ನೆಯೇ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ :- ಡಿ.ಆರ್. ಪಾಟೀಲ್‌ರ ಹೇಳುವುದೇನೆಂದರೆ, ಈ APMC ಗೆ ಅದರ ಮೇಲೆ ನಿಯಂತ್ರಣವಿರಲಿ, ಅವರು ಅವರ ಏರಿಯಾದಲ್ಲೇ ಮಾಡಲಿ.

ಶ್ರೀ ಶರಣಬಸಪ್ಪ ದರ್ಶನಾಪುರ :- ಇದುವರೆಗೆ ರೈತ ಬೆಳೆದ ಸಾಲುಗಳು ಸೀದಾ ಎಪಿಎಂಸಿಗೆ ಬರಬೇಕು. ಈಗ ಊರಿನಲ್ಲಿ ಮಾರಾಟ ಮಾಡುವ ಸಂದರ್ಭದಲ್ಲಿ ಅದು ಆಗುತ್ತದೆ. ಖಾಸಗಿ ಮಾರುಕಟ್ಟೆ ಯಾರ್ಡ್ ಆದಂಥ ಸಂದರ್ಭದಲ್ಲಿ ಅವನು ಅಲ್ಲಿ ಹೋಗಿ ಸೇಲ್ ಮಾಡಲು ಅವಕಾಶವಿರುತ್ತದೆ, ಈಗಿರುವ ಎಪಿಎಂಸಿಗೆ ಧಕ್ಕೆಯಾಗುವುದೇನು ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ :- ಈ ಎಪಿಎಂಸಿ ಗೆ ಸಂಬಂಧವಿಲ್ಲದ ರೀತಿಯಲ್ಲಿ ಇದನ್ನು ಇಡುತ್ತಿರೊ ಹೇಗೆ ಎಂದು ನಾವು ಕೇಳುತ್ತಿರುವುದು.

ಶ್ರೀ ಶರಣಬಸಪ್ಪ ದರ್ಶನಾಪುರ :- ನಾವು ಮಾಡುತ್ತಿರುವ ಉದ್ದೇಶವೆ ಅದಾಗಿದೆ. ರೈತರು ಬೆಳೆದ ಬೆಳೆ ಬೇರೆ ಕಡೆಗೆ ಹೋಗುವುದಕ್ಕೆ ಅವಕಾಶವೇ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ :- ಆಗ ರೈತರು ಮಾತನಾಡುವ ಪ್ರಶ್ನೆ ಇಲ್ಲ ಇಲ್ಲಿ, ಸರಿ ಬಿಡಿ, ಅವರು ಮಾಡಲಿ, ಇವರು ಮಾಡಲಿ. ಹಾಗಾದರೆ ಅವರಿಗೂ ಸೆಸ್ ಹಾಕುವುದಾದರೆ, ಆ ಸೆಸ್ ಎಲ್ಲಿಗೆ ಹೋಗುತ್ತದೆ.

ಶ್ರೀ ಶರಣಬಸಪ್ಪ ದರ್ಶನಾಪುರ :- ಅವರಿಗೂ ಸೆಸ್ ಇದೆ, ಪ್ರೊಸೆಸಿಂಗ್ ಕೆಳಗಡೆ 5 ವರ್ಷ ಸೆಸ್‌ಗೆ ವಿನಾಯಿತಿ ನೀಡಲಾಗುವುದು, ಈಗಾಗಲೇ ಇಂಡಸ್ಟ್ರೀಯಲ್ ಆ್ಯಕ್ಟ್ ಕೆಳಗಡೆ ಬಂದಿದೆ. ಇಂಡಸ್ಟ್ರಿಯಲ್ ಆ್ಯಕ್ಟ್ ಕೆಳಗೆ ಸಂಸ್ಕರಣ ಘಟಕಗಳಿಗೆ ನೇರವಾಗಿ ಖರೀದಿ ಮಾಡುವುದಕ್ಕೆ ಅಧಿಕಾರವಿಲ್ಲ, ಇದು ತಿದ್ದುಪಡಿಯಾದ ಮೇಲೆ ಸಂಸ್ಕರಣ ಘಟಕಗಳು ರೈತರಿಂದ ನೇರವಾಗಿ ಖರೀದಿ ಮಾಡುವುದಕ್ಕೆ ಅವಕಾಶವಿದೆ. ಇಂಡಸ್ಟ್ರಿಯಲ್ ಪಾಲಿಸಿನಲ್ಲಿ ಏನಿದೆ ಅದನ್ನೇ ಇಲ್ಲಿ ಸೇರಿಸಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ :- ಈಗ ಈ ಎಪಿಎಂಸಿಗೆ ಇದನ್ನು ಪ್ರತ್ಯೇಕವಾಗಿ ಮಾಡಿದಂತಾಯಿತು, ಇವರ ಕಂಟ್ರೋಲ್ ಇಲ್ಲದಂತೆ ಇಡುತ್ತಿರೆಂದಾಯಿತು. ಅವರು ಅದೇ ರೀತಿಯಾಗಿ ಹೇಳುತ್ತಿದ್ದಾರೆ. ಕಂಟ್ರ್ಯಾಕ್ಟ್ ಎಂದು ಇಟ್ಟಿದ್ದಿರಲ್ಲಾ ಇವರ ಆ್ಯಕ್ಟ್

ಅನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ರೆವಿನ್ಯೂ ಆ್ಯಕ್ಟ್ ತಿದ್ದುಪಡಿಯಾಗಬೇಕು, ಅಲ್ಲಿ ಪ್ರಾವಿಷನ್ ಇದೆ, ಈಗ ಗುತ್ತಿಗೆ ಆಧಾರದ ಮೇಲೆ ಬೇರೆಯವರಿಗೆ ಮಾಡಲು ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್ :- ಈಗ ಕಾನೂನಿನೊಳಗೆ ಮಾರ್ಕೆಟ್ ಏರಿಯಾಕ್ಕೆ ಎಪಿಎಂಸಿ ಜ್ಯುರಿಡಿಕ್ಷನ್ ಇರುತ್ತದೆ, ಖಾಸಗಿಯವರ ಮೇಲೆ ನಿಯಂತ್ರಣವಿಲ್ಲದಂತೆ ನೀವೇನು ಈ ತಿದ್ದುಪಡಿಯನ್ನು ತಂದಿದ್ದೀರಿ, ಆ ತಿದ್ದುಪಡಿಯನ್ನು ಡಿಲಿಟ್ ಮಾಡಿ ನಾನು ಸಜೆಸ್ಟ್ ಮಾಡಿದ ತಿದ್ದುಪಡಿಯನ್ನು ತನ್ನಿ. ನಾನು ಸಜೆಸ್ಟ್ ಮಾಡಿದ್ದೇನೆಂದರೆ, ಈಗ ಮಹಿಮಾ ಪಟೇಲರು ಹೇಳಿದ ಸಂಶಯನೂ ಬರಬಾರದೆಂದು ನಿಯಂತ್ರಣದ ಅಧಿಕಾರ ನಿರ್ದೇಶಕರ ಹತ್ತಿರವಿರಲಿ ಬೇಡವೆಂದು ನಾವು ಹೇಳುವುದಿಲ್ಲ. but with prior concurrence of the APMC ಎಂದು ನಾನು ಹೇಳಿದ್ದೇನೆ. ಅವರು ತಪ್ಪು ಮಾಡಿದರೂ ಇವರೇನು ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ ಸರಿಯಾಗುವುದಿಲ್ಲ. With prior concurrence of the Market Committee ಎಂದು ಹೇಳಿರುವುದು.

ಶ್ರೀ ಮಹಿಮಾ ಜೆ. ಪಟೇಲ್ :- ರೈತ ಪ್ರತಿನಿಧಿಗಳೆಂದರೆ, ರೈತರ ಹಿತರಕ್ಷಣೆಯನ್ನು ಮಾಡೆಮಾಡುತ್ತಾರೆನ್ನುವುದು ಒಂದು ಯುಟೋಪಿಯನ್ ಕಾನ್ಸೆಪ್ಟ್ ಎಂದು ನನಗನಿಸುತ್ತದೆ. ಏಕೆಂದರೆ ಜನಪ್ರತಿನಿಧಿಗಳಾಗಿ ಜನರ ಹಿತರಕ್ಷಣೆಯನ್ನೆ ಮಾಡಬೇಕು. ಆದರೆ ಬಹಳಷ್ಟು ಸಾರಿ ಅದಾಗುತ್ತಿಲ್ಲ. ಅದು ನಮಗೆಲ್ಲಾ ಕಾಣಿಸುತ್ತಿರುವುದು, ನಾನು ಎಪಿಎಂಸಿ ನಲ್ಲಿ ನೋಡುತ್ತಿದ್ದೇನೆ, ರೈತ ಪ್ರತಿನಿಧಿಗಳೆಂದು ಬರುತ್ತಾರಲ್ಲ, ಅವರಿಗೆ ಒಂದಿಷ್ಟು ರೆಗ್ಯಲೇಟರ್ ಪವರ್ ಕೊಟ್ಟ ತಕ್ಷಣ ಅದರೊಳಗೆ ಹೇಗೆ ಹಣ ಮಾಡುವುದೆಂದು ಯೋಚನೆ ಮಾಡುತ್ತಾರೆ, ಅಂಥ ಪರಿಸ್ಥಿತಿ ಬರದಂತೆ ನೋಡಿಕೊಳ್ಳಬೇಕಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಂತ್ರಿಗಳೆ, ಅವರು ಈಗ ತಿದ್ದುಪಡಿಯನ್ನು ಪ್ರಪಸ್ ಮಾಡುತ್ತಿದ್ದಾರೆ, ಅದನ್ನು ತಿದ್ದುಪಡಿ ಎಂದು ಸ್ವೀಕಾರ ಮಾಡುತ್ತಿದ್ದಾರಾ ಅಥವಾ ಸಲಹೆ ಎಂದು ತೆಗೆದುಕೊಳ್ಳುತ್ತಿದ್ದಿರಾ? If it is an amendment ನೀವು ಅದನ್ನು ತಿದ್ದುಪಡಿ ಮಾಡಿ ಹೊಸ ಬಿಲ್ ಅನ್ನು ತರಬೇಕಾಗುತ್ತದೆ, ನಾವೆಲ್ಲಾ ಆ ತಿದ್ದುಪಡಿಯನ್ನು ಓದಬೇಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್ :- ಅದನ್ನು ಎಲ್ಲರಿಗೂ ನಿನ್ನೆ ದಿವಸ ನನ್ನ ಮತ್ತು ಅವರ ತಿದ್ದುಪಡಿಗಳನ್ನು ಸರ್ಕ್ಯುಲೇಟ್ ಮಾಡಿದ್ದಾರೆ.

ಶ್ರೀ ಶರಣಬಸಪ್ಪ ದರ್ಶನಾಪುರ :- ನಿನ್ನೆಯ ದಿವಸ ಕೊಡಲಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನಮಗ್ಯಾರಿಗೂ ತಿದ್ದುಪಡಿಯಾದ ಪ್ರತಿ ಬರಲಿಲ್ಲ, ಈಗ ತಿದ್ದುಪಡಿಗಳನ್ನು ತಾವು ಒಪ್ಪಿದ್ದಿರಾ?

ಶ್ರೀ ಶರಣಬಸಪ್ಪ ದರ್ಶನಾಪುರ :- ಕೆಲವೊಂದು ಒಪ್ಪಿ ಕಳುಹಿಸಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- 12 ತಿದ್ದುಪಡಿಗಳಿವೆ, ತಿದ್ದುಪಡಿಗಳನ್ನು ಪ್ರಪಸ್ ಮಾಡುತ್ತಿದ್ದೇವೆ ಎಂದು ಕೇಳಿದ್ದಕ್ಕೆ ನೀವು Joint Select Commitee ಮಾಡಿ ಎಂದು ನಾವು ಕೇಳಿದ್ದೇವೆ.

ಶ್ರೀ ಶರಣಬಸಪ್ಪ ದರ್ಶನಾಪುರ :- ಅವು ನಿನ್ನೆಯೇ ಸರ್ಕ್ಯುಲೇಟ್ ಆಗಿದ್ದಾವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಹಾಗಾದರೆ, ಮತ್ತೆ ನಾವು, ಅವರೇನು ತಿದ್ದುಪಡಿಯನ್ನು ಕೊಟ್ಟಿದ್ದಾರೆ, ನೀವೇನು ಬಿಲ್ ಇಟ್ಟಿದ್ದಿರಿ ಎಂಬುದರ ಮೇಲೆ ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್ :- ಮಹಿಮಾ ಪಟೇಲ್‌ರವರೆ ಈಗಿರುವ ಪ್ರಶ್ನೆ ಏನೆಂದರೆ, ಎಲ್ಲಿ ಎಪಿಎಂಸಿನಲ್ಲಿ ರೈತ ಚುನಾಯಿತ ಪ್ರತಿನಿಧಿಯಾಗಿ ಕೆಲಸ ಮಾಡುತ್ತಾರೆ, ಅವರ ಮೇಲೆ ವಿಶ್ವಾಸವಿಡಬೇಕೋ ಅಥವಾ ಒಬ್ಬ ಅಧಿಕಾರಿಯ ಮೇಲೆ ವಿಶ್ವಾಸವಿಡಬೇಕೋ ಎಂಬುದು ಆಯ್ಕೆ. ಯಾವ ವ್ಯವಸ್ಥೆ ರೈತರಿಗೆ ಸ್ಪಂದಿಸಬಹುದೆಂಬುದನ್ನು ನೀವು ವಿಚಾರ ಮಾಡಬೇಕು. ನಿಮ್ಮದು ದಾವಣಗೆರೆಯಲ್ಲಿ ಮನೆಯಿದೆ ಎಂದು ಕಾಣಿಸುತ್ತದೆ, ದಾವಣಗೆರೆ ಮಾರುಕಟ್ಟೆಯಾಗಲಿ, ಗದಗ್ ಮಾರುಕಟ್ಟೆಯಾಗಲಿ ನಿತ್ಯ ಡಿಸ್‌ಪ್ಯುಟ್ ಇರುತ್ತದೆ, ಅವು ಸ್ಯಾಂಪಲ್ ಬಗ್ಗೆಯೇ ಇರುತ್ತವೆ, ವೇಮೆಂಟ್, ಪೇಮೆಂಟ್ ಬಗ್ಗೆಯೆ ಇರುತ್ತವೆ. ಈ ರೀತಿಯ ಡಿಸ್‌ಪ್ಯುಟ್ ಇದ್ದಾಗ ರೈತ ಸೀದ ಎಪಿಎಂಸಿಗೆ ಬಂದು ದೂರನ್ನು ಕೊಡುತ್ತಾನೆ. ಆಗ ಅವರು ಸಂಬಂಧಿಸಿದ ವರ್ತಕರನಾಗಲಿ, ದಲ್ಲಾಲ್‌ರನ್ನಾಗಲಿ, ಹಮಾಲ್‌ರನ್ನಾಗಲಿ, ವೇಮನ್‌ರನ್ನಾಗಲಿ, ಅಲ್ಲಿಗೆ ಕರೆಸಿ ಅಲ್ಲಿ ಬಗೆಹರಿಸುತ್ತಾರೆ. It is a continuous process. ಪ್ರತಿ ದಿವಸ ಈ ರೀತಿ ಆಗುತ್ತಿರುತ್ತದೆ. ಪರಿಸ್ಥಿತಿ ಆ ಖಾಸಗಿ ಮಾರುಕಟ್ಟೆಯಲ್ಲಿಯೂ ಇದೆ, ಅಲ್ಲಿ ಈ ರೀತಿಯ ಗ್ರಿವೆನ್ಸಸ್ ಬಂದಾಗ

ಬಗೆಹರಿಸಿಕೊಳ್ಳಲು ಅವರು ಬೆಂಗಳೂರಿಗೆ ಬರಬೇಕಾ? ಅವರು ಎಲ್ಲಿಗೆ ಹೋಗಬೇಕು? ಮಾರುಕಟ್ಟೆಯಲ್ಲಿ ಇದು ನಿತ್ಯವಿರುತ್ತದೆ. ಆದುದರಿಂದ APMC regulatory role ಅನ್ನು ಮಾರ್ಕೆಟ್ ಏರಿಯಾದಲ್ಲಿ ದಯವಿಟ್ಟು ರೆಡ್ಯುಸ್ ಮಾಡುವುದಕ್ಕೆ ಹೋಗಬೇಡಿ. ಈಗ ತಾವೇನು ತಿದ್ದುಪಡಿಯನ್ನು ಪ್ರಪೋಸ್ ಮಾಡಿದ್ದಿರಿ, ಆ ಪರಿಸ್ಥಿತಿ ಬಂದಾಗ ಅದರ ಪರಿಣಾಮವನ್ನು ತವು ವಿಚಾರ ಮಾಡಬೇಕು. ಖಾಸಗಿ ಮಾರ್ಕೆಟ್‌ನಲ್ಲಿ ಎಲ್ಲಾ ಸರಿಯಾಗಿಯೇ ನಡೆಯುತ್ತದೆಂದು ಏಕೆ ನಿರೀಕ್ಷೆ ಮಾಡುತ್ತೀರಿ? ಅಲ್ಲಿ ಅನ್ಯಾಯ, ಮೋಸ ಆಗಿಯೇ ಆಗುತ್ತದೆ, ಅಲ್ಲೇನು ಎಲ್ಲಾ ವಿದೇಶದವರಿರುವುದಿಲ್ಲ. ಅಲ್ಲಿಯೂ ನಮ್ಮವರೇ ಇರುತ್ತಾರೆ, ಇದೇ ಅಣ್ಣತಮ್ಮಂದಿರು ಅಲ್ಲಿ ಇರುವುದು. ಅದಕ್ಕೆ ದಯವಿಟ್ಟು ಆ ರೆಗ್ಯಲೇಟಿಂಗ್ ಅಥಾರಿಟಿ ಏನಿದೆ ಅದನ್ನು ಕರ್ಬ್ ಮಾಡಬೇಡಿ ಎಂದು ನಾನು ತಮಗೆ ಒತ್ತಾಯ ಮಾಡುತ್ತಿದ್ದೇನೆ. ಕ್ಲಾಸ್ 16 ಅನ್ನು ತಾವು ಒಪ್ಪಿಕೊಂಡಿದ್ದಿರಿ, ಅದಕ್ಕೆ ನಾನು ತಮಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಮತ್ತೆ ಕ್ಲಾಸ್ 18 ಅನ್ನು ಒಪ್ಪಿಕೊಂಡಿದ್ದಿರಿ, ಅದನ್ನು ಸರ್ಕ್ಯುಲೇಟ್ ಮಾಡಿದ್ದಾರೆ.

D.R. Patil :- Member of the legislative Assembly, proposes the following amendments to Karnataka APMC ಎಂದು ಇದೆ. ಇದು ಸರ್ಕಾರ ಪ್ರಪೋಸ್ ಮಾಡಿದಂತೆ ಆಗುವುದೇ?

ಶ್ರೀ ಜೆ.ಸಿ. ಮಾಧುಸ್ವಾಮಿ :- I am on a point ನೀವೇನು ಹೇಳಿದ್ದೀರಿ I propose an amendment. ಈ ತಿದ್ದುಪಡಿಯನ್ನು ಸರ್ಕಾರ ಪ್ರಪೋಸ್ ಮಾಡಿದಂತಾಯಿತೇ?

ಶ್ರೀ ಡಿ.ಆರ್. ಪಾಟೀಲ್ :- ಸರ್ಕಾರವೇ ಮಾಡಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನನಗೆ ಆ ಪ್ರತಿ ಎಲ್ಲಿದೆ ಕೊಡಿ.

ಅಧ್ಯಕ್ಷರು :- ನಿನ್ನೆಯ ಕೊಟ್ಟರಲ್ಲಪ್ಪ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಏನಾಗುತ್ತಿದೆ ಎಂದು ನಮಗೆ ಗೊತ್ತಾಗುತ್ತಿಲ್ಲವಲ್ಲ.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಡಿ.ಆರ್. ಪಾಟೀಲರು ಇಂಗ್ಲೀಷ್ ಹೇಳುತ್ತಿದ್ದಾರೆ. ಇಲ್ಲಿಯೂ ಎಲ್ಲಾ ಇಂಗ್ಲೀಷ್ ಓಡಾಡುತ್ತಿದೆ. ನಮಗೇನೂ ತಿಳಿಯುತ್ತಿಲ್ಲ. ನಾವು ಕನ್ನಡದವರು ಏನು ಮಾಡಬೇಕು? ಅಧ್ಯಕ್ಷರೆ, ನಾನು ಬಹಳ ಸೀರಿಯಸ್ಸಾಗಿ ಮಾತನಾಡುತ್ತಿದ್ದೇನೆ ಇದನ್ನು. ಹುಡುಗಾಟಿಕೆ ಮಾತಲ್ಲ ಇದು. ನಾನು

ಮೊದಲಿನಿಂದಲೂ ಹೇಳುತ್ತಿದ್ದೇನೆ. ಕೆಲವು ಇಂಗ್ಲೀಷ್ ಶಬ್ದ ಉಪಯೋಗಿಸಿದರೆ ತಪ್ಪೇನೂ ಇಲ್ಲ. ಕನ್ನಡ ರಾಜ್ಯದಲ್ಲಿ ಇವರು ಇಂಗ್ಲೀಷ್‌ನಲ್ಲಿ ಕಳುಹಿಸಿದ್ದಾರೆ. ಅವರೂ ಇಂಗ್ಲೀಷ್‌ನಲ್ಲಿ ಹೇಳುತ್ತಿದ್ದಾರೆ. ತಿದ್ದುಪಡಿ ಎಲ್ಲವನ್ನು ಇನ್ನು ಮುಂದೆ ಕನ್ನಡದಲ್ಲಿ ಕಳುಹಿಸಿ. ಅವರೂ ಕನ್ನಡದಲ್ಲಿ ಕಳುಹಿಸಲಿ. ಅವರು ಇಂಗ್ಲೀಷ್‌ನಲ್ಲಿ ಕಳುಹಿಸಿದರೆ ನೀವು ಆಫೀಸ್‌ನವರು ವಾಪಸ್ ಕಳುಹಿಸಿ. ನಾವು ಪದೇ ಪದೇ ಎದ್ದು ಇದನ್ನೇ ಮಾಡೋಣವಾ?

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನದೆಳೆಯುತ್ತಿದ್ದೇನೆ. ಪೇಜ್ ನಂ. 568 "As amendments are circulated to members both in English and Kannada the Rules Committee decided that members might be requested to table notice of amendments at least two days before the day the Bill was to be taken up in the House" What is this Rules? " At least two days before the bill was to be taken in the House. "Accordingly, a few days before the commencement of each session, members are requested through Bulletin to table such notices at least two days before the day the Bill is to taken up in the House" ನೀವು ಅಮೆಂಡ್‌ಮೆಂಟ್ ಬಿಲ್ ಕೊಡುವುದು ಯಾವಾಗ? ನಾವು ಚರ್ಚೆ ಮಾಡುವುದು ಯಾವಾಗ? ನಾವೆಲ್ಲಾ ಚರ್ಚೆ ಮಾಡಿದ ಮೇಲೆ ನೀವು ಅಮೆಂಡ್‌ಮೆಂಟ್ ತೆಗದುಕೊಂಡು ಬಂದರೆ, ಬಿಲ್ ಮೇಲೆ ಮೊದಲು ಮಾತನಾಡಿದವರ ಗತಿ ಏನಾಗಬೇಕು? Who has answer all these ಆ ಭಾಗ ಇಲ್ಲದೇ ನಾವು ಇಲ್ಲಿ ಚರ್ಚೆಯಲ್ಲಿ ಭಾಗವಹಿಸಿಬಿಟ್ಟಿದ್ದೇವೆ. ನಮಗೆ ಯಾವಾಗ ಕೊಟ್ಟಿದ್ದೀರಿ ನೀವು ಇದು?

ಶ್ರೀ ಶರಣಬಸಪ್ಪ ದರ್ಶನಾಪುರ್ :- ಚರ್ಚೆ ಆಗುವುದಕ್ಕೆ ಮುಂಚೆಯೇ ಇವೆಲ್ಲಾ ಆಗಿದೆ.

ಅಧ್ಯಕ್ಷರು :- Circulate ಆಗಿದೆ. ನೀವು ನೋಡಿಲ್ಲವೆಂದು ಕಾಣುತ್ತದೆ.

ಶ್ರೀ ಶರಣಬಸಪ್ಪ ದರ್ಶನಾಪುರ್ :- Circulate ಮಾಡಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನೀವು ಏಕೆ ಹೇಳಲಿಲ್ಲ ನಮಗೆ? ಈ ಅಮೆಂಡ್‌ಮೆಂಟ್ ಇದೆ, ನೀವೇಕೆ ಅದನ್ನು ಇಟ್ಟುಕೊಂಡು ಚರ್ಚೆ ಮಾಡುತ್ತಿದ್ದೀರಿ ಎಂದು ಏಕೆ ಹೇಳಲಿಲ್ಲ? ಹೌಸ್‌ನಲ್ಲಿ ಹೇಳಿದ್ದೀರಾ ತಾವು?

ಶ್ರೀ ಶರಣಬಸಪ್ಪ ದರ್ಶನಾಪುರ :- ಹಿಂದಿನ ಅಧಿವೇಶನದಲ್ಲಿ ಮಂಡನೆ ಮಾಡಿದ್ದೇವೆ, ಮಾನ್ಯ ಡಿ.ಆರ್. ಪಾಟೀಲ್‌ರವರು ಹೇಳಿರುವಂತಹ ಕೆಲವು ತಿದ್ದುಪಡಿಗಳನ್ನು ಹೇಳಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನೀವು ನಿಮ್ಮ ಒರಿಜಿನಲ್ ಬಿಲ್ ಜೊತೆಯಲ್ಲಿ ಇದನ್ನು ಕೊಟ್ಟಿದ್ದೀರಾ?

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :- ಮಾನ್ಯ ಅಧ್ಯಕ್ಷರೆ, ಇದು ನಿನ್ನೆ ನಮಗೆ ಬಂದಿಲ್ಲ. ಸುಮ್ಮನೆ ಕಥೆ ಹೇಳಿದರೆ ನಾವು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಇದೇನು ಅಸೆಂಬ್ಲಿನೋ ಏನು ಇದು? ಅವರು ನನ್ನ ಅಮೆಂಡ್‌ಮೆಂಟ್ಸ್ ಇದೆ ಏನು ಮಾಡುತ್ತೀರಿ ಎಂದು ಹೇಳಿದ್ದಕ್ಕೆ ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಂದೆ ಕಳುಹಿಸುತ್ತಿದ್ದೇವೆ ಎಂದು ಹೇಳಿದರು.

ಶ್ರೀ ಶರಣಬಸಪ್ಪ ದರ್ಶನಾಪುರ :- ಇಲ್ಲಿ ಎರಡು ವಿಚಾರಗಳು ಬರುತ್ತವೆ. ಒಂದು ಅಗ್ರಿಕಲ್ಚರಿಸ್ಟ್ ಇದೆ. ಉಳಿದ ವಿಚಾರದ ಬಗ್ಗೆ ನಾನು ಮಾತನಾಡತಕ್ಕಂತಹ ಸಂದರ್ಭದಲ್ಲಿ ನಾನು ಹೇಳಿದ್ದೇನೆ. ಹಿಂದಿನ ಸದನದಲ್ಲಿ ಬಿಲ್ಲನ್ನು ಮಂಡನೆ ಮಾಡಿದಾಗ ಮಾನ್ಯ ಡಿ.ಆರ್. ಪಾಟೀಲ್‌ರವರು ಕೆಲವೊಂದು ಅಮೆಂಡ್‌ಮೆಂಟ್ ಗಳನ್ನು ಕೊಟ್ಟಿದ್ದರವು. ಅದರಲ್ಲಿ ಕೆಲವೊಂದು ಒಪ್ಪಿದ್ದೇವೆ, ಕೆಲವೊಂದು ಒಪ್ಪುವುದಕಾಗಲಿಲ್ಲವೆಂದು ನಿನ್ನೆ ಮಾತನಾಡತಕ್ಕಂತಹ ಸಂದರ್ಭದಲ್ಲಿ ಹೇಳಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಕ್ರಮ ತೆಗೆದುಕೊಂಡಿರುವ ಬಗ್ಗೆ ಕೇಳಿದಾಗ ತಾವು ಹೇಳಿದ್ದೀರಿ. ಮಿಕ್ಕ ಈ ಎಲ್ಲಾ ಅಮೆಂಡ್‌ಮೆಂಟ್‌ಗಳನ್ನು ನೀವು ಯಾರಿಗೆ ಹೇಳಿದ್ದೀರಿ?

ಶ್ರೀ ಶರಣಬಸಪ್ಪ ದರ್ಶನಾಪುರ :- ಅಗ್ರಿಕಲ್ಚರಿಸ್ಟ್ ಬಗ್ಗೆ ತಾವು ಹೇಳತಕ್ಕಂಥಾದ್ದು ಸರಿ ಇದೆ. ಈಗ ಅದು ಒಂದು ತರುವುದು ಉಳಿದಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನೀವು ಬಿಲ್ಲನ್ನು ಮಂಡಿಸುವಾಗ ಇದನ್ನೆಲ್ಲಾ ಓದಿದ್ದೀರಾ ನೀವು?

ಶ್ರೀ ಶರಣಬಸಪ್ಪ ದರ್ಶನಾಪುರ :– ಓದಿಲ್ಲ. ಆದರೆ ಇದನ್ನೆಲ್ಲಾ ಹೇಳಿದ್ದೇವೆ ನಾವು.

ಶ್ರೀ ಜೆ.ಸಿ. ಮಾಧುಸ್ವಾಮಿ :– Is it not his duty? ಇಂತಿಂತಹ clause ನ್ನು ಒರಿಜಿನಲ್ ಬಿಲ್ಲನ್ನು ನಾನು ಅಮೆಂಡ್ ಮಾಡಿ pilot ಮಾಡುತ್ತಿದ್ದೇನೆಂದು ಮಂತ್ರಿಗಳು ಹೇಳಬೇಕೋ ಬೇಡ? Why are you keeping us in darkness? ಹೀಗಾದರೆ ಹೇಗೆ? ನೀವು ಇಲ್ಲಿ ಹೇಳಿದ್ದೀರಾ? ತೆಗೆಸಿ ರೆಕಾರ್ಡ್ ನಾನು ಇಂತಹ ಒರಿಜಿನಲ್ ಬಿಲ್ಲಿನಲ್ಲಿ ಇಂತಿಂತಹ ತಿದ್ದುಪಡಿಗಳನ್ನು ತಂದಿದ್ದೇನೆ ಎಂದು ಹೇಳುವುದು ನಿಮ್ಮ ಡ್ಯೂಟಿ ಅಲ್ಲವಾ? He is bound by duty sir, he has to do it.

ಶ್ರೀ ಶರಣಬಸಪ್ಪ ದರ್ಶನಾಪುರ :– ನಾನು ಕ್ಲಾಸ್‌ವೈಸ್ ಹೇಳಿಲ್ಲ. ನಾನು ಬಿಲ್ಲನ್ನು ಮಂಡನೆ ಮಾಡತಕ್ಕಂತಹ ಸಂದರ್ಭದಲ್ಲಿ ಹೇಳಿರತಕ್ಕಥಾದ್ದು ಮಾನ್ಯ ಡಿ.ಆರ್. ಪಾಟೀಲ್‌ರು ಕೆಲವು ತಿದ್ದುಪಡಿಗಳನ್ನು ತಿಳಿಸಿದ್ದಾರೆ. ಅದರಲ್ಲಿ ಎಲ್ಲವನ್ನೂ ಒಪ್ಪುವುದಕ್ಕಾಗಲಿಲ್ಲ, ಕೆಲವೊಂದು ಮಾತ್ರ ಒಪ್ಪಿದ್ದೇವೆಂದು ಹೇಳಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ನಾನು ಕ್ಲಾಸ್ ಬೈ ಕ್ಲಾಸ್ ಹೇಳಿ, ನಾನು ಮಾತನಾಡತಕ್ಕಂತಹ ಸಂದರ್ಭದಲ್ಲಿ ನಾವು ಈ ಅಮೆಂಡ್‌ಮೆಂಟ್‌ಗಳನ್ನು ತಂದಿದ್ದೇವೆ ಎಂದು ಹೇಳಿ ಒಂದು ಮಾತು ಕೂಡ ನಮಗೆ ಹೇಳಲಿಲ್ಲ. ನಾನು ಕ್ಲಾಸ್ ಬೈ ಕ್ಲಾಸ್ ಹೇಳಿದ್ದೇನೆ. ಎರಡು ದಿವಸ ಮೊದಲು ಕೊಡಬೇಕೆಂದು ನಿಯಮ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಮಗೆ ಎರಡು ದಿವಸ ಮೊದಲು ಕೊಡಬೇಕೆಂದು ನಿಯಮ ಇದೆ. ನಾವು ಯಾವುದೋ ಬಿಲ್ ಮೇಲೆ ಚರ್ಚೆ ಮಾಡಿದ್ದೇವೆ, ಇಲ್ಲಿ ಯಾವುದೋ ಬಿಲ್ ಪಾಸಾಗುತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ನಿಮಗೆ ಇಷ್ಟ ಬಂದ ಹಾಗೆ ಯಾರಿಗೋ circulate ಮಾಡಿ ನಮಗೆ ಕೊಟ್ಟಿದ್ದೇವೆ ಎಂದು ಹೇಳಿ ಬಿಟ್ಟರೆ, ಹೇಗೆ? ಬೇರೆಯವರಿಗೂ ಕೇಳಿ ಕೊಟ್ಟಿದ್ದಾರೇನೋ. ಯಾರಿಗೂ circulate ಮಾಡಿಲ್ಲ. ಬಿಲ್ ಎಂದರೆ Front Bench ನವರ propertyನ?

ಶ್ರೀ ಜೆ.ಸಿ. ಮಾಧುಸ್ವಾಮಿ :– ಕ್ಷಮಿಸಬೇಕು. ನೀವು ಈ ರೀತಿ ಮಾಡಿದರೆ ಆಗುವುದಿಲ್ಲ.

ಅಧ್ಯಕ್ಷರು :- ನಿನ್ನೆ ಎಲ್ಲಾ circulate ಮಾಡಿದ್ದಾರೆ. ಕೆಲವರಿಗೆ circulate ಮಾಡಿ ಕೆಲವರಿಗೆ ಏಕೆ ಬಿಡುತ್ತಾರೆ?

ಶ್ರೀ ಜೆ.ಸಿ. ಮಾಧುಸ್ವಾಮಿ :- ಈ ತರಹ ಬಿಸಿನೆಸ್ ನಡೆಸಿದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಅಲ್ಲ ಸಾರ್ ಅದಕ್ಕೆ ನಿಯಮ ಪದ್ಧತಿ ಏನೂ ಬೇಡವಾ?

Mr. SPEAKER :- Any howu, it has been circulated yesterday.

ಶ್ರೀ ಜೆ.ಸಿ. ಮಾಧುಸ್ವಾಮಿ :- ನಾವೇ ಬೇರೆ ಬಿಲ್ ಮೇಲೆ ಮಾತನಾಡುತ್ತಿದ್ದೇವೆ, ಅವರೇ ಬೇರೆ ಬಿಲ್ ಮೇಲೆ ಮಾತನಾಡುತ್ತಿದ್ದಾರೆ. ಮಂತ್ರಿಗಳು ಯಾವುದಾದರೂ ಬಿಲ್ಲನ್ನು ತಮ್ಮ ಕೈಗೆ ಕೊಟ್ಟು ಅದಕ್ಕೆ ಅಮೆಂಡ್‌ಮೆಂಟ್ ಮಾಡಿದರೆ, ಅಧ್ಯಕ್ಷರೆ, ಅವರ ಡ್ಯೂಟಿ, "ನಾನು ಕೊಟ್ಟಿರುವ ಈ ಬಿಲ್ಲಿನಲ್ಲಿ ಇಂತಿಂತಹ ಕ್ಲಾಸ್‌ಗಳಿಗೆ ಅಮೆಂಡ್‌ಮೆಂಟ್ ಪ್ರಪೋಸ್ ಮಾಡಿದ್ದೇನೆ. ಅಮೆಂಡ್‌ಮೆಂಟ್ ಕಾಪಿ ಹೀಗಿದೆ" ಎಂದು ಹೇಳಬೇಕು. ಅಥವಾ ಒರಿಜಿನಲ್ ಬಿಲ್ಲನ್ನು ವಾಪಸ್ ತೆಗೆದುಕೊಂಡು ಬೇರೆ ಬಿಲ್ಲನ್ನಾದರೂ ಅವರು ಇಡಬೇಕು. ಇದು ಯಾವುದೂ ನಡೆದಿಲ್ಲ. ನಾನು ನಿಮಗೆ ಹಾನೆಸ್ಟ್ ಆಗಿ ಹೇಳುತ್ತಿದ್ದೇನೆ, ನಮಗೆ ಯಾರಿಗೂ ಈ ಬಿಲ್ಲಿನ ಕಾಪಿಗಳು ಬಂದಿಲ್ಲ. ನಾವು ಇದು ಯಾವುದೂ ನೋಡಿ ಮಾತನಾಡಿಲ್ಲ. ನಾವು ಯಾವುದೋ ಬಿಲ್ಲನ್ನು ತೆಗೆದುಕೊಂಡು ಮಾತನಾಡಿದ್ದೇವೆ. ನಾವು ಮಾತನಾಡಿದ ಬಿಲ್ property of the House ಆಗಿದೆ. ಇನ್ನು ಸಭೆಯಲ್ಲಿ ಚರ್ಚೆಯಾಗುತ್ತಿದ್ದಾಗ ಸಡನ್ನಾಗಿ ಹೀಗೆ ರೈಸ್ ಮಾಡಿ ಮಾತನಾಡಿ ಬಿಟ್ಟರೆ ಏನು ಮಾಡುವುದು? ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕೊಡಿ ಎಂದು ನಾನು ಕೇಳಲಿಲ್ಲ. ಮಾನ್ಯ ಡಿ.ಆರ್. ಪಾಟೀಲ್‌ರವರು ಹೇಳಿದರು. ನಾನು 12 ಅಮೆಂಡ್‌ಮೆಂಟ್ ಪ್ರಪೋಸ್ ಮಾಡಿದ್ದೇನೆ ಎಂದು ಹೇಳಿದಾಗ ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಂದೆ ಹೋಗಲಿ ಬಿಡಿ ಅಲ್ಲಿ ತೀರ್ಮಾನವಾಗುತ್ತದೆ ಎಂದು ಹೇಳಿದ್ದಕ್ಕೆ ನಾವು ಒಪ್ಪಿಕೊಂಡೆವು. This has to be withdrawn.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಮಾನ್ಯ ಅಧ್ಯಕ್ಷರೆ, ದಯವಿಟ್ಟು ಇದನ್ನು ಆಲೋಚನೆ ಮಾಡಿ. ರೂಲ್ಸ್‌ಗೆ ವಿರುದ್ಧವಾಗುತ್ತದೆ. ಈ ಬಿಲ್ಲನ್ನು withdraw ಮಾಡಿ. ಅವರು ಬೇಕಾದರೆ ಮತ್ತೆ introduce ಮಾಡಲಿ.

ಶ್ರೀ ಶರಣಬಸಪ್ಪ ದರ್ಶನಾಪುರ :- ಅಗ್ರಿಕಲ್ಚರಿಸ್ಟ್ ಮೀನಿಂಗ್ ಏನಿದೆ ಅದನ್ನು ನಾವು ಈಗ ಮೂವ್ ಮಾಡುತ್ತೇವೆ.

ಶ್ರೀ ಎನ್. ಧರ್ಮಸಿಂಗ್ :- ಮಾನ್ಯ ಅಧ್ಯಕ್ಷರೆ, ಎಪಿಎಂಸಿ ಮಸೂದೆ ಇಟ್ಟಿದ್ದೀರಿ. ನಾನು ಮತ್ತು ಮಾನ್ಯ ಖರ್ಗೆಯವರು ಇದು ರೈತರ ಅನುಕೂಲಕ್ಕಾಗಿ ಇದೆ ಎಂದು ಸ್ವಾಗತ ಮಾಡಿದೆವು. ಸ್ವಾಗತ ಮಾಡಿದ ಮೇಲೆ ಮಾನ್ಯ ಮಾಧುಸ್ವಾಮಿಯವರು ಮತ್ತು ಶ್ರೀರಾಮರೆಡ್ಡಿಯವರು ಬಹಳಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಮಾನ್ಯ ಕೃಷ್ಣ ಬೈರೇಗೌಡರು ಬಹಳ ವಿವರವಾಗಿ ಮಾತನಾಡಿದ್ದಾರೆ. ವಿವರವಾಗಿ ಕೇವಲ ಭಾಷಣ ಅಥವಾ ಶುದ್ಧ ಕನ್ನಡದಲ್ಲಿ ಮಾತನಾಡಿದರು ಎಂದು ಅಲ್ಲ. ಬಹಳಷ್ಟು ವಿಚಾರಗಳನ್ನು ಅವರು ಓದಿಕೊಂಡು ಬಂದು ಮಾತನಾಡಿದ್ದಾರೆ. ತದನಂತರ ನಮ್ಮ ಮಾನ್ಯ ಶರಣಪ್ರಕಾಶ್‌ರವರು ಮತ್ತು ಶ್ರೀನಿವಾಸಗೌಡರು ಮಾತನಾಡಿದ್ದಾರೆ. ಇವತ್ತು ನಾನು ಮಾನ್ಯ ಮಂತ್ರಿಗಳಿಗೆ ಕೇಳುವುದೇನೆಂದರೆ, ವಿಭಿನ್ನವಾದ ವಿಚಾರಗಳು ಬರತಕ್ಕಂತಹ ರೀತಿಯಲ್ಲಿ ಇವತ್ತು ತಾವು ಅಧ್ಯಕ್ಷರಾಗಿದ್ದೀರಿ. ಇವತ್ತು ತಮ್ಮ ಬಿಲ್ಲು ಮಾನ್ಯ ಡಿ.ಆರ್. ಪಾಟೀಲ್‌ರು ಮಂಡಿಸಿದಂತಹ ಅಮೆಂಡ್‌ಮೆಂಟ್ ನಮ್ಮ ಮುಂದೆ ಇದೆ. ಅಧಿಕಾರಿಗಳು ಗ್ಯಾಲರಿಯಲ್ಲಿ ಕುಳಿತಿದ್ದಾರೆ, ಅವರೂ ಕೂಡ ಹೇಳಬೇಕು. ಇವೆಲ್ಲಾ ವಿಚಾರಗಳು ಬರಲಾರದೇ ಹೋದರೆ, ನಮಗೆ ಏನೂ ಬೆಳಕು ಚೆಲ್ಲುವುದಕ್ಕಾಗುವುದಿಲ್ಲ. ಮಾನ್ಯ ಮಾಧುಸ್ವಾಮಿಯವರು ಮತ್ತು ಶ್ರೀರಾಮರೆಡ್ಡಿಯವರ ಆಕ್ಷೇಪಣೆ ಏನೆಂದರೆ, ಯಾವ ಅಮೆಂಡ್‌ಮೆಂಟ್‌ಗೆ ಮಾನ್ಯ ಡಿ.ಆರ್. ಪಾಟೀಲರು ಕೊಟ್ಟಿದ್ದಾರೆ, ಮಾನ್ಯ ಡಿ.ಆರ್. ಪಾಟೀಲ್‌ರು ಕೊಟ್ಟ ಮೇಲೆ ನಿಮ್ಮ ಕಛೇರಿಯಿಂದ ಎಲ್ಲಾ ಕಡೆ ಅದು circulate ಆಗಬೇಕು. ಎಲ್ಲರಿಗೂ ಗೊತ್ತಾಗಬೇಕು. ಅಲ್ಲಿರತಕ್ಕಂತಹ ಅಧಿಕಾರಿಗಳು ಮೇಲಿಂದ ಮೇಲೆ ಬಿಲ್ಲಿನಲ್ಲಿ ಏನೇನಿದೆ ಎಂದು ಮಂತ್ರಿಗಳು ಹೇಳಬೇಕು. Democratic set up ನಲ್ಲಿ ಮಂತ್ರಿಗಳು ಯಾರೂ ಅಗ್ರಿಕಲ್ಚರ್ ಕಾಲದಲ್ಲಿ ಮಾರುಕಟ್ಟೆಯಲ್ಲಿ ದರಗಳನ್ನು ಓದಿಕೊಂಡು ಬರುವವರು ಅಲ್ಲ. ಜನಾಭಿಪ್ರಾಯ ಮಂಡಿಸತಕ್ಕಂತಹ ರೀತಿಯಲ್ಲಿ ಮಂತ್ರಿಗಳಾಗಿರುತ್ತೇವೆ. ಆದರೆ ಅಧಿಕಾರಿಗಳು ಇದರ ಬಗ್ಗೆ ಹೆಚ್ಚಿನ ಮಾಹಿತಿ ಕೊಡಬೇಕು. ನಿಮ್ಮ ಕಛೇರಿಯವರು ಕೂಡ ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕು. ಇವತ್ತು ಯಾರೂ ಕೂಡ ಅವರು ಕೊಟ್ಟಿರುವಂತಹ ಬಿಲ್ ಕೊಡಲಾರದೇ, circulate ಮಾಡಲಾರದೇ, ಮಾತನಾಡಿ ಎಂದು ಹೇಳಿದರೆ ಹೇಗೆ ಮಾತನಾಡುತ್ತಾರೆ? ಮಾನ್ಯ ಮಾಧುಸ್ವಾಮಿ is very ignorant. ಏನೂ ಗೊತ್ತಾಗಿಲ್ಲ. That is your duty. ನಿಮ್ಮ ಮೇಲೆ ಆರೋಪಿಸುತ್ತಾರೆಂದು ನೀವು

ಏನು ತಪ್ಪು ತಿಳಿದುಕೊಳ್ಳಬಾರದು. ನೀವು ಮಾಹಿತಿಯನ್ನು ಒದಗಿಸಿಕೊಡಬೇಕು. ಆಗ ಸಮಗ್ರವಾಗಿ ಚರ್ಚೆಯಾಗುತ್ತದೆ.

ಅಧ್ಯಕ್ಷರು :– ನಿನ್ನೆ ಎಲ್ಲಾ circulate ಆಗಿದೆ. ಧರ್ಮಸಿಂಗ್‌ರವರೇ ನನಗೂ ತೋರಿಸಿದ್ದಾರೆ. ಎಲ್ಲರಿಗೂ circulate ಮಾಡಿದ್ದಾರೆ. ಏನು ಎನ್ನುವುದು ಗೊತ್ತಾಗಲಿಲ್ಲ. ಕೆಲವರು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಕೆಲವರು ಇಲ್ಲವೆಂದು ಹೇಳುತ್ತಾರೆ. I can't say.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ದಯವಿಟ್ಟು ಕ್ಷಮಿಸಬೇಕು. ನಿನ್ನೆ ಕೊಟ್ಟಿಲ್ಲ. ನಾವು ಸುಳ್ಳು ಹೇಳಿದ್ದೇವಾ? ನಿನ್ನೆ ಬೆಳಿಗ್ಗೆ ನೀವು circulate ಮಾಡಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ :– ಅವರು ಕೊಟ್ಟಾಗ ಇವರು ನಾಲ್ಕು ಜನ ಇರಲಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ನಾವು ನಾಲ್ಕು ಜನ ಎದ್ದು ಹೋಗಿರತಕ್ಕಂಥಾದ್ದು ಪ್ರಶ್ನೆ ಅಲ್ಲ. ಇದು ಬಿಲ್ ಜೊತೆ circulate ಆಗಿಲ್ಲ.

ಅಧ್ಯಕ್ಷರು :– ಕೆಲವರು ಕೊಟ್ಟಿದ್ದಾರೆಂದು ಹೇಳುತ್ತಾರೆ, ಕೆಲವರು ಕೊಟ್ಟಿಲ್ಲವೆಂದು ಹೇಳುತ್ತೀರಿ. ಯಾರ್ಯಾರಿಗೆ ಕೊಟ್ಟಿದ್ದಾರೆ ಯಾರ್ಯಾರಿಗೆ ಕೊಟ್ಟಿಲ್ಲ ಎಂದು ಗೊತ್ತಿಲ್ಲ. ನಿನ್ನೆ ನಾನೇ ನೋಡಿ circulate ಮಾಡಿ ಎಂದು ಹೇಳಿದ್ದೇನೆ. circulate ಮಾಡಿದ್ದಾರೆ. That much I know.

ಶ್ರೀ ಕೆ. ಶ್ರೀನಿವಾಸಗೌಡ :– ಕೊಡುವುದು ನಿನ್ನೆ ಕೊಟ್ಟರು. ಕೊಡುವಾಗ ಇವರು ಇರಲಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ನಾವಿಬ್ಬರೂ ಇಲ್ಲದಿದ್ದಗೆ ಸದನ ನಡೆಯಬಾರದು ಎಂದು ಪ್ರಶ್ನೆ ಅಲ್ಲ. ಬಿಲ್ಲಿನ ಜೊತೆ ಅದು ಬರಬೇಕಾಗಿತ್ತು. ಅಮೆಂಡ್‌ಮೆಂಟ್ ಬಿಲ್ ಒರಿಜಿನಲ್ ಬಿಲ್ಲಿನ ಜೊತೆಯಲ್ಲಿ circulate ಆಗಬೇಕಲ್ಲ.

(5 ಘಂಟೆ)

ನೀವು ಹಾಗಾದರೆ ಅಮೆಂಡ್‌ಮೆಂಟ್ ಒಂದು ಸಲ, ಬಿಲ್ ಒಂದು ಸಲ ಕಳುಹಿಸುತ್ತೀರೇನು? ಯಾವ ನಿಯಮದಲ್ಲಿ ಈ ರೀತಿ ಇದೆ? ಮಾನ್ಯ ಅಧ್ಯಕ್ಷರೆ, ದಯವಿಟ್ಟು ತಾವೇ ಹೇಳಿ ಯಾವ ನಿಯಮದಲ್ಲಿ ಈ ರೀತಿ ಇದೆಯೆಂದು.

ಅಧ್ಯಕ್ಷರು :- ದಯವಿಟ್ಟು ತಾವು ಕೇಳಿ. ಈ ಬಿಲ್ ಲಾಸ್ಟ್ ಸೆಶನ್‌ನಲ್ಲಿಯೇ ಇಂಟ್ರಡ್ಯೂಸ್ ಆಗಿದೆ. ಈಗ ಕೆಲವು ಅಮೆಂಡ್‌ಮೆಂಟ್ಸ್‌ಗಳನ್ನು ಡಿ.ಆರ್. ಪಾಟೀಲರು ಮಾಡಿದರು. ಆಮೇಲೆ ಅದಕ್ಕೆ ಅವರು ಒಪ್ಪಿ ಸರ್ಕಾರದ ಪರವಾಗಿ ಮಂತ್ರಿಗಳು ಮಾತನಾಡಿ ಕೆಲವು ಒಪ್ಪಿರುವುದನ್ನು ಹೇಳಿದರು. ನಿನ್ನೆ ಸರ್ಕ್ಯುಲೇಟ್ ಆಗಿದೆ. ಅದು ಬಿಟ್ಟು ಕೆಲವರು ಸರ್ಕ್ಯುಲೇಟ್ ಆಗಿದೆಯೆಂದು ಹೇಳುತ್ತಾರೆ, ಕೆಲವರು ಸರ್ಕ್ಯುಲೇಟ್ ಆಗಿಲ್ಲವೆಂದು ಹೇಳುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- As amendments are circulated, ಅನ್ನೋ ಕ್ಲಾಸ್‌ನ್ನೇ, ಅಮೆಂಡ್‌ಮೆಂಟ್ಸ್ ಬಗ್ಗೆ ಕಮಿಟಿಯಲ್ಲಿ ಏನು ತೀರ್ಮಾನ ಮಾಡಿದೆ, " decided that members might be requested to table notices of amendments at least two days before the day the bill was to be taken up in the House." At least two days before ಆ ಅಮೆಂಡ್‌ಮೆಂಟ್ಸ್‌ಗಳನ್ನು ಸದನದಲ್ಲಿ ಇಡಬೇಕು. ಎಲ್ಲಿ ಇಟ್ಟಿದ್ದೀರಿ? ಯಾವಾಗ ಇಟ್ಟಿದ್ದೀರಿ? ನಿನ್ನೆ ಏಕೆ ನಾನು ಮಾತನಾಡುವ ಮುಂಚೆ ಅದನ್ನು ನನಗೆ ಒದಗಿಸಿರಲಿಲ್ಲ? How can it be passed?

ಶ್ರೀ ಶರಣಬಸಪ್ಪ ದರ್ಶನಾಪುರ್ :- ನಿನ್ನೆಯೇ ಕೊಟ್ಟಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- Two days ಅಂತಿದೆ. Not only yesterday morning. It is two days before.

ಶ್ರೀ ಶರಣಬಸಪ್ಪ ದರ್ಶನಾಪುರ್ :- ಕಳೆದ ಅಧಿವೇಶನದಲ್ಲಿಯೇ ಡಿ.ಆರ್. ಪಾಟೀಲರು ಕೆಲವು ತಿದ್ದುಪಡಿಗಳನ್ನು ತರಬೇಕೆಂದು ಹೇಳಿದ್ದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಲಾಸ್ಟ್ ಸೆಶನ್‌ನಲ್ಲಿ ನೀವು ಅಮೆಂಡ್‌ಮೆಂಟ್ ಕೊಟ್ಟಿದ್ದೀರ?

ಶ್ರೀ ಹೆಚ್.ಡಿ. ರೇವಣ್ಣ :- ಲಾಸ್ಟ್ ಸೆಶನ್‌ನಲ್ಲಿಯೇ ಮಾನ್ಯ ಡಿ. ಆರ್. ಪಾಟೀಲರು ಕೊಟ್ಟಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಲಾಸ್ಟ್ ಸೆಶನ್‌ನಲ್ಲಿ ಅಮೆಂಡ್‌ಮೆಂಟ್ ಬಗ್ಗೆ ಕೊಟ್ಟಿದ್ದರೆ ನಮಗೆ ಕೊಟ್ಟಿರುವ ಬಿಲ್‌ನೊಡನೆ ಅದನ್ನು ಸೇರಿಸಿರಬೇಕಾಗಿತ್ತು.

ಅಧ್ಯಕ್ಷರು :- "Notice of Amendments" 19(1) ನಲ್ಲಿ ಏನು ಹೇಳಲಾಗಿದೆಯೆಂದರೆ, " A notice of Amendment to a clause or

schedule of the Bill has not been given one clear day before the day on which the Bill is to be considered. Any member may object to the moving of the Amendments and such objection shall prevail unless the Speaker announces the Amendment to be moved. ಒಂದು ದಿವಸ ಎಂದು ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಹೌದು, ನಿನೆ ಆ ಬಿಲ್‌ನ್ನು ಜನ್ಸಿಡರೇಶನ್‌ಗೆ ನೀವು ತಂದಿರುವುದು. ನಿನ್ನೆಗೆ ಒಂದು ಕ್ಲಿಯರ್ ಡೇ ಮುಂಚೆಯೇ ನಮಗೆ ಅಮೆಂಡ್‌ಮೆಂಟ್ಸ್‌ಗಳನ್ನು ಕೊಟ್ಟಿದ್ದರೆ?

ಶ್ರೀ ಹೆಚ್.ಡಿ. ರೇವಣ್ಣ :- ಫ್ರೈಡೇ ಕೊಟ್ಟಿರುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ :- ಸಾರ್ ನೀವು ಸುಮ್ಮನಿರಿ ಸಾರ್, ಇದಕ್ಕೆ ನೀವು ಇಂಟರ್‌ಫಿಯರ್ ಆಗಬೇಡಿ. ನೀವು ಸರ್ಕಾರದಲ್ಲಿ ಇಂಟರ್‌ಫಿಯರ್ ಆದ ಹಾಗೆ ಅಸೆಂಬ್ಲಿಯಲ್ಲಿಯೂ ಇಂಟರ್‌ಫಿಯರ್ ಆಗುವುದಕ್ಕೆ ಶುರುವಾದರೆ ಹೇಗೆ? ನಮಗೆ ರೂಲ್ ಪ್ರಕಾರ ಒನ್ ಕ್ಲಿಯರ್ ಡೇ ಎಂದರೆ, ನಮಗೆ ಅಮೆಂಡ್‌ಮೆಂಟ್ಸ್ ಪ್ರತಿ ಮೊನ್ನೆ ದಿವಸವೇ ಸರ್ಕ್ಯುಲೇಟ್ ಆಗಬೇಕಾಗಿತ್ತು. ನಿಮ್ಮ ರೂಲ್ಸ್ ಪ್ರಕಾರವೇ ಹೇಳುತ್ತಿದ್ದೇನೆ. But here, it is two days. ಪಾರ್ಲಿಮೆಂಟ್ ಕಮಿಟಿ ಡಿಸೈಡ್ ಮಾಡಿರುವುದು ಎರಡು ದಿವಸ ಮುಂಚೆ ಎಂದು. ಆಮೇಲೆ 2, 3, 4, ಅಮೆಂಡ್‌ಮೆಂಟ್ಸ್‌ಗಳನ್ನು ತಂದರೆ ಏನು ಮಾಡಬೇಕೆಂಬುದರ ಬಗ್ಗೆಯೂ ಅವರ ಹತ್ತಿರವೇ ಇರುವ ರೂಲ್ಸ್‌ನ್ನು ತಾವು ಓದಿಸಿ. It is for one amendment. ಆಮೇಲೆ ಹೆಚ್ಚು ಅಮೆಂಡ್‌ಮೆಂಟ್ಸ್‌ಗಳನ್ನು ಒಂದನೆಯದು ಆದ ಮೇಲೆ ಏನು ಏನು ಮಾಡಬೇಕು, ಎರಡನೆಯದಾದ ಮೇಲೆ ಏನು ಮಾಡಬೇಕು ಎಂಬುದರ ಬಗ್ಗೆ ಸ್ಪಷ್ಟವಾದ ನಿಯಮಗಳಿವೆ ಸಾರ್. One clear day before consideration. Yesterday was the consideration for the Bill. ಯಾವುದೋ ಕಾರಣಕ್ಕೆ ಅದು ಮುಂದಕ್ಕೆ ಬಂದಿದೆ ಅಧ್ಯಕ್ಷರೆ, ತಾವು ನಿನ್ನೆಯೇ ಆ ಬಿಲ್‌ನ್ನು ಪರ್ಯಾಯಲೋಚನೆಗೆ ತೆಗೆದುಕೊಂಡಿರಿ. So, it is for consideration yesterday. ಆದರೆ ಮೊನ್ನೆ ದಿವಸ ನಮುಗ್ಯಾರಿಗೂ ಅದು ಸರ್ಕ್ಯುಲೇಟ್ ಆಗಲೇ ಇಲ್ಲವಲ್ಲ. ಆದುದರಿಂದ ತಾವು ದಯಮಾಡಿ ಈ ಬಿಲ್‌ನ್ನು ವಿತ್‌ಡ್ರಾ ಮಾಡಿಸಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಒನ್ ಕ್ಲಿಯರ್ ಡೇ ಎಂದು ಹೇಳಿದರೆ ಭಾನುವಾರ ಮತ್ತು ಶನಿವಾರ ರಜಾ ಇದ್ದ ಕಾರಣ ಶುಕ್ರವಾರವೇ ನಮಗೆ ಬಿಲ್ ಸರ್ಕ್ಯುಲೇಟ್ ಆಗಬೇಕಾಗಿತ್ತು.

ಶ್ರೀ ಜೆ.ಸಿ. ಮಾಧುಸ್ವಾಮಿ :- If at all they are knowing as to what the amendments proposed, ನಮಗೆ ಕೊಟ್ಟಿದ್ದರೆ ಅದರ ಮೇಲೆಯೇ ಮಾತನಾಡುತ್ತಿದ್ದೆವು.

ಶ್ರೀ ಡಿ.ಆರ್. ಪಾಟೀಲ್ :- ನಿನ್ನೆ ಕೊಟ್ಟಿದ್ದಾರೆ. ಎಲ್ಲರಿಗೂ ಕೊಟ್ಟಿಲ್ಲವೇನೋ ಎಂದು ಕಾಣಿಸುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಿನ್ನೆ ಕೊಟ್ಟಿದ್ದರೂ ಕೂಡ ಅದು ಸರಿಯಲ್ಲ.

ಶ್ರೀ ಹೆಚ್.ಡಿ. ರೇವಣ್ಣ :- ಈಗ ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಈಗಲೇ ಆಗುವುದಿಲ್ಲ. ನಾವು ಅಮೆಂಡ್‌ಮೆಂಟ್ಸ್‌ಗಳನ್ನು ಓದಬೇಕಲ್ಲ. ಬಿಲ್ ಮೇಲೆಯೇ ನಿನ್ನೆ ಮಾತನಾಡಿದ್ದನ್ನೇ ಇವೊತ್ತು ಮಾತನಾಡುವುದಕ್ಕಾಗುತ್ತದೆಯೇ? ಮಾನ್ಯ ಅಧ್ಯಕ್ಷರೆ, ದಯಮಾಡಿ ಇದನ್ನು ವಿತ್‌ಡ್ರಾ ಮಾಡಬೇಕು. If at all he is proposing an amended Bill, ವಿತ್‌ಡ್ರಾ ಮಾಡಿ ಎರಡು ದಿವಸವಾದ ಮೇಲೆ ಫ್ರೆಶ್ ಬಿಲ್‌ನ್ನು ಇಂಟ್ರಡ್ಯೂಸ್ ಮಾಡುವಂತೆ ತಾವು ಅವರಿಗೆ ಹೇಳಬೇಕು.

ಶ್ರೀ ಕೆ. ಶ್ರೀನಿವಾಸಗೌಡ :- ಮಾನ್ಯ ಅಧ್ಯಕ್ಷರೆ, ಅವರು ಮೊದಲೇ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಇದನ್ನು ರೆಫರ್ ಮಾಡಬೇಕೆಂದು ಕೇಳಿದ್ದರು. ನಾನು ಹೇಳುವುದೇನೆಂದರೆ ಇವೊತ್ತು ಈ ಬಿಲ್ ಪಾಸಾಗಬೇಕು. ಈ ಬಿಲ್ ನಿನ್ನೆಯೇ ಕೊಟ್ಟಿರುವುದು ನಿಜ. ನಾನು ಈ ಬಿಲ್‌ನ್ನು ನೋಡಿದ್ದೇನೆ. ಇವರು ಆ ಸಮಯದಲ್ಲಿ ಯಾರೂ ಇರಲಿಲ್ಲ. ಮೊಸರಲ್ಲಿ ಕಲ್ಲು ಹುಡುಕಿದರೆ ಆಗುವುದಿಲ್ಲ ಮಾನ್ಯ ಅಧ್ಯಕ್ಷರೆ. ನೀವು ಮೊದಲು ಬಿಲ್ ಓಟಗೆ ಹಾಕಿ. ಬಿಲ್ ಪಾಸ್ ಮಾಡಿಕೊಳ್ಳಿ. ಸುಮ್ಮನೆ ಎಷ್ಟು ಹೊತ್ತು ಅಂತ ಚರ್ಚೆ ಮಾಡುತ್ತೀರಿ?

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೆ, ಈ ಸಭೆಗೆ ಒಂದು ನಿಯಮವೆನ್ನುವುದು ಇಲ್ಲವೇ? ರೂಲ್ಸ್ ಇಲ್ಲವೇ? ನಾವು ಅಧ್ಯಕ್ಷರ ಅಪ್ಪಣೆ ಪಡೆದು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿರುವಾಗ ಇವರು ರೂಲ್ಸ್‌ನಲ್ಲಿದೆ ನೀವು ಓಟ್‌ಗೆ ಹಾಕಿ ಎಂದು ಮಧ್ಯೆ ಹೇಳುವಂತಾದರೆ ನಾವು ಏಕೆ ಇಲ್ಲಿ ಕುಳಿತುಕೊಳ್ಳಬೇಕು

ಹೇಳಿ? ಪುಸ್ತಕದಲ್ಲಿ ಪ್ರಿಂಟ್ ಮಾಡಿರುವುದನ್ನು ಓದಿ ನಾವು ಹೇಳುತ್ತಿದ್ದೇವೆ. ನಿಮಗೆ ಇದು ಬೇಡದಿದ್ದರೆ ಆ ರೂಲ್ಸ್‌ನ್ನೇ ತೆಗೆದುಹಾಕಿಬಿಡಿ. ವೇವ್ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್ :- ರೂಲ್ ಇರುವುದು ಸರಿ. ಆದರೆ ಎಷ್ಟೋ ಸಲ ಅಮೆಂಡ್‌ಮೆಂಟ್‌ಗಳ ಬಗ್ಗೆ ಚರ್ಚೆ ನಡೆದಾಗ ಅವರೂ ನಾವೂ ಒಪ್ಪಿಕೊಂಡೇ ಅಮೆಂಡ್‌ಮೆಂಟ್ ಆಗಿದೆ. ತಕರಾರು ಮಾಡಿದರೆ ಅವರು ಹೇಳಿದ ಹಾಗೆ ನಡೆಯುತ್ತದೆ. ಸರ್ಕಾರ ಮತ್ತು ವಿರೋಧ ಪಕ್ಷದವರೆಲ್ಲರೂ ಒಪ್ಪಿಕೊಂಡರೆ ಅಧ್ಯಕ್ಷರು ಪರವಾನಗಿ ಕೊಟ್ಟರೆ ಹಾಗೆಯೇ ಮಾಡಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ :- ಸರ್ಕಾರ ಆ ದಿನ ಬಿಲ್ ಮೇಲೆ ತಂದಿರುವ ಅಮೆಂಡ್‌ಮೆಂಟ್ ಇದಲ್ಲ. A member proposing an amendment.

ಅಧ್ಯಕ್ಷರು :- ಈಗ ನೀವು ಒನ್ ಡೇ ಎಂದು ಏನಿದೆ ಆ ಪ್ರಕಾರ ಮೊದಲೇ ಕೊಟ್ಟಿರಲಿಲ್ಲವೆಂದು ಹೇಳುತ್ತಿದ್ದೀರಿ. ನಿನ್ನೆ ಸರ್ಕ್ಯುಲೇಟ್ ಮಾಡಿದ್ದಾರೆ. ನಿನ್ನೆ ಅನೌನ್ಸ್ ಮಾಡಿದ್ದಾರೆ. ನಿನ್ನೆ ಏಕೆ ಕನ್ಸಿಡರೇಶನ್‌ಗೆ ಇಟ್ಟರು, ಅದಕ್ಕಿಂತ ಹಿಂದೆ ಇಡಬೇಕಾಗಿತ್ತು ಎಂದು ನಿಮ್ಮ ವಾದವಾಗಿದೆ. ಈಗೇನಾಗಿದೆ, ನಮ್ಮ ಎಸ್.ಎಸ್. ಪಾಟೀಲರು ಹೇಳುವ ರೀತಿಯಲ್ಲಿ ಚರ್ಚೆಯಲ್ಲಿ ಕೆಲವು ಅಮೆಂಡ್‌ಮೆಂಟ್‌ಗಳನ್ನು ಮಾಡಿ ಎಂದು ಹೇಳಿದರೆ ಅದನ್ನು ಸರ್ಕಾರ ಒಪ್ಪಿಕೊಂಡು ಅದೇ ರೀತಿಯಲ್ಲಿ ಪಾಸ್ ಆಗಿರತಕ್ಕಂಥ ಸಂಪ್ರದಾಯವೂ ಇದೆ. ಆದುದರಿಂದ ನೀವು, one cannot stand on prestige.

ಶ್ರೀ ಜೆ.ಸಿ. ಮಾಧುಸ್ವಾಮಿ :- ನಮಗೇನು ಇದರಲ್ಲಿ ಪ್ರೆಸ್ಟೀಜ್ ಸಾರ್? ಪ್ರೆಸ್ಟೀಜ್ ತೋರಿಸುವುದಕ್ಕೆ ನಮ್ಮದೇನೂ ಮೆಜಾರಿಟಿ ಇದೆಯೇ? ನಮ್ಮ ಅಭಿಪ್ರಾಯವನ್ನು ನಾವು ಹೇಳುತ್ತೇವಷ್ಟೇ. ಮೆಂಬರ್ ಪ್ರಪೋಸ್ ಮಾಡಿದ ಬಿಲ್‌ನ್ನು ಹೇಗೆ ಇಲ್ಲಿ ಪ್ರೊಡ್ಯೂಸ್ ಮಾಡಬೇಕು ಎಂಬುದಕ್ಕೆ ನಿಯಮವಿದೆ. ಸರ್ಕಾರವೇ ಬಿಲ್‌ನ್ನು ಪರ್ಯಾಲೋಚನೆಗೆ ತಂದಾಗ ಎಲ್ಲಿ ಅದರಲ್ಲಿ ತಿದ್ದುಪಡಿಯನ್ನು ಡಿಲೀಟ್ ಮಾಡಬಹುದು, ಅಡಿಶನ್ ಮಾಡಬಹುದು ಎಂಬುದನ್ನೂ ಹೇಳುವುದಕ್ಕೂ ಕೂಡ ನಿಯಮವಿದೆ. ಅವರು on their own ಇದನ್ನು ಡಿಲೀಟ್ .ಮಾಡುತ್ತೇನೆ ಎಂದು ಹೇಳಿ ಕನ್ಸಿಡರೇಶನ್ ಪಾಯಿಂಟ್‌ನಲ್ಲಿ ಹೇಳಿದಾಗ ನಾವ್ಯಾರೂ ಟೀಕೆ ಮಾಡಲಿಲ್ಲ. ಮಾಡುವುದೂ ಇಲ್ಲ. If he is convinced by the argument of other members and drops some items or add some items, ಮೂವ್ ಮಾಡುತ್ತೇವೆ ಎಂದು ಹೇಳಿದರೆ ನಮ್ಮದೇನೂ ತಕರಾರಿಲ್ಲ.

ಆದರೆ ಒಬ್ಬ ಮೆಂಬರ್ ಮೂವ್ ಮಾಡುವಂಥ ಅಮೆಂಡ್‌ಮೆಂಟ್ಸ್ ಬೇರೆ ಮೆಂಬರ್‌ಗಳೂ ಕೂಡ ಮಾತನಾಡುವುದಕ್ಕೆ ಮೊದಲೇ ಆ ಅಮೆಂಡ್‌ಮೆಂಟ್ಸ್‌ಗಳ ಪ್ರತಿ ಅವ್ಯೆಲಬಲ್ ಇರಬೇಕು ಎಂದು ನಿಯಮ ಮಾಡಿರುವುದು. ಈಗ ಅವರು ಈಗಾಗಲೇ ಈ ಅಮೆಂಡ್‌ಮೆಂಟ್‌ಗಳನ್ನು ಸನ್ಮಾನ್ಯ ಡಿ.ಆರ್. ಪಾಟೀಲರು ಮೂವ್ ಮಾಡುತ್ತಿರುವುದು ಎಂದು ಹೇಳಿಬಿಟ್ಟಿದ್ದಾರೆ. If the Government has moved, ಆ ಒರಿಜಿನಲ್ ಬಿಲ್‌ನಲ್ಲಿಯೇ ಪ್ರಿಂಟ್ ಆಗಿ ಬರುತ್ತಿತ್ತು ಅಥವಾ ಅವರು ಎದ್ದುನಿಂತುಕೊಂಡು ಹೇಳುತ್ತಿದ್ದರು. ನಾನು ಇಂಥ ಬಿಲ್‌ನ್ನು ಇಂಟ್ರಡ್ಯೂಸ್ ಮಾಡಿದ್ದರೂ ಕೂಡ ಕನ್ಸಿಡರೇಶನ್ ಕೇಳುವಾಗ ಅವರು ಹೇಳಬೇಕಲ್ಲ. I have amended such and such clause ಎಂದು ಹೇಳಿ. ಅದ್ಯಾವುದನ್ನೂ ಅವರು ಹೇಳಲೇ ಇಲ್ಲ. ಅವರು ಒರಿಜಿನಲ್ ಬಿಲ್ ಅನ್ನು ಮಾತ್ರ ಇಲ್ಲಿ ಪೈಲಟ್ ಮಾಡಿದರು. ಈಗ ನಾವು ಮಾತನಾಡುವುದಕ್ಕೆ ಆಗಿಲ್ಲ. ನಮ್ಮ ಹಕ್ಕಿಗೆ ಚ್ಯುತಿಯಾಗಿದೆ ನಮಗೆ ಆ ಅಮೆಂಡ್‌ಮೆಂಟ್ಸ್‌ಗಳು ಏನು ಎಂಬುದೇ ಗೊತ್ತಿಲ್ಲ. ಆ ಕಾಪಿ ನಮ್ಮ ಹತ್ತಿರ ಇಲ್ಲ. ಅದನ್ನು ಸರ್ಕಾರ ಒಪ್ಪಿಕೊಂಡಿದ್ದರೆ ಯಾವಾಗ ಒಪ್ಪಿಕೊಂಡಿತು ಎಂಬುದು ನಮಗೆ ಗೊತ್ತಾಗಬೇಕು. ಮಾನ್ಯ ಪಾಟೀಲರು ಕಳುಹಿಸಿದ್ದೆಲ್ಲವನ್ನೂ ಕೂಡ ಸರ್ಕಾರ ಒಪ್ಪಿದ್ದರೆ ಇಲ್ಲಿ ಚರ್ಚೆಯಾಗುತ್ತಿರಲಿಲ್ಲವೇನೋ. ಆದರೆ ಸರ್ಕಾರ ಕೆಲವು ಒಪ್ಪಿದ್ದು ಕೆಲವು ಒಪ್ಪಿಲ್ಲವೆಂದು ಹೇಳುತ್ತಿದೆ. ಯಾವು ಈ ಬಗ್ಗೆ ತೀರ್ಮಾನ ಮಾಡುವವರು? ಅದರ ಬಗ್ಗೆ ಹೇಳುವುದು ಹೇಗೆ? ಯಾವುದರ ಬಗ್ಗೆ ಇಲ್ಲಿ ಚರ್ಚೆ ನಡೆಯಬೇಕು ಎಂಬ ಬಗ್ಗೆ ತಾವು ಸ್ಪೀಕರ್ ಆಗಿರುವವರು ಈ ಸದನವನ್ನು ಕಾನೂನುಬದ್ಧವಾಗಿ ನಡೆಸಬೇಕು ಸ್ವಾಮಿ.

ಅಧ್ಯಕ್ಷರು :– ಕಾನೂನುಬದ್ಧವಾಗಿಯೇ ನಡೆಸುತ್ತಿರುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಿಮ್ಮ ಕಾನೂನಿನಲ್ಲಿಯೇ one day before ಇಲ್ಲಿ ಇಡಬೇಕು ಎಂದು ಇದೆ. ಪಾರ್ಲಿಮೆಂಟ್‌ನಲ್ಲಿ two days before ಇಡಬೇಕೆಂದು ಇದೆ. ಅದಕ್ಕೆ ತಾವೇನು ಹೇಳುತ್ತೀರಿ ಹೇಳಿ. This House has to be run on Rules.

ಶ್ರೀ ಡಿ.ಆರ್. ಪಾಟೀಲ್ :– ಮಾನ್ಯ ಅಧ್ಯಕ್ಷರೆ, ನಾನು ......

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕ್ಷರೆ, ನೀವು ನಮಗೆ ಈ ಬಗ್ಗೆ ಹೇಳುವ ಮುಂಚೆ ಅವರು ಹೇಗೆ ಮಾತನಾಡುವುದಕ್ಕೆ ಆಗುತ್ತದೆ? We cannot take amendments for consideration at this stage. ಒರಿಜಿನಲ್ ಬಿಲ್

ಮೇಲೆ ಅವರು ಮಾತನಾಡುವುದಾದರೆ ನಾವೇನೂ ಕೇಳುವುದಿಲ್ಲ. ನಾವು ಅದಕ್ಕೇ ಸುಮ್ಮನೆ ಕುಳಿತಿದ್ದೆವು. ಬೇರೆಯವರೂ ಯಾರೂ ಕೂಡ ಟಚ್ ಮಾಡಲಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ :- ಮಾನ್ಯ ಅಧ್ಯಕ್ಷರೆ, ಈ ಮನೆಯಲ್ಲಿ ಅನೇಕ ವಿಷಯಗಳನ್ನು ಚರ್ಚೆ ಮಾಡುವಾಗ ನಾವೆಲ್ಲ ಬಾವಿಯಲ್ಲಿ ಕುಳಿತಿದ್ದರೂ ಕೂಡ ನೀವು ಬಿಲ್‌ಗಳನ್ನು ಪಾಸ್ ಮಾಡಿದ್ದೀರಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೆ, ಇದೇನು ಇದು ಅಸೆಂಬ್ಲಿಯೋ ಅಥವಾ ಏನು? ಇಲ್ಲಿ ಏನು ಕಥೆ ನಡೆಯುತ್ತಿದೆ?

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೆ, ದಯವಿಟ್ಟು ಈ ಬಿಲ್ ಅನ್ನು ವಿತ್‌ಡ್ರಾ ಮಾಡುವುದಕ್ಕೆ ಹೇಳಿ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ :- ಮಾನ್ಯ ಅಧ್ಯಕ್ಷರೆ, ಬಿಲ್ ಅನ್ನು ತಾವು ಓಟ್‌ಗೆ ಹಾಕಿ. ಏನಾಗುತ್ತದೋ ಆಗಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಓಟ್‌ಗೆ ಹಾಕುವುದು ಯಾವುದು, ಕಾನೂನು ಯಾವುದು, ನಿಯಮ ಯಾವುದು, ಇದೆಲ್ಲಾ ತೀರ್ಮಾನವಾಗಬೇಕು.

ಶ್ರೀ ಕೆ. ಶ್ರೀನಿವಾಸಗೌಡ :- ಮಾನ್ಯ ಅಧ್ಯಕ್ಷರೆ, ನಾವು ಹಿಂದೆ ಎಷ್ಟೋ ಬಾರಿ ಬಾವಿಯಲ್ಲಿ ನಿಂತುಕೊಂಡು ಇಂಥದ್ದನ್ನು ಮಾಡಬಾರದು ಎಂದು ಸ್ಲೋಗನ್‌ಗಳನ್ನು ಹಾಕಿದರೂ ಕೂಡ ನೀವು ಬಿಲ್ ಬಗ್ಗೆ ಓಟ್‌ಗೆ ಹಾಕಿರುವುದು ನಡೆದಿದೆ. ಓಟ್‌ಗೆ ಹಾಕಿ ಪಾಸ್ ಮಾಡಿಸಿದ್ದೀರಿ. ಇವೊತ್ತು ಕೂಡ ಆ ಹಿಂದಿನವುಗಳನ್ನು ತಾವು ಜ್ಞಾಪಕದಲ್ಲಿಟ್ಟುಕೊಳ್ಳಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :- ಶ್ರೀನಿವಾಸಗೌಡರೆ, ತಾವು ಮಂತ್ರಿಗಳಾಗಿದ್ದವರು, ತಾವು ಈ ರೀತಿ ಹೇಳಿದರೆ ಹೇಗೆ.

ಶ್ರೀ ಕೆ. ಶ್ರೀನಿವಾಸಗೌಡ :- ನನಗೆ ಈ ಬಿಲ್ ಬಗ್ಗೆ ಇಂಟರೆಸ್ಟ್ ಇರುವುದರಿಂದಲೇ ಹಿಂದೆ ನಡೆದಿರುವಂಥದ್ದರ ಬಗ್ಗೆ ಈ ಸಭೆಯಲ್ಲಿ ಮಾತನಾಡಿ ಹೇಳುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಮಾನ್ಯ ಅಧ್ಯಕ್ಷರೆ, ಶ್ರೀನಿವಾಸಗೌಡರಿಗೆ ಇಂಟರೆಸ್ಟ್ ಇದೆ ಎಂದು ಹೇಳಿ ಅವರೊಬ್ಬರಿಗೋಸ್ಕರ ಈ ಬಿಲ್ ಅನ್ನು ಪಾಸ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ :- ನನಗೋಸ್ಕರ ಎಂದು ನಾನು ಹೇಳುತ್ತಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- I am interested ಎಂದು ನೀವು ಹೇಳುತ್ತಿದ್ದೀರಿ.

ಶ್ರೀ ಕೆ. ಶ್ರೀನಿವಾಸಗೌಡ :- ನಾನು ಆ ರೀತಿ ಹೇಳಲಿಲ್ಲ. ಒಟ್ಟಿನಲ್ಲಿ ಈ ಬಿಲ್ ಇವೊತ್ತು ಪಾಸ್ ಆಗಬೇಕು ಎಂದು ಹೇಳುತ್ತಿರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಇವೊತ್ತು ಪಾಸ್ ಆಗುವುದಕ್ಕೆ ನಿಯಮ ಅಡ್ಡಿ ಬರುತ್ತದೆ ಎಂದು ನಾವು ಹೇಳುತ್ತಿದ್ದೇವೆ.

ಅಧ್ಯಕ್ಷರು :- ಆಯಿತು, ಆಯಿತು, ಕೃಷ್ಣಬೈರೇಗೌಡರು ಏನೋ ಮಾತನಾಡುತ್ತಾರಂತೆ. ಅವರು ಮಾತನಾಡಲಿ.

ಶ್ರೀ ಕೃಷ್ಣಾ ಬೈರೇಗೌಡ :- ಮಾನ್ಯ ಅಧ್ಯಕ್ಷರೆ, ಅಮೆಂಡ್‌ಮೆಂಟ್ಸ್‌ಗಳನ್ನು ಮೂವ್ ಮಾಡಿರುವವರು ಮಾನ್ಯ ಡಿ.ಆರ್. ಪಾಟೀಲ್‌ರವರು. ಅವರು ಕಳೆದ ಅಧಿವೇಶನದಲ್ಲಿಯೇ ಮೂವ್ ಮಾಡಿದ್ದಾರೆ. ಆದಕಾರಣ ಆ ಬಗ್ಗೆ ಸರ್ಕಾರ ಏನು ಉತ್ತರ ಕೊಡುತ್ತದೆಯೋ ಅದನ್ನು ಕೊಟ್ಟರೆ ನಮಗೆ ಸಮಾಧಾನವಿದ್ದರೆ ಈ ವಿಷಯದಲ್ಲಿ ಸರ್ಕಾರಕ್ಕೆ ಸಹಕಾರ ಕೊಡುವುದಕ್ಕೆ ನಾವು ತಯಾರಿದ್ದೇವೆ. ಡಿ.ಆರ್. ಪಾಟೀಲರು ಮಾತನಾಡುವುದಕ್ಕೆ ತಾವು ಹೇಳಿ.

ಅಧ್ಯಕ್ಷರು :- ಆಯಿತು. ಡಿ.ಆರ್. ಪಾಟೀಲರೆ ತಾವು ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೆ, ನಾವು ಹೇಳಿದ್ದಕ್ಕೆ ನೀವು ಏನೂ ಹೇಳಲೇ ಇಲ್ಲ.

ಅಧ್ಯಕ್ಷರು :- ಆಯಿತು, ಆಯಿತು,.

ಶ್ರೀ ಜೆ.ಸಿ. ಮಾಧುಸ್ವಾಮಿ :- ಆಯಿತು, ಆಯಿತು ಎಂದು ಹೇಳಿಬಿಟ್ಟರೆ ಹೇಗೆ.

ಅಧ್ಯಕ್ಷರು :- Let me hear.

ಶ್ರೀ ಜೆ.ಸಿ. ಮಾಧುಸ್ವಾಮಿ :- ತಾವು ಅಮೆಂಡ್‌ಮೆಂಟ್ಸ್‌ನ್ನು ಕನ್ಸಿಡರ್ ಮಾಡುವುದಕ್ಕೆ ಕಾನೂನುಪ್ರಕಾರವಾಗಿ ಅವಕಾಶವಿಲ್ಲ. ನೀವು ಈ ಶಾಸನಸಭೆಯ ನಿಯಮಗಳ ಪ್ರಕಾರ ಶಾಸನಸಭೆಯನ್ನು ನಡೆಸಬೇಕು. ತಾವೇ ರೂಲ್ಸ್ ಪುಸ್ತಕವನ್ನು ಓದಿ ಹೇಳಿದ್ದೀರಿ, ಒಂದು ದಿವಸ ಮೊದಲೇ ಆದರೂ ಸರ್ಕ್ಯುಲೇಟ್ ಆಗಬೇಕೆಂದು ಹೇಳಿದ್ದೀರಿ. ಓದು ಎಂದರೆ ನಾನು ಓದಿ ಹೇಳುತ್ತೇನೆ. ಅಮೆಂಡ್‌ಮೆಂಟ್ ಬಿಲ್‌ಅನ್ನು ಹೇಗೆ ತರಬೇಕು? ಒಂದಾದ ಮೇಲೆ ಒಂದು ಹೇಗೆ ತರಬೇಕು? ಅದು ಯಾವುದೂ ಇಲ್ಲಿ ನಡೆಯುತ್ತಿಲ್ಲ. ಹೇಗೆ ಚರ್ಚೆ ಮಾಡುತ್ತೀರಿ?

ಅಧ್ಯಕ್ಷರು :- ಮಾತನಾಡಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಅಮೆಂಡ್‌ಮೆಂಟ್ ಬಿಲ್ ಕುರಿತು ಮಾತನಡುವುದಿದ್ದರೆ ನೀವು ruling ಕೊಟ್ಟಮೇಲೆ ಮಾತನಾಡಬೇಕು. ಅದು ಬಿಟ್ಟು original bill ಬಗ್ಗೆ ಮಾತನಾಡುವುದಿದ್ದರೆ ನಮ್ಮದೇನೂ ತಕರಾರು ಇಲ್ಲ.

ಅಧ್ಯಕ್ಷರು :- ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಯಾವುದರ ಬಗ್ಗೆ ಮಾತನಾಡುತ್ತೀರಿ ಎಂದು ಹೇಳಬೇಕು.

ಶ್ರೀ ಡಿ.ಆರ್. ಪಾಟೀಲ್ :- ನಾನು ಅಮೆಂಡ್‌ಮೆಂಟ್ ಬಿಲ್ ಬಗ್ಗೆ ಮಾತನಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಇದನ್ನು ಯಾವಾಗ ಪ್ರಪೋಸ್ ಮಾಡಿದ್ದು? ಇದನ್ನು ಕನ್ಸಿಡರೇಶನ್‌ಗೆ ತೆಗೆದುಕೊಂಡಿದ್ದು ಯಾವಾಗ? ಇದನ್ನು ಮೆಂಬರ್ಸ್‌ಗೆ ಹೇಳಿದ್ದು ಯಾವಾಗ?

ಅಧ್ಯಕ್ಷರು :- ಆಯಿತು, ಅವರು ಮಾತನಾಡಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನಾವು ಏಕೆ ಈ ಸಭೆಗೆ ಬಂದಿದ್ದೇವೆ? Last session ನಲ್ಲಿ ಆಗಿದ್ದರೆ original bill ಜೊತೆ amended bill ಏಕೆ ಕಳುಹಿಸಲಿಲ್ಲ?

ಒಬ್ಬ ಮಾನ್ಯ ಸದಸ್ಯರು :– ಒರಿಜಿನಲ್ ಬಿಲ್ ಜೊತೆ ಕಳುಹಿಸಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಇವತ್ತಿಗೋಸ್ಕರ ಈ ಶಾಸನ ಸಭೆಯನ್ನು ನಡೆಸಬೇಡಿ.

ಅಧ್ಯಕ್ಷರು :– ಆಯಿತು, ಮಾತನಾಡಲಿ.

(ಗೊಂದಲ)

ಶ್ರೀ ಶರಣಬಸಪ್ಪ ದರ್ಶನಾಪುರ್ :– Last time ಮಂಡನೆ ಮಾಡಿದ್ದು, ಜೊತೆಯಲ್ಲಿ ಕಳುಹಿಸಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನೀವು ಈ ಶಾಸನ ಸಭೆಗೆ ಅಧ್ಯಕ್ಷರು. ನೀವು ಕೇಳದೇ ಹೋದರೆ ನಾವೇನು ಮಾಡಬೇಕು? ಎಲ್ಲಿಯಾದರೂ ಉಂಟೇ? ಹೋದ ಅಸೆಂಬ್ಲಿಯಲ್ಲಿ ಮಾಡಿದಂತಹ amendment bill, ಆ bill ಅನ್ನು ಮತ್ತೆ ಏಕೆ ನಮ್ಮ ಮುಂದೆ ತಂದು ಇಟ್ಟರು? Is it a carry over bill?

ಅಧ್ಯಕ್ಷರು :– Alright.

ಶ್ರೀ ಜೆ.ಸಿ. ಮಾಧುಸ್ವಾಮಿ :– Alright ಎಂದರೆ ಏನು ಸಾರ್?...

ಅಧ್ಯಕ್ಷರು :– ಮಾತನಾಡಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ :– Has this bill been introduced yesterday in the House? ಒಂದು ರೂಲಿಂಗ್ ಕೊಡಿ.

ಅಧ್ಯಕ್ಷರು :– ಆಯಿತು, ನೋಡುತ್ತೇನೆ, ಇವರು ಮಾತನಾಡಲಿ ನೀವು ಕುಳಿತುಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಅವರು ಮಾತನಾಡುತ್ತಿರುವುದರ ಬಗ್ಗೆ object ಮಾಡಿ ನೀವು Ruling ಕೊಡಿ ಎಂದು ಕೇಳುತ್ತಿರುವುದು.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– I am raising a point of order not to allow him to speak.

ಶ್ರೀ ಕೆ. ಶ್ರೀನಿವಾಸಗೌಡ :– ಸ್ಪೀಕರ್‌ರವರು ನೀವು ಮಾತನಾಡಬೇಡಿ ಎಂದು ಹೇಳಲಿಲ್ಲ. ನೀವು ಹೇಳಿದ ಹಾಗೆ ಕೇಳಬೇಕಾ?

ಶ್ರೀ ಡಿ.ಆರ್. ಪಾಟೀಲ್ :- ಮಾನ್ಯ ಮಾಧುಸ್ವಾಮಿ ಮತ್ತು ಶ್ರೀರಾಮರೆಡ್ಡಿಯವರು ಕುಳಿತುಕೊಳ್ಳಬೇಕಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನಾವು point of order raise ಮಾಡಿದ್ದೇವೆ. ನೀವು ಒಂದು ರೂಲಿಂಗ್ ಕೊಡಿ ಸಾರ್.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಅಧ್ಯಕ್ಷರು ಮೊದಲು ruling ಕೊಡಲಿ, ಆಮೇಲೆ ಬೇಕಾದರೆ ಮಾತನಾಡಿಕೊಳ್ಳಲಿ.

ಶ್ರೀ ಡಿ.ಕೆ. ಶಿವಕುಮಾರ್ :- ಯಾವುದು ruling defer ಮಾಡುತ್ತಿರುವುದು. ಸುಮ್ಮನೆ waste ಮಾಡುವುದಕ್ಕೆ ಹೋಗಬೇಡಿ. ಇದು ಅರ್ಧ ದಿನಕ್ಕೆ ಮುಗಿಯುವಂತಹ ಬಿಲ್ ಇದು. ನನಗೆ ಅರ್ಥವಾಗುತ್ತಿಲ್ಲ. Major opposition party ಇದರ ಬಗ್ಗೆ ಏನೇನು ಸಲಹೆ ಕೊಡಬೇಕು ಅದನ್ನು ಕೊಟ್ಟಿದೆ. Government has agreed to it. ಅವರು, ನಾನು ಈ ಅಮೆಂಡ್‌ಮೆಂಟ್ ಕೊಟ್ಟಿದ್ದೇನೆ, ಈ ರೀತಿ ಆಗಬೇಕು ಎಂದು explain ಮಾಡುತ್ತಿದ್ದಾರೆ. ಇದರಲ್ಲಿ confusion ಏಕೆಂದು ನನಗೆ ಅರ್ಥವಾಗುತ್ತಿಲ್ಲ. ಇನ್ನು ಮುಂದೆ Joint Select Committee ಎಂದು ಬರೆದರೆ ಈ ಬಿಲ್ ಅನ್ನು ಸಾಯಿಸಿದ ಹಾಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನಾವಲ್ಲ ಸ್ವಾಮಿ, ನಿಮ್ಮ ಪಾರ್ಟಿಯವರು ಕೇಳಿರುವುದು.

ಶ್ರೀ ಡಿ.ಕೆ. ಶಿವಕುಮಾರ್ :- ಅವರು ಹೇಳಿರಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ :- ನಾವ್ಯಾರೂ Joint select committee ಗೆ propose ಮಾಡಿಲ್ಲ. ಇದು Joint select committee ಗೆ ಹೋಗಲಿ ಎಂದು ಮಾನ್ಯ ಡಿ. ಆರ್. ಪಾಟೀಲ್‌ರವರು ಹೇಳಿದ್ದು, ಅದು ರೆಕಾರ್ಡ್‌ನಲ್ಲಿ ಇದೆ.

ಶ್ರೀ ಡಿ.ಕೆ. ಶಿವಕುಮಾರ್ :- ಅವರದು ಅಮೆಂಡ್‌ಮೆಂಟ್ ಏನಿದೆ, ಅದು approve ಆಗಲಿಲ್ಲವೆಂದರೆ Joint Select Committee ಗೆ ಹೇಳಲಿ. They have accepted.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ತಾತ್ವಿಕವಾಗಿ ನೀವು ಮೂರು ಜನ ಒಪ್ಪಿದ್ದೀರಾ? ನಾಳೆ Chief Minister ಅನ್ನು ಒಪ್ಪಿಸುತ್ತೀರಾ? ಇದನ್ನು ನಾವಲ್ಲ ಪ್ರಶ್ನೆ ಕೇಳಿದ್ದು, ಮಾನ್ಯ ಡಿ.ಆರ್. ಪಾಟೀಲರು. Record ತೆಗಿಸಿ. ತಾತ್ವಿಕವಾಗಿ APMC Minister, Home Minister, Deputy Chief Minister ಒಪ್ಪಿದ್ದೀರಾ? ಹಾಗಿದ್ದ ಮೇಲೆ ನಾಳೆ C.M ಅವರನ್ನು ಒಪ್ಪಿಸುತ್ತೀರಾ ಎಂದು ಡಿ.ಆರ್. ಪಾಟೀಲರು ಕೇಳಿದ್ದು. ಇದನ್ನು ನಾವು ಕೇಳಲಿಲ್ಲ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :- ಮಾನ್ಯ ಅಧ್ಯಕ್ಷರೆ, ಏನು ಹೇಳಿದ್ದಾರೆಂದು Record ತೆಗಿಸಿ. ನಾವು Joint Select Committee ಗೆ ಕೇಳಿದವರಲ್ಲ. ಅದಕ್ಕೆ ಮೊದಲು ಪ್ರಪೋಸ್ ಮಾಡಿದ್ದು ಡಿ.ಆರ್. ಪಾಟೀಲರು. ಇವತ್ತು ನಾವೆಲ್ಲ Joint Select Committee ಗೆ ಒಪ್ಪಿಕೊಂಡಿದ್ದೇವೆ. ಮಾನ್ಯ ಡಿ.ಆರ್. ಪಾಟೀಲರು ಪದೇ ಪದೇ ಕೇಳಿದ್ದಾರೆ. ತಾತ್ವಿಕವಾಗಿ ಉಪಮುಖ್ಯಮಂತ್ರಿಗಳು ಮತ್ತು ಗೃಹ ಮಂತ್ರಿಗಳು ಒಪ್ಪಿದ್ದೀರಾ ಎಂದು ಕೇಳಿದ್ದಾರೆ. ಅವರು ಒಪ್ಪಿದ್ದೇವೆ, ಮಾನ್ಯ ಮುಖ್ಯಮಂತ್ರಿಗಳು ಬರಬೇಕು, ಅವರನ್ನು ಕೇಳಿ ನಾಳೆ ಹೇಳುತ್ತೇವೆಂದು ಹೇಳಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಬೆಳಿಗ್ಗೆ ಎದ್ದು ಇದು Joint Select Committee ಗೆ ಹೋಗಲಿ ಎಂದು ಹೇಳಿದ್ದಾರೆ. ನಾವು ಈ bill introduce ಮಾಡಬಾರದೆಂದು ವಿರೋಧ ಮಾಡಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೆ, ಈ ಬಿಲ್ ಬಗ್ಗೆ ನಾನು ಬಹಳ ಮಾತನಾಡಬೇಕಾಗಿದ್ದವನು. ಇದು Parliament ನಲ್ಲಿ ನಿತೀಶ್ ಕುಮಾರ್‌ರವರು ಮೂವ್ ಮಾಡಿದಂತಹ ಬಿಲ್. ನೀವ್ಯಾರು ಅಲ್ಲ. ಸುಮ್ಮನೆ ನೀವು ಭಾಷಣ ಮಾಡುತ್ತಿದ್ದೀರಿ, ನಾವು ಕೇಳುತ್ತಿದ್ದೇವೆ. ಆದರೆ ರಾಜ್ಯದ ಹಿತಾಸಕ್ತಿಯನ್ನು ಬಲಿಕೊಟ್ಟು ಯಾರೋ ಹೇಳುತ್ತಾರೆಂದು ಬಿಲ್ ಪಾಸ್ ಮಾಡುವ stage ಗೆ Legislators ಬರಬಾರದು. ಯಾರೋ ಕುಳಿತುಕೊಂಡು ನಮಗೆ command ಮಾಡುತ್ತಾರೆಂದು ನಾವು ಇಲ್ಲಿ ಬಿಲ್ ಪಾಸ್ ಮಾಡಬೇಕೆ?

(ಗೊಂದಲ)

ಅಧ್ಯಕ್ಷರು :- ನೋಡೋಣ. one by one.....

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಶ್ರೀನಿವಾಸಗೌಡರಿಗೆ ಇಷ್ಟ ಬಂದ ಹಾಗೆ ಮಾಡುವುದಕ್ಕಾಗುವುದಿಲ್ಲ ಇಲ್ಲಿ. ಇದಕ್ಕೆ ನಿಯಮ ಇದೆ. ಅದನ್ನು ಬಿಟ್ಟು.....

(ಗೊಂದಲ)

ಅಧ್ಯಕ್ಷರು :- ಈಗ Rule 90 is very clear. " If notice of an amendment to a clause or Schedule of the Bill has not been given one clear day before the day on which the Bill is to be considered, any member may object to the moving of the amendment and such objection shall prevail unless the Speaker allows the amendment to be moved". It is very clear. ಆದ್ದರಿಂದ I can allow to move an amendment.

ಒಬ್ಬ ಮಾನ್ಯ ಸದಸ್ಯರು :- ತಾವು allow ಮಾಡಿ ಸಾರ್.

ಶ್ರೀ ಜೆ.ಸಿ. ಮಾಧುಸ್ವಾಮಿ :- ಇದನ್ನು ಯಾವಾಗ allow ಮಾಡಬಹುದು ಎಂದು ಇದೆ.

ಅಧ್ಯಕ್ಷರು :- ಈಗ ಯಾರಾದರೂ objections ಹಾಕಿದರೆ, I can cover rule, Speaker can allow the amendment to be moved.

ಶ್ರೀ ಜೆ.ಸಿ. ಮಾಧುಸ್ವಾಮಿ :- ಯಾವ ಸಂದರ್ಭದಲ್ಲಿ ಮಾಡಬಹುದು ಎಂದಿದೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಮಗೆ ಗೊತ್ತಾಗಲಿ ಹೇಳಿ. ನಮಗೆ ಗೊತ್ತಿಲ್ಲ.

(ಗೊಂದಲ)

ಅಧ್ಯಕ್ಷರು :- ಅವರು ಅಮೆಂಡ್‌ಮೆಂಟ್ ಮಾಡಿದ್ದಾರೆ. ಅದಕ್ಕೆ ಕೆಲವು ಅಮೆಂಡ್‌ಮೆಂಟ್ ಅನ್ನು ಒಪ್ಪಿದ್ದಾರೆ. During debate ಅವರು ಏನೇನು ಅಮೆಂಡ್‌ಮೆಂಟ್ ಒಪ್ಪಿಕೊಳ್ಳುತ್ತಾರೆ ಎಂದು ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೆ, before the consideration of the bill ಇಡಬೇಕೇ? ಎಲ್ಲರೂ ಮಾತನಾಡಿದ ಮೇಲೆ consideration ಗೆ ತೆಗೆದುಕೊಳ್ಳಬೇಕೇ?

ಅಧ್ಯಕ್ಷರು :- No, ಅಲ್ಲಿ ಏನಾಗಿದೆ ಎಂದರೆ consideration ಇಲ್ಲದೆ ಇದ್ದರೂ I can allow to move an amendment.

ಶ್ರೀ ಜೆ.ಸಿ. ಮಾಧುಸ್ವಾಮಿ :- ಎಲ್ಲಿದೆ? Rules ಕೊಡಿ. ಪುಸ್ತಕ ತೆಗೆದುಕೊಂಡು ಬನ್ನಿ.

ಅಧ್ಯಕ್ಷರು :- 90 ನಲ್ಲಿ ಇದೆಯಲ್ಲ. It is very clear. Any member mey object to the moving of the amendment and such objection shall prevail unless the Speaker allows the amendment to be moved.

ಶ್ರೀ ಡಿ.ಆರ್. ಪಾಟೀಲ್ :- ಒಂದು model act ನ salient features ಏನಿದೆ ಎಂದು Government of India ದವರು ಮತ್ತು ನೀವು circulate ಮಾಡಿದ್ದೀರಿ. ಅದನ್ನು ನಾನು ನಿಮ್ಮ ಗಮನಕ್ಕೆ ತರುತ್ತೇನೆ. The title of this act is changed to highlight the objective of development of agricultural marketing in addition to its regulations under the act. The APMCs have been specifically responsible for ensuring the complete transparency in prices and transactions taking place in market area. He has allowed me to.........

ಶ್ರೀ ಜೆ.ಸಿ. ಮಾಧುಸ್ವಾಮಿ :- ನನಗೆ ಹೇಳಬೇಕು, ನಾನು point of order raise ಮಾಡಿರುವುದು.

ಶ್ರೀ ಡಿ.ಆರ್. ಪಾಟೀಲ್ :- ನಿಮಗೆ ಅವರು ಹೇಳಿದರು.

ಶ್ರೀ ಜೆ.ಸಿ. ಮಾಧುಸ್ವಾಮಿ :- ಅವರು ಹೇಳಲಿಲ್ಲ.

(ಗೊಂದಲ)

ಶ್ರೀ ಡಿ.ಆರ್. ಪಾಟೀಲ್ :-ಹೌದು, I have allowed.

ಶ್ರೀ ಎಸ್.ಎಸ್. ಪಾಟೀಲ್ :- ಅವರು allow ಮಾಡಿ ಮಾತನಾಡಿ ಎಂದು ಹೇಳಿದರು.

ಒಬ್ಬ ಮಾನ್ಯ ಸದಸ್ಯರು :- ರೂಲಿಂಗ್ ಕೊಟ್ಟಾಯಿತು.

ಶ್ರೀ ಜೆ.ಸಿ. ಮಾಧುಸ್ವಾಮಿ :- ಕೊಟ್ಟಿದ್ದೀರಾ?

ಅಧ್ಯಕ್ಷರು :- Oh, Yes.

ಶ್ರೀ ಕೆ. ಶ್ರೀನಿವಾಸಗೌಡ :- ಮಾನ್ಯ ಡಿ.ಆರ್. ಪಾಟೀಲರು ಏನೇನು ಅಮೆಂಡ್‌ಮೆಂಟ್ ಕೊಟ್ಟಿದ್ದಾರೆ, ಮಾನ್ಯ ಮಂತ್ರಿಗಳು ಅದೆಲ್ಲ ಒಪ್ಪಿ ನೀವು....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಿನ್ನೆ ಯಾರು ಹೇಳಿದ್ದಾರೆಂದು record ತೆಗೆಸಿ ನೋಡಿ. ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು Joint Select Committee ಗೆ ಕಳುಹಿಸಿ ಎಂದು ಹೇಳಿದರು. ಆದರೆ ಇವತ್ತು ನೀವು ಇನ್ನೊಂದು ತೀರ್ಪು ಕೊಡುತ್ತಿದ್ದೀರಿ. ಈ ರೀತಿ ನೀವು........

ಶ್ರೀ ವಾಟಾಳ್ ನಾಗರಾಜು :- ನೀವು ತಪ್ಪು ದಾರಿಗೆ ಹೋಗಿದ್ದೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನೀವು ಈ ರೀತಿ ಸಭೆ ನಡೆಸಿ, ಈ ರೀತಿಯಾದಂಥಾ ಬಿಲ್ ಅನ್ನು.........

ಶ್ರೀ ವಾಟಾಳ್ ನಾಗರಾಜು :- ಮಾನ್ಯ ಅಧ್ಯಕ್ಷರೆ, ತಾವು ನಿನ್ನೆ ಏನು ಹೇಳಿದ್ದೀರೆಂಬುದನ್ನು ಸದನಕ್ಕೆ ಹೇಳಿ.

ಅಧ್ಯಕ್ಷರು :- ಏನು ಹೇಳಿದ್ದೇನೆ? ನೀವು ಸುಮ್ಮನೆ ನಿಂತುಕೊಂಡು, ನಿನ್ನೆ ಹೇಳಿದ್ದೇನೆಂದು ಹೇಳಿದರೆ, ನಾನು ನಿನ್ನೆ ಏನು ಹೇಳಿದ್ದೇನೆ? What do you mean by it?

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೆ amended copy ಯನ್ನು ಕೊಡದೇ, ಕೆಲವು ಸದಸ್ಯರಿಗೆ ಬೇರೆ ಕೊಟ್ಟು.....

ಅಧ್ಯಕ್ಷರು :- ನಿನ್ನೆ amendment copy ಯನ್ನು ಸರ್ಕ್ಯುಲೇಟ್ ಮಾಡಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾವು ಸರ್ಕ್ಯುಲೇಟ್ ಆಗಿಲ್ಲವೆಂದು ಹೇಳುತ್ತಿದ್ದೇವೆ. ನೀವು ಆಗಿದೆಯೆಂದು ಹೇಳಿದರೆ........

ಅಧ್ಯಕ್ಷರು :- ಕೆಲವರು ಆಗಿದೆಯೆಂದು ಹೇಳುತ್ತಾರೆ, ಕೆಲವರು ಆಗಿಲ್ಲವೆಂದು ಹೇಳುತ್ತಿದ್ದಾರೆ. ಇಡೀ ಸಭೆ copy circulate ಆಗಿಲ್ಲವೆಂದರೆ, I would have agreed.

ಶ್ರೀ ವಾಟಾಳ್ ನಾಗರಾಜು :- ತಿದ್ದುಪಡಿ copy ಗಳು ಒಂದೂ ಇಲ್ಲ. ನಿನ್ನೆ ಇದನ್ನು ಜಂಟಿ ಸದನ ಸಮಿತಿಗೆ ಕಳುಹಿಸಬೇಕೆಂಬ ತೀರ್ಮಾನವಾಗಿತ್ತು. ಇಲ್ಲಿ ಸಂಸದೀಯ ವ್ಯವಹಾರಗಳ ಸಚಿವರು ಏನು ಹೇಳಿದ್ದರು? ಉಪ ಮುಖ್ಯಮಂತ್ರಿಗಳು ಏನು ಹೇಳಿದರು? ಮತ್ತೆ ಮಾತುಕತೆ ಏನು ಆಯಿತು? ನಿಮ್ಮ ಕೊಠಡಿಯಲ್ಲಿ ಮಾತನಾಡಬೇಕೆಂದು ಆಯಿತು. ಇದು ಯಾವುದು ಆಗಲಿಲ್ಲವಲ್ಲಾ, ಮಾಣ್ಯ ಮುಖ್ಯಮಂತ್ರಿಗಳು ಬರಲಿಲ್ಲ, ಮಾತುಕತೆಯಾಗಲಿಲ್ಲ. ಈಗ ಇದು ಬೇರೆ ದಿಕ್ಕನ್ನು ತಲುಪಿದರೆ, ಇದು ಸರಿಯಾದ ಕ್ರಮವಲ್ಲ.

ಅಧ್ಯಕ್ಷರು :- ಈಗ ಎಲ್ಲರೂ ಚರ್ಚೆಯಲ್ಲಿ ಭಾಗವಹಿಸಿ ಇದನ್ನು ತೆಗೆದುಕೊಳ್ಳಬೇಕು, ಅರ್ಜೆಂಟ್ ಆಗಿ ಆಗಬೇಕೆಂದು ಬಹಳ ಜನ ಸದಸ್ಯರು ಹೇಳಿದ್ದಾರಲ್ಲ.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಿಗ್ಗೆ ಇದನ್ನು Joint Select Committee ಗೆ ಕಳುಹಿಸಿಯೆಂದು, ಮಾನ್ಯ ಸಿದ್ಧರಾಮಯ್ಯನವರು ಹೇಳಿದರು, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಈಗಾಗಲೇ ಅದನ್ನು ನಾವು ಹೇಳಿಲ್ಲವೆಂದು ಹೇಳಿದರೆ........

ಅಧ್ಯಕ್ಷರು :- ನಿನ್ನೆ ಹೇಳಿದ್ದರು ಅಂಥಾ ಅಲ್ಲ, What is the mood of the House ಏನಾಗಿದೆಯೆಂದರೆ, ಈ ಬಿಲ್ ಅರ್ಜೆಂಟ್ ಆಗಿ ಆಗಬೇಕು. House ನಲ್ಲಿ ಮೆಜಾರಿಟಿ ಹೇಳುತ್ತಿದ್ದಾರೆ, expect 3-4 people. ಅದು ಅಲ್ಲದೇ You see, I have got power to give the permission.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಆಯಿತು, ಹಾಗಾದರೆ ನಿನ್ನೆಯೇ ಈ ಬಿಲ್ ಆಗಬೇಕಾಗಿತ್ತು. ಇವತ್ತು ಏಕೆ ತೆಗೆದುಕೊಂಡಿದ್ದೀರಿ?

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೆ, ನಿನ್ನೆ ಒಂದು ರೀತಿಯ ಮಾತು. ಇವತ್ತು ಒಂದು ರೀತಿ ಮಾತು.

ಅಧ್ಯಕ್ಷರು :- ಆಯಿತು, ನೀವು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಮಾನ್ಯ ಅಧ್ಯಕ್ಷರೆ, ನಿನ್ನೆಯೇ ಬಿಲ್ ಅನ್ನು ಓಟಿಂಗ್‌ಗೆ ಹಾಕಬೇಕಾಗಿತ್ತು.

ಅಧ್ಯಕ್ಷರು :- ಮಾನ್ಯ ಡಿ.ಆರ್. ಪಾಟೀಲ್‌ರೆ ತಾವು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ಅಧ್ಯಕ್ಷರೆ, ಇದು ಸರಿಯಿಲ್ಲ. ಇದನ್ನು ಪ್ರತಿಭಟನೆ ಮಾಡಿ, ಬಹಿಷ್ಕಾರ ಹಾಕುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ, ತಾವು ತೆಗೆದುಕೊಂಡ ಕ್ರಮ ಸರಿಯಾಗಿಲ್ಲ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು, ಶ್ರೀ ಜೆ.ಸಿ. ಮಾಧುಸ್ವಾಮಿ ಯವರು ಹಾಗೂ ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು :– Walk out ಮಾಡುತ್ತೇವೆಂದು ಹೇಳಿದ ಮೇಲೆ ಹೋಗುತ್ತಾ ಇರಬೇಕು.

ಶ್ರೀ ಡಿ.ಆರ್. ಪಾಟೀಲ್ :– ತಾವು ಏನು ನೋಟ್ ಓದಿದ್ದೀರಿ.

ಶ್ರೀ ಕೆ. ಶ್ರೀನಿವಾಸಗೌಡ :– ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಆರ್. ಪಾಟೀಲ್‌ರವರು ಸ್ವಲ್ಪ ಮಟ್ಟಿಗೆ ಅಮೆಂಡ್‌ಮೆಂಟ್ ಬಗ್ಗೆ ಕೇಳಿದ್ದಾರೆ. ಅದೆಲ್ಲವನ್ನು ಒಪ್ಪಿ ಓಟಿಂಗ್‌ಗೆ ಹಾಕಿಕೊಳ್ಳಿ.

ಶ್ರೀ ಶರಣಬಸಪ್ಪ ಬಾಪುಗೌಡ ದರ್ಶನಾಪುರ್ :– ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಆರ್. ಪಾಟೀಲ್‌ರವರು ಕಳೆದ ಸದನದಲ್ಲಿ ಕೆಲವೊಂದು clauses ಬಗ್ಗೆ ಅಮೆಂಡ್‌ಮೆಂಟ್ಸ್ ಕೊಟ್ಟಿದ್ದರು. ನಾವು ಅವರು ಕೊಟ್ಟಿದ್ದಂಥ clause No.8, clause No. 12, clause No. 13, clause No. 16,18 & 29 ಅನ್ನು ಸಂಪೂರ್ಣವಾಗಿ ಒಪ್ಪಿದ್ದೇವೆ. ನಿನ್ನೆ ದಿವಸ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಸಿದ್ಧರಾಮಯ್ಯನವರು, ಮತ್ತು ತಾವೆಲ್ಲರೂ ಪ್ರಸ್ತಾಪ ಮಾಡಿದ ಅಗ್ರಿಕಲ್ಚರ್‌ಗೆ ಸಂಬಂಧಪಟ್ಟ ವಿಷಯದ ಬಗ್ಗೆ ಸಹಿ ಮಾಡಿ ಅಧ್ಯಕ್ಷರಿಗೆ ಕೊಟ್ಟಿದ್ದೇವೆ. ಅದು ಆದ ಮೇಲೆ licensing authority ಗೆ ಸಂಬಂಧಪಟ್ಟಂತೆ Agriculture Directing Market ಏನು Director ಹತ್ತಿರ ಇತ್ತು. ಅದನ್ನು Government ಕೊಡುವಂಥಾದ್ದಕ್ಕೂ ನಾವು ಒಪ್ಪಿದ್ದೇವೆ, ಮತ್ತೆ Revolving Fund ಇದು ಏನು Director Agriculture ಇತ್ತೋ ಅದನ್ನು Agriculture Marketing Board M.D. ಗೆ ಕೊಡುವಂಥಾದ್ದನ್ನು ಕೂಡ ಮಾಡಿದ್ದೇವೆ. Marketing Committee ಖರ್ಚು ಅದನ್ನು ಕೂಡ ತೆಗೆದಿದ್ದೇವೆ. ಇಷ್ಟೆಲ್ಲಾ ಅವರು ಕೊಟ್ಟಿರುವಂಥಾದ್ದನ್ನು ಸಂಪೂರ್ಣವಾಗಿ ಒಪ್ಪಿದ್ದೇವೆ. ಇದು ಬಹಳ ಅವಶ್ಯಕತೆ ಇದೆ.

ಶ್ರೀ ಡಿ.ಆರ್. ಪಾಟೀಲ್ :- ಮಾನ್ಯ ಸಚಿವರೆ, ತಾವು ದಯವಿಟ್ಟು ಒಂದು ನಿಮಿಷ ಕುಳಿತುಕೊಳ್ಳಿ. ಈಗ APMCs have been made specifically responsible for ensuring complete transparency in pricing system and transactions taking place in the market area, providing market aid extension service to farmers, ensuting payment for agricultural produce sowed by farmers on the same day. How can APMC ensure if you don't give licensing power, monitoring power, regulating power to that? ದಯವಿಟ್ಟು ನಾನು ಏನು ಸಜೆಸ್ಟ್ ಮಾಡಿದ್ದೇನೆ.

ಶ್ರೀ ಶರಣಬಸಪ್ಪ ಬಾಪುಗೌಡ ದರ್ಶನಪುರ್ :- ಲೇಸನ್ಸ್ ಕೊಡುವಂಥಾದ್ದರ ಬಗ್ಗೆ ತಾವು 84 (A) ಯನ್ನು ನೋಡಿ. ಇದರಲ್ಲಿ Director, Agriculture Marketing Officer or any sub ordinate officer ಎಂದು ಇದೆ. ಅಲ್ಲಿರುವಂಥವರು power delegate ಮಾಡಬಹುದು.

ಶ್ರೀ ಡಿ.ಆರ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, Government of India ದವರು model Act ಒಳಗೆ ಏನು ಸಜೆಸ್ಟ್ ಮಾಡಿದ್ದಾರೆ. They have entrusted this responsibility to APMC. ಆ model Act ಇಲ್ಲದಿರುವುದನ್ನು ನೀವು ಏಕೆ ತರುತ್ತೀರಿ?

ಶ್ರೀ ಶರಣಬಸಪ್ಪ ಬಾಪುಗೌಡ ದರ್ಶನಪುರ್ :- ಮಾನ್ಯ ಅಧ್ಯಕ್ಷರೆ, ಬೇರೆ ಬೇರೆ ರಾಜ್ಯಗಳಲ್ಲಿ Model Act ಪ್ರಕಾರ ಏನು implement ಮಾಡಿದ್ದಾರೆ. ಅದು complete ಯಥಾವತ್ತಾಗಿ ಮಾಡಿಲ್ಲ. ಅಲ್ಲಿರುವಂಥಾ ರೈತರನ್ನು interest safegaurd ಮಾಡುವುದಕ್ಕೆ ಕೆಲವೊಂದು ಅಮೆಂಡ್‌ಮೆಂಟ್ಸ್ ಕೂಡ ತರಬೇಕಾಗುತ್ತದೆ. ಇಲ್ಲಿ ನಮ್ಮ ಸರ್ಕಾರದಿಂದಲೂ disputed Marketing Board ಗೂ ಕೂಡ ಕೆಲವೊಂದು powers ಅನ್ನು ಇಟ್ಟುಕೊಳ್ಳಬೇಕಾಗುತ್ತದೆ. ಸರ್ಕಾರ ಇಟ್ಟುಕೊಳ್ಳಬೇಕಾಗುತ್ತದೆ, ಯಥಾವತ್ತು ಎಂದರೆ, ಇವತ್ತು ರೈತರಿಗೆ ತೊಂದರೆಯಾಗುವಂಥಾ ಅಂಶ. ಈಗ ನೀವು ಏನು major amendments ಕೊಟ್ಟಿರುವಂಥಾದ್ದನ್ನು ಸಂಪೂರ್ಣವಾಗಿ ನಾವು ಒಪ್ಪಿದ್ದೇವೆ. ನಿನ್ನೆ ಒಪ್ಪದೇ ಇರುವಂಥಾದ್ದು clause No. 4, ಅದನ್ನು ಕೂಡ ಒಪ್ಪಿ, ನಾವು ಅಧ್ಯಕ್ಷರಿಗೆ ಕೊಟ್ಟಿದ್ದೇವೆ.

ಶ್ರೀ ಕೆ. ಶ್ರೀನಿವಾಸ ಗೌಡ :- payment dispute ಬಗ್ಗೆ.....

ಶ್ರೀ ಶರಣಬಸಪ್ಪ ಬಾಪುಗೌಡ ದರ್ಶನಾಪುರ್ :- Dispute Agriculture Marketing ಗೆ ಬರುತ್ತದೆ, concern subordinate officer ಗೆ ಕೊಡುವುದಕ್ಕೆ power ಇದೆ.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಅಧ್ಯಕ್ಷರೆ, ತಾವು ದಯಮಾಡಿ ಬಿಲ್ ಮೂವ್ ಮಾಡಿ.

(ಗೊಂದಲ)

ಶ್ರೀ ಡಿ.ಆರ್. ಪಾಟೀಲ್ :- ಎಪಿಎಂಸಿ ಕಾರ್ಯದರ್ಶಿ ಸರ್ಕಾರಿ ನೌಕರನಾಗಿದ್ದಾನೆ. ಇವನು APMC ಯವರು appoint ಮಾಡಿರುವವರು ಅಲ್ಲ. ಅವರು ಸರ್ಕಾರಿ ನೌಕರರಾಗಿದ್ದಾರೆ, ದಯವಿಟ್ಟು ನೀವು Model Act ಅನ್ನು ನೋಡಿ.

ಶ್ರೀ ಶರಣಬಸಪ್ಪ ಬಾಪುಗೌಡ ದರ್ಶನಾಪುರ್ :- ಈಗ ತಾವು ಕೊಟ್ಟಿರುವಂಥಾದ್ದನ್ನು ಸಂಪೂರ್ಣವಾಗಿ ಒಪ್ಪಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್ :- ನೀವು ಏಕೆ ಹಠಕ್ಕೆ ಬಿದ್ದಿದ್ದಿರೋ, ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಶರಣಬಸಪ್ಪ ಬಾಪುಗೌಡ ದರ್ಶನಪುರ್ :- ಇದರಲ್ಲಿ ಹಠಕ್ಕೆ ಬೀಳುವಂಥಾ ಅವಶ್ಯಕತೆ ನಿಮಗೂ ಇಲ್ಲ ನಮಗೂ ಇಲ್ಲ. ಇಲ್ಲಿ ಇರುವಂಥಾದ್ದು ತಾವು ಮೇಜರ್ ಆಗಿ ಏನು ಹೇಳಿದ್ದೀರಿ. ತಾವು ಕಳೆದ ಸದನದಲ್ಲೂ ಹೇಳಿದ್ದೀರಿ, ತಮ್ಮೆಲ್ಲರ ಜೊತೆಗೆ ಕುಳಿತು ಚರ್ಚೆ ಮಾಡಿ, ತಾವು ಕೊಟ್ಟಿರುವಂಥಾದ್ದೆಲ್ಲವನ್ನು ನಾವು ಒಪ್ಪಿದ್ದೇವೆ. clause No. 4 ಮಾತ್ರ ಪೆಂಡಿಂಗ್ ಇತ್ತು. ನಿನ್ನೆ ಹೇಳುವಂಥಾ ಸಂದರ್ಭದಲ್ಲಿ Revenue Act ನಲ್ಲಿ Agriculture meaning ಇದೆ. ಅದನ್ನೆ restore ಮಾಡುವುದಕ್ಕೆ ಅದನ್ನು ಅಧ್ಯಕ್ಷರಿಗೆ ಕೊಟ್ಟಿದ್ದೇವೆ. ಇನ್ನು ಎರಡು ವಿಚಾರಗಳು ಏನೆಂದರೆ, Revolving Fund Committee ಯಲ್ಲಿ ಖರ್ಚು ಆಗುವಂಥಾದನ್ನು delete ಮಾಡುವುದಕ್ಕೆ ಹೇಳಿದ್ದೇವೆ.

ಶ್ರೀ ಕೆ. ಶ್ರೀನಿವಾಸ ಗೌಡ :- ನಿಮಗೆ ರೂಲ್ಸ್ ಅಮೆಂಡ್ ಮಾಡಿಕೊಳ್ಳುವುದಕ್ಕೆ ಅವಕಾಶವಿದೆಯಲ್ಲಾ, ಅದನ್ನು ರೂಲ್ಸ್‌ನಲ್ಲಿ ತೆಗೆದುಕೊಳ್ಳಿ.

ಶ್ರೀ ಶರಣಬಸಪ್ಪ ಬಾಪುಗೌಡ ದರ್ಶನಪುರ್ :- ಇದೆ, ಬಹಳಷ್ಟು ಅವಕಾಶಗಳು ಇವೆ. Marketing committee ಗಳನ್ನು ರೂಲ್ಸ್‌ನಲ್ಲೇ ತರುತ್ತೇವೆ. ಎಲ್ಲವನ್ನು ಇದರಲ್ಲಿ ಮಾಡಿದರೆ, ಇದು ಮುಗಿಯುವುದಿಲ್ಲ. ತಾವು ಕೂಡ Marketing Board ನಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದೀರಿ. ರೂಲ್ಸ್‌ನಲ್ಲಿ ಅವಕಾಶವಿದೆ. ಈ ರೀತಿ ಏನಾದರೂ ತೊಂದರೆಯಾದರೆ, ತಾವು ಇರುತ್ತೀರಿ, ಈ ಸದನವಿರುತ್ತದೆ. ಆಗ ಸದನದಲ್ಲಿ ತಂದು ಮಾಡುವಂಥಾ ಅವಕಾಶವಿದೆ.

ಶ್ರೀ ಡಿ.ಆರ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ತಾವು ಆ ರೀತಿಯಾದರೆ ಹೀಗೆ ಮಾಡಿ, ನಿಮ್ಮ ಅಮೆಂಡ್‌ಮೆಂಟ್‌ನಲ್ಲಿ ಆಫೀಸರ್ಸ್ ಎಂದು ಹೇಳುತ್ತಿರಲ್ಲಾ, ಅದನ್ನು Officer of APMC ಎಂದು ಒಂದು Introduce ಮಾಡಿಬಿಡಿ ಸಾಕು. Director, Agriculture can empower officer ಎಂದು ಇದೆಯಲ್ಲಾ, ಅದನ್ನು Officer of APMC ಮಾಡಿಬಿಡಿ.

ಶ್ರೀ ಶರಣಬಸಪ್ಪ ಬಾಪುಗೌಡ ದರ್ಶನಪುರ್ :- ಎಲ್ಲರೂ ಕೂಡ ಇಲ್ಲಿಗೆ ಬರುವುದಕ್ಕಾಗುವುದಿಲ್ಲ. ಆದರೆ ಅಲ್ಲಿರುವಂಥವರಿಗೆ ಯಾರಿಗಾದರೂ ಒಬ್ಬರಿಗೆ ಚಾರ್ಜ್ ಕೊಟ್ಟು ಮಾಡಿಯೆಂದು ನಾವು mention ಮಾಡಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್ :- APMC ಯವರಿಗೆ ಕೊಡಬೇಕು, ಬೇರೆಯವರಿಗೆ ಅಲ್ಲ. ಅದನ್ನು ಯಾರ್‍ಯಾರಿಗೆ ಕೊಡುವುದಕ್ಕೆ ಬರುವುದಿಲ್ಲ. You must entrust that responsibility to APMC.

ಶ್ರೀ ಶರಣಬಸಪ್ಪ ಬಾಪುಗೌಡ ದರ್ಶನಪುರ್ :- ಇಲ್ಲಿಗೆ ಇದು ಮುಗಿದು ಹೋಗುತ್ತದಾ? ಮುಂದೆ ನಾವು ಏನು ಮಾಡುವುದಕ್ಕೆ ಅವಕಾಶ ಇಲ್ಲವಾ? ಎಲ್ಲಾದರೂ ಲೋಪವಾದರೆ, ಯಾವುದೇ ಕಾನೂನು ಮಾಡಿದರೂ negative side ಇದೆಯೆಂದು ಯಾರಾದರೂ ಹುಡುಕಿ ತೆಗೆಯುವವರು ಇರುತ್ತಾರೆ.

ಶ್ರೀ ಡಿ.ಆರ್. ಪಾಟೀಲ್ :- ಮಾನ್ಯ ಸಚಿವರೆ, ತಾವು ಒಂದು ನಿಮಿಷ ಕುಳಿತುಕೊಳ್ಳಿ. ನನ್ನ ಅಭಿಪ್ರಾಯವನ್ನು ತಾವು ಕೇಳಿ. For the first time ನೀವು you are allowing private market to function in APMC area. ಅವರಿಗೆ ಈಗ ನೀವು full license ಕೊಟ್ಟು ಆಮೇಲೆ restriction ತರುವುದಕ್ಕೆ ಆಗುತ್ತದಾ? ಇದನ್ನು ತಾವು ಹೇಳಿ.

ಶ್ರೀ ಶರಣಬಸಪ್ಪ ಬಾಪುಗೌಡ ದರ್ಶನಪುರ್ :– ಲೈಸೆನ್ಸ್ ಕೊಡುವಂಥಾದ್ದನ್ನು ಸರ್ಕಾರ ಇಟ್ಟುಕೊಂಡಿದೆಯಲ್ಲಾ, ಈಗ Direstor, Agriculture Marketing ನವರಿಗೆ ನಾವು license ಅನ್ನು ತೋರಿಸಿದ್ದೇವೆ. ನೀವು ಏನು ಹೇಳಿದ್ದೀರಿ, ಲೈಸೆನ್ಸ್ ಕೊಡುವಂಥಾ ಅಧಿಕಾರವನ್ನು ಸರ್ಕಾರ ತನ್ನಲ್ಲೇ ಇಟ್ಟುಕೊಳ್ಳಬೇಕೆಂದು ಹೇಳಿದ್ದೀರಿ. ಅದನ್ನು ಕೂಡ ನಾವು ಒಪ್ಪಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್ :– ಮಾನ್ಯ ಸಚಿವರು, ಅಲ್ಲಿ Private Market ಗೆ ನಮ್ಮ ರೈತರೇ ಹೋಗುವುದು. ನಾವು ಯಾರಿಂದ ಚುನಾಯಿತರಾಗಿ ಬಂದಿರುತ್ತೇವೆ.

ಶ್ರೀ ಶರಣಬಸಪ್ಪ ಬಾಪುಗೌಡ ದರ್ಶನಪುರ್ :– ಮಾನ್ಯ ಅಧ್ಯಕ್ಷರೆ, Private Market ಗೆ ನಮ್ಮ ರೈತರೇ ಹೋಗುವಂಥಾದ್ದು. ಅದೇ ವರ್ತಕರೇ ಅಲ್ಲಿಗೆ ಬರುವಂಥಾದ್ದು. ಅಲ್ಲಿಗೆ ಬೇರೆ ಯಾರು ಬರುವುದಿಲ್ಲ, ಇದೇ ರೈತರು ಇರುತ್ತಾರೆ, ಅದೇ ವರ್ತಕರು ಇರುತ್ತಾರೆ. ಇರುವಂಥಾ ಯಾರ್ಡ್ ತಯಾರು ಮಾಡುವವರು ಒಬ್ಬರು ಬೇರೆ ಇರುತ್ತಾರೆ, ಒಳಗಡೆ ಅವರೇ ಇರುತ್ತಾರೆ. ಬೇರೆಯವರು ಯಾರು ಇರುತ್ತಾರೆ? ಬೇರೆಯವರು ಯಾರು ಇರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಡಿ.ಆರ್. ಪಾಟೀಲ್ :– ತಾವು ಒಂದು ನಿಮಿಷ ಕುಳಿತುಕೊಳ್ಳಿ, ನಾನು ಹೇಳುತ್ತೇನೆ. ಈಗ private Market ಗೆ ನಮ್ಮ ರೈತ ಒಬ್ಬ ಹೋಗಿರುತ್ತಾನೆ. ಅವನಿಗೆ weighment ನಲ್ಲಿ ಮೋಸವಾಯಿತೆಂದು ತಿಳಿಯಿರಿ. ಅವನು dispute ಗೆ ಈಗ ಇದ್ದ Market yard ನವ ನಮ್ಮ ಹತ್ತಿರ ಬರುತ್ತಾನೆ. ಅಲ್ಲಿ ಅವನು dispute ಗೆ ಯಾರ ಹತ್ತಿರ ಹೋಗಬೇಕು.

ಶ್ರೀ ಶರಣಬಸಪ್ಪ ಬಾಪುಗೌಡ ದರ್ಶನಪುರ್ :– ಮಾನ್ಯ ಅಧ್ಯಕ್ಷರೆ, ಇಲ್ಲಿ dispute ಗೆ Agriculture Marketing Director ಹತ್ತಿರ ಹೋಗಬಹುದು, or any other sub ordinate officer. ಇದರಲ್ಲಿ ಅವಕಾಶ ಇದೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ :– ನಿಮಗೆ Government or APMC ಎಂದು ಸೇರಿಸುವುದಕ್ಕೆ ಏನು ತೊಂದರೆ? What is the problem?

ಶ್ರೀ ಶರಣಬಸಪ್ಪ ಬಾಪುಗೌಡ ದರ್ಶನಪುರ್ :– APMC ಎಂದರೆ ಮತ್ತೆ ಅವರ under ನಲ್ಲೆ ಬರುತ್ತದೆ.

ಶ್ರೀ ಸಿದ್ಧರಾಮಯ್ಯ :- You are giving powers to Director. Isn't it? ಅವರು power ಅನ್ನು ಕೆಳಗಡೆಯವರಿಗೆ delegate ಮಾಡುತ್ತಾರೆ. ಅದನ್ನೆ ತಾನೇ ತಾವು ಹೇಳುತ್ತಿರುವಂಥಾದ್ದು.

ಶ್ರೀ ಡಿ.ಆರ್. ಪಾಟೀಲ್ :- ಹೌದು ಸಾರ್.

(5 : 30)

ಶ್ರೀ ಶರಣಬಸಪ್ಪ ದರ್ಶನಾಪೂರ್ :- ಅದನ್ನು ಆಮೇಲೆ ತರಬಹುದು.

ಶ್ರೀ ಸಿದ್ಧರಾಮಯ್ಯ :- ಶರಣಬಸಪ್ಪನವರೇ ಒಂದು ನಿಮಿಷ ಕೇಳಿ. ಒಂದು ನಿಮಿಷ ಕುಳಿತುಕೊಳ್ಳಿ. Argument ಅನ್ನು ನಿಂತುಕೊಂಡೇ ಮಾಡಿಬಿಟ್ಟರೆ ಎಲ್ಲರಿಗೂ ಕೇಳಿಸುವುದಿಲ್ಲ. ಅವರು ಏನು ಹೇಳುತ್ತಿದ್ದಾರೆ ಎಂದರೆ, He is very particular, ನೀವು ಪೂರಾ ಅಧಿಕಾರವನ್ನು ಸರ್ಕಾರ ಇಟ್ಟುಕೊಂಡು ಬಿಟ್ಟರೆ, APMC ಗೆ ಇಲ್ಲದೇ ಹೋದರೆ ತೊಂದರೆಯಾಗುತ್ತದೆ ಎನ್ನತಕ್ಕಂಥಾದ್ದು ಅವರ apprehension ಅದಕ್ಕೆ ಅವರು ಏನು ಸಜೆಷನ್ ಕೊಡುತ್ತಿದ್ದಾರೆಂದರೆ Government or APMC ಎಂದು ಮಾಡಿ ಎಂದು ಹೇಳುತ್ತಿದ್ದಾರೆ. ಅದು elected body ಆಗಿರುತ್ತದೆ. ಅದನ್ನು ಮಾಡಿ ಎಂದು ಹೇಳುತ್ತಾರೆ. What is wrong in that?

ಶ್ರೀ ಡಿ.ಆರ್. ಪಾಟೀಲ್ :- ಅದರಲ್ಲಿ ಏನು ತೊಂದರೆಯಿದೆ ಎಂದು ಹೇಳಿ.

ಶ್ರೀ ಶರಣಬಸಪ್ಪ ದರ್ಶನಾಪೂರ್ :- ಈಗ Private Marke ಮಾಡುತ್ತಿರುವುದೇ competition ಬೇಕು ಎನ್ನುವ ಉದ್ದೇಶದಿಂದ. Already ಈಗ ಎಲ್ಲ ಕಡೆಗಳಲ್ಲಿ APMC yards, sub yards ಇವೆ. Private ನವರು ಬರಲು ಅವಕಾಶ ಮಾಡುತ್ತಿರತಕ್ಕಂಥಾದ್ದು ಅಲ್ಲಿ competition ಬರಲಿ, ರೈತರು ಬೇರೆ ಕಡೆ ಮಾರಾಟ ಮಾಡಲು option ಆಗಲಿ ಎನ್ನುವ ಉದ್ದೇಶದಿಂದ. ಹಾಗೇನಾದರೂ ತೊಂದರೆಯಾಗತಕ್ಕಂಥ ಪ್ರಸಂಗ ಬಂದರೆ ಮುಂದೆ ನಾವು ರೂಲ್ಸ್‌ನಲ್ಲಿ ಚೇಂಜ್ ಮಾಡಬಹುದು. ಅಮೆಂಡ್‌ಮೆಂಟ್ ಮಾಡಲು ಮುಂದೆ ಅವಕಾಶಗಳಿವೆ. ಅದನ್ನು ಮುಂದೆ ವಿಚಾರ ಮಾಡೋಣ.

ಶ್ರೀ ಡಿ.ಆರ್. ಪಾಟೀಲ್ :- ಯಾರೋ Private Market establish ಮಾಡುವವರಿಗೆ ತೊಂದರೆಯಾದೀತು ಎಂದು ತಿಳಿದುಕೊಂಡು ಈಗಲೇ ಅವರ

ಪರವಾಗಿ ಅಮೆಂಡ್‌ಮೆಂಟ್ ಮಾಡುತ್ತಿದ್ದೀರಿ. ಆದರೆ ರೈತರಿಗೆ ತೊಂದರೆಯಾಗುತ್ತದೆ. ಎಂದರೆ ನೀವು ಕೇಳಲು ತಯಾರಿಲ್ಲ. ಹಾಗಾದರೆ ಅದನ್ನು ನೀವೇ ಮುಂದೆ ಅಮೆಂಡ್ ಮಾಡಬಹುದಲ್ಲ.

ಶ್ರೀ ಶರಣಬಸಪ್ಪ ದರ್ಶನಾಪೂರ್ :– ಸರ್, ಹಾಗೇನಾದರೂ ತೊಂದರೆಯಾದರೆ, ಮತ್ತೊಂದು ಅಮೆಂಡ್‌ಮೆಂಟ್ ತರಬಹುದು.

ಶ್ರೀ ಸಿದ್ಧರಾಮಯ್ಯ :– ಅದನ್ನೇ ಹೇಳುತ್ತಿರುವುದು. ಮುಂದೆ ತೊಂದರೆಯಾದಾಗ ಅದನ್ನು ತೆಗೆದು ಹಾಕೋಣ. ಈಗ ಅದು ಇರಲಿ ಬಿಡಿ. Practical ಆಗಿ ಖಾಸಗಿಯವರಿಗೆ ತೊಂದರೆಯಾದರೆ, effective ಆಗಿ functioning ಆಗಲು ತೊಂದರೆಯಾದರೆ ಅಥವಾ ರೈತರಿಗೆ ಅನಾನುಕೂಲವಾದರೆ ಆಗ ತೆಗೆದು ಹಾಕಿ. ಈಗ ಅದನ್ನು ಸೇರಿಸಿ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ :– ಮಂತ್ರಿಗಳು ಸಾಕಷ್ಟು ಹೇಳಿದ್ದಾರೆ. ಇದನ್ನು ಪಾಸ್‌ಮಾಡಿಕೊಡಿ.

ಅಧ್ಯಕ್ಷರು :– ಅದನ್ನು ತೆಗೆದುಕೊಳ್ಳುತ್ತೇನೆ. ಆದರೆ ಅದನ್ನು ಸರ್ಕ್ಯುಲೇಟ್ ಮಾಡಬೇಕೆಂದು ಹೇಳಿದರು. ಸರ್ಕ್ಯುಲೇಟ್ ಮಾಡಿ ಆಯಿತೇ?

ಶ್ರೀ ಸಿದ್ಧರಾಮಯ್ಯ :– ನಾವು ಇದನ್ನು support ಮಾಡುತ್ತಿದ್ದರೆ, ನೀವು vote ಹಾಕಿ ಎಂದು ಹೇಳುತ್ತಿದ್ದೀರಿ.

ಶ್ರೀ ಹೆಚ್.ಡಿ. ರೇವಣ್ಣ :– vote ಗೆ ಹಾಕಿ ಎಂದು ಹೇಳಲಿಲ್ಲ. ಸರ್ವಾನುಮತದಿಂದ ಮಾಡಿಕೊಡಿ ಎಂದು ಹೇಳಿದೆ.

ಶ್ರೀ ನೆ.ಲ. ನರೇಂದ್ರಬಾಬು :– vote ಗೆ ಹಾಕುವುದು ಇದ್ದೇ ಇರುತ್ತದೆ. ಮೊದಲು ನಮಗೆ ಒಂದೆರಡು ನಿಮಿಷ ಮಾತನಾಡುವುದಕ್ಕೆ ಸ್ವಲ್ಪ ಅವಕಾಶ ಕೊಡಿ.

ಶ್ರೀ ಕೆ. ಶ್ರೀನಿವಾಸಗೌಡ :– ನಾನು ಆಗಲೇ ಹೇಳಿದೆ. ಈಗಾಗಲೇ NCDS India ದಲ್ಲಿ Private Market ನಲ್ಲಿ ಗ್ಲೋಬಲ್ ವ್ಯಾಪಾರ ಮಾಡುತ್ತಿದೆ. ಅದಕ್ಕೆ ಯಾವುದೇ ಲೈಸೆನ್ಸ್ ಇಲ್ಲ. ಅದನ್ನು Government of India recognize ಮಾಡಿದೆ. ಒಂದು ವರ್ಷಕ್ಕೆ 35 ಸಾವಿರ ಕೋಟಿ ಕಮಾಡಿಟೀಸ್ ಅನ್ನು ವ್ಯಾಪಾರ ಮಾಡುತ್ತದೆ. ಏಕೆ ಇವರು APMC ಎಂದು ಹೇಳುತ್ತಿದ್ದಾರೋ ನನಗೆ ಗೊತ್ತಿಲ್ಲ.

ಅವರು ಹೇಳುತ್ತಿರುವುದರಲ್ಲಿ ನನಗೂ ಕೂಡ ಒಂದು doubt ಬರುತ್ತಿದೆ. Competition ಬಂದಾಗ, ಇದನ್ನು ತೆಗದೇ ತೆಗೆಯಬೇಕು ಎಂದು pressure ತರುವುದಕ್ಕೂ ಕೂಡ ಅವಕಾಶಗಳಿವೆ. ಅದನ್ನೂ ಕೂಡ ನಾವು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಆದ್ದರಿಂದ, ಅವರು ಈಗ ಇದನ್ನು trial ಆಗಿ ತೆಗೆದುಕೊಳ್ಳಲಿ. ಮುಂದಿನ ದಿನಗಳಲ್ಲಿ ಬೇಕಾದರೆ ರೂಲ್ಸ್‌ನಲ್ಲಿ ಅಮೆಂಡ್ ಮಾಡಿಕೊಳ್ಳೋಣ. ಅಂಥ ಪರಿಸ್ಥಿತಿ ಬಂದಾಗ ಮಾಡೋಣ. ಆಗ ನಾವು ಯಾರೂ ಕೂಡ ರೈತರ ಹಿತವನ್ನು ಬಲಿಕೊಡತಕ್ಕಂಥಾದ್ದಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ :– ಅವರು argument ಏನು? ನೀವು ಇಷ್ಟೆಲ್ಲ ಕಾನೂನನ್ನು ತಂದಿರುವುದು ಯಾವ ಉದ್ದೇಶಕ್ಕಾಗಿ? ರೈತರ ಹಿತವನ್ನು ಕಾಪಾಡಲಿಕ್ಕೆ. ಅವರಿಗೆ ನ್ಯಾಯಯುತವಾದ ಬೆಲೆ ಸಿಗಬೇಕು, ರೈತರು ಹಾಳಾಗಬಾರದು, ಅವರು ಬೆಳೆದಂಥ ಪದಾರ್ಥಗಳು distress sale ಆಗಬಾರದು ಎನ್ನುವ ಕಾರಣಕ್ಕೋಸ್ಕರ ಇದನ್ನು ತಂದಿರುವುದು. to ensure it doubly, ಅವರು ಇದನ್ನೂ ಮಾಡಿ ಎಂದು ಹೇಳುತ್ತಿದ್ದಾರೆ. ಅದರಿಂದ ತೊಂದರೆಯೇನಾಗುತ್ತದೆ? ತೊಂದರೆಯೇನೂ ಆಗುವುದಿಲ್ಲ. Practical ಆಗಿ ಬಂದಾಗ ತೊಂದರೆ ಎಂದು ಕಂಡರೆ ಆಗ ತೆಗೆದುಹಾಕಬಹುದು. ಅಮೆಂಡ್ ಮಾಡಬಾರದು ಎಂದೇನೂ ಇಲ್ಲವಲ್ಲ. Constitution ಗೆ ಇಷ್ಟೊಂದು amendment ಗಳಾಗಿವೆ. ಹಾಗಿರುವಾಗ ಇದಕ್ಕೆ ಅಮೆಂಡ್ ಮಾಡಬಾರದು ಎಂದು ಎಲ್ಲಿದೆ? ಯಾವಾಗಲಾದರೂ ಮಾಡಬಹುದು.

ಶ್ರೀ ಶರಣಬಸಪ್ಪ ದರ್ಶನಾಪೂರ್ :– ಇಷ್ಟೆಲ್ಲಾ ಮಾಡಿದರೂ ಮತ್ತೆ ಅದೊಂದನ್ನು ತರಬೇಕು ಎಂದರೆ ಮತ್ತೆ ಅದು ಅಲ್ಲಿಗೇ ಬರುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ :– ಅದನ್ನು ಮಾಡಿಯೂ ಪ್ರಯೋಜನವಾಗುವುದಿಲ್ಲ.

ಶ್ರೀ ಸಿದ್ಧರಾಮಯ್ಯ :– ಒಂದು ಹೊಸ ವ್ಯವಸ್ಥೆಯ ಕಡೆಗೆ ಹೋಗುತ್ತಿದ್ದೀರಿ. ಇಲ್ಲಿಯವರೆಗೆ APMC ಇತ್ತು. ಈಗ ಖಾಸಗಿಯವರಿಗೆ ಕೂಡ ಮಾರುಕಟ್ಟೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ. ಒಂದು new system ಗೆ ಹೋಗುವಾಗ apprehension ಗಳನ್ನೆಲ್ಲ, clarify, clear ಮಾಡಿಕೊಂಡು ಹೋಗುವುದು ಒಳ್ಳೆಯದು. ಆದ್ದರಿಂದ ಅದನ್ನು ಮಾಡಿ. ಮುಂದೆ ಏನಾದರೂ ತೊಂದರೆಯಾದರೆ ಅದನ್ನು amendment ಮೂಲಕ remove ಮಾಡಿದರಾಯಿತು.

ಹಾಗೆ ಮಾಡುವುದಕ್ಕೆ ಏನೂ ತೊಂದರೆಯಾಗುವುದಿಲ್ಲ. It can be done. ನಿಮ್ಮ ಅಧಿಕಾರಿಗಳನ್ನೇ ಕೇಳೀ.

ಶ್ರೀ ಶರಣಬಸಪ್ಪ ದರ್ಶನಾಪೂರ್ :- ಇರಲಿ Sir. ಈಗ already ನಾವು elected body ಯಾದ APMC ಯ ಮೂಲಕವೇ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಇದನ್ನೂ ಕೂಡ ನೋಡೋಣ. ಹಾಗೇನಾದರೂ ತೊಂದರೆಯಾಗತಕ್ಕಂಥಾದ್ದು ಕಂಡುಬಂದರೆ amendment ತರಲು rule ನಲ್ಲಿ ಅವಕಾಶ ಮಾಡಿಕೊಡೋಣ. ಅಧ್ಯಕ್ಷರೇ, ಸರ್ವಾನುಮತದಿಂದ ಈ Bill pass ಮಾಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು :- ಆಯಿತು. ಈಗಾಗಲೇ ಬಹಳ ಜನ ಮಾತನಾಡಿದ್ದಾರೆ. ಎಲ್ಲರೂ ಬೆಳಕು ಚೆಲ್ಲಿದ್ದಾರೆ.

ಶ್ರೀ ಡಿ.ಆರ್. ಪಾಟೀಲ್ :- ಅವರು (ಅಧಿಕಾರಿಗಳು) ಒಪ್ಪುತ್ತಾರಂತೆ ನೋಡಿ. ನೀವೇಕೆ ಹೀಗೆ ಹಠ ಮಾಡುತ್ತಿದ್ದೀರಿ.

ಶ್ರೀ ಶರಣಬಸಪ್ಪ ದರ್ಶನಾಪೂರ್ :- ಮುಂದೆ ಮಾಡಬಹುದು.

ಶ್ರೀ ಡಿ.ಆರ್. ಪಾಟೀಲ್ :- ಆಮೇಲೆ ಮಾಡುವುದಕ್ಕೆ ಬರುವುದಿಲ್ಲ. ಸರ್ ಇದನ್ನು.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ :- ನೀವು ಹೇಳುವುದನ್ನು ನಾನು ಒಪ್ಪುತ್ತೇನೆ. ಇವತ್ತು private ನವರು ಮಾರುಕಟ್ಟೆಯಲ್ಲಿ ಬರಬೇಕು ಎಂದು ಎಂದು ನಾವು ಏಕೆ ಪ್ರಯತ್ನ ಮಾಡುತ್ತೇವೆ ಎಂದರೆ, competition ಬರಬೇಕು. ಇದು ಆಗದಿದ್ದರೆ competition ಬರುವುದಿಲ್ಲ. competition ಬರಬೇಕಾದರೆ ಇದು ಇರಬೇಕಾಗುತ್ತದೆ. ನಾಳೆ ನೋಡೋಣ. ಅಂಥಾದ್ದು ಬಂದರೆ amend ಮಾಡೋಣ. ರೈತರಿಗೆ ಏನಾದರೂ ತೊಂದರೆಯಾಗುವ ಹಾಗಿದ್ದರೆ ಮತ್ತೆ amendment ಮಾಡೋಣ. APMC ಎಂದು ಮಾಡಿದರೆ ಏನಾಗುತ್ತದೆಂದರೆ, ಮಾರುಕಟ್ಟೆಯಲ್ಲಿ ಒಬ್ಬ private ದಲ್ಲಾಳಿ ಬಂದಿರುತ್ತಾನೆ, ಅವನ ಬಳಿ APMC ಯ ಅಧ್ಯಕ್ಷರು, director ಗಳು ಹೋಗಿ, "ನೀನು ಕೂಗಬೇಡ, ಇಲ್ಲದಿದ್ದರೆ ನಿನ್ನ licence ರದ್ದು ಮಾಡುತ್ತೇವೆ" ಎಂದು ಹೇಳಬಹುದು. ಮೊದಲು ಅದೆಲ್ಲಾ ಇರಲಿಲ್ಲ. ಈಗ licence ಕೊಡುವ ಪದ್ಧತಿಯನ್ನು ಮಾಡಿದ್ದಾರೆ. ಆಗ ಅವರ ಮೇಲೆ pres-

sure ಹಾಕಬಹುದು. ಆದ್ದರಿಂದ, ನಾನು ಹೇಳುವುದೇನೆಂದರೆ, ಈಗ ಇರುವುದು ಸರಿಯಾಗಿದೆ. ಅದನ್ನು ನೀವು ಪಾಸ್ ಮಾಡಿಕೊಳ್ಳಿ ನಾಳೆಯೇನಾದರೂ ರೈತರಿಗೆ ತೊಂದರೆಯಾದರೆ amendment ಮಾಡಬೇಕಾಗುತ್ತದೆ.

ಶ್ರೀ ಶರಣಬಸಪ್ಪ ದರ್ಶನಾಪೂರ್ :– ಅವರು correct ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ನೆ.ಲ. ನರೇಂದ್ರಬಾಬು :– ಸನ್ಮಾನ್ಯ ಅಧ್ಯಕ್ಷರೇ, ನಮಗೂ ಒಂದೆರಡು ನಿಮಿಷ ಅವಕಾಶ ಕೊಡಿ.

(ಗೊಂದಲ)

ಶ್ರೀ ವೈಜನಾಥ ಪಾಟೀಲ್ :– ಅಧ್ಯಕ್ಷರೇ, ನಾನು ಮಾತನಾಡಬೇಕು ಎಂದು ಹೇಳಿ ಚೀಟಿ ಕೊಟ್ಟಿದ್ದೆ.

(ಗೊಂದಲ)

ಅಧ್ಯಕ್ಷರು :– ಈಗ ಪರ್ಯಾಲೋಚನಾ ಪ್ರಸ್ತಾಪವನ್ನು ತೆಗೆದುಕೊಳ್ಳೋಣ.

(ಗೊಂದಲ)

ಅಧ್ಯಕ್ಷರು :– ಎಲ್ಲರೂ ಕುಳಿತುಕೊಳ್ಳಿ. ಎಲ್ಲರೂ ಏಕೆ ಮಾತನಾಡುತ್ತೀರಿ.

(ಗೊಂದಲ)

ಶ್ರೀ ಧರಂಸಿಂಗ್ :– ನರೇಂದ್ರಬಾಬುರವರು ಎರಡು ನಿಮಿಷಗಳ ಅವಕಾಶ ಕೇಳುತ್ತಿದ್ದಾರೆ. ಅವರಿಗೆ ಅವಕಾಶ ಕೊಡಿ.

ಅಧ್ಯಕ್ಷರು :– ಆಯಿತು. ನೀವು ಎರಡು ನಿಮಿಷಗಳಲ್ಲಿ ಮುಗಿಸಬೇಕು. ಈಗಾಗಲೇ ಬಹಳಷ್ಟು ಜನ ಮಾತನಾಡಿದ್ದಾರೆ.

ಶ್ರೀ ವೈಜನಾಥ ಪಾಟೀಲ್ :– ಅಧ್ಯಕ್ಷರೇ, ನಾನು ಮಾತನಾಡುವವನಿದ್ದೇನೆ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) :– ಸನ್ಮಾನ್ಯ ಸಭಾಧ್ಯಕ್ಷರೇ, APMC ಗೂ ನಿಮಗೂ ಏನು ಸಂಬಂಧ ಎಂದು ಕೆಲವರು ಕೇಳುತ್ತಾರೆ. APMC yard ನನ್ನ ಕ್ಷೇತ್ರದ ಸುತ್ತಮುತ್ತ ಬರುತ್ತದೆ. ಮತ್ತು ಮೂಲಭೂತವಾಗಿ ನಾನು ಒಂದು ಕೃಷಿ ಕುಟುಂಬದಿಂದ ಬಂದಿರತಕ್ಕಂಥವನು, ಕೃಷಿಯ ಬಗ್ಗೆ

ತಿಳಿದುಕೊಂಡಿರತಕ್ಕಂಥವನು, ಕೃಷಿಯಲ್ಲಿ ವಂಚನೆಗೆ ಒಳಗಾಗಿರತಕ್ಕಂಥ ಕುಟುಂಬಗಳಲ್ಲಿ ನಾನೂ ಒಬ್ಬ ಎನ್ನುವ ಸ್ಪಷ್ಟೀಕರಣವನ್ನು ಮೊದಲಿಗೆ ಹೇಳುತ್ತೇನೆ. APMC ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರದ ಬಗ್ಗೆ ತಿದ್ದುಪಡಿಯನ್ನು ತರಲಿಕ್ಕೆ ರಾಜ್ಯ ಸರ್ಕಾರ ಹೊರಟಿದೆ, ಆ ಬಗ್ಗೆ ನಾನು ಒಂದು ವಿಷಯವನ್ನು ಹೇಳಲಿಕ್ಕೆ ಬಯಸುತ್ತೇನೆ. ಇದಕ್ಕೆ ಏಕೆ ತರಲು ಹೊರಟರು ಎಂದು APMC yard ನ ಅಂಗಡಿಗಳ ಮಾಲೀಕರು ನನ್ನ ಬಳಿ ಬಂದು ಹೇಳಿದಾಗ ನಾನು ಕೇಳಿದೆ, 1963 ರಲ್ಲಿ Act ಬಂದ ಮೇಲೆ ರೈತರಿಗೆ ಏನು ಉಪಯೋಗವಾಗಿದೆ, ಈಗ ಏನಾಗುತ್ತಿದೆ, ಇವತ್ತಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳಾದ ಮೇಲೆ ನಮ್ಮ ದೇಶದಲ್ಲಿ ರೈತರಿಗೆ ಸಲ್ಲಬೇಕಾಗಿದ್ದ ನ್ಯಾಯ ಸಲ್ಲುತ್ತಿಲ್ಲ, ಇದರಲ್ಲಿ ನಿಮ್ಮದೂ ತಪ್ಪಿದೆ ಎಂದು ವಾದ ಮಾಡಿದೆ. 1963 ನೇ ಇಸವಿ ಏಪ್ರಿಲ್ 4 ನೇ ತಾರೀಖಿನಂದು ಏತಕ್ಕೋಸ್ಕರ ಆ Bill introduce ಆಯಿತು ಎನ್ನುವುದನ್ನೆಲ್ಲಾ ಸಂಕ್ಷಿಪ್ತವಾಗಿ ಓದುತ್ತಾ ಹೋದೆ. On 4th April 1963 this Bill is intended to provide a uniform law relating to the better regulation of buying and selling of agricultural produce and establishment of market for agricultural produce throughout the new state of Karnataka, repealing and replacing the following Acts which are in force in the several areas. Bombay Agriculture Produce Market Act, 1939, The Madras Commercial Crops Act, 1933, Coorg Agricultural Produce Market Act, 1956, Hyderbad Agriculture Market Act, 1939. ಇವುಗಳನ್ನೆಲ್ಲ ಅಮೆಂಡ್ ಮಾಡಿದ ಉದ್ದೇಶ, ಈ ರೈತಾಪಿ ಜನಗಳನ್ನು ಶೋಷಣೆ ಮುಕ್ತವಾಗಿ ಮಾಡಬೇಕೆನ್ನುವುದಾಗಿತ್ತು. ರೈತ ಮತ್ತು ಗ್ರಾಹಕರ ಮಧ್ಯೆ ಇರತಕ್ಕಂಥ ಮಧ್ಯವರ್ತಿಗಳನ್ನು ತೆಗೆದು ಹಾಕಬೇಕೆಂದು ಇದನ್ನು ಮಾಡಿದ್ದು, ಇವತ್ತು ಹೊಸದಾಗಿ ಒಂದು ಖಾಸಗಿ ವಲಯವನ್ನು market yard ಗೆ ತರತಕ್ಕಂಥ ಒಂದು ಪ್ರಯತ್ನದಲ್ಲಿ ಏಕಿದ್ದೇವೆ ಎನ್ನುವುದು ಜಿಜ್ಞಾಸೆ. ಆದರೂ ಸಹ ನಾವು ಜಾಗತೀಕರಣವನ್ನು ಒಪ್ಪಿಕೊಂಡು ಆದಮೇಲೆ ಇಂಥಾದ್ದಕ್ಕೆ ಅವಕಾಶವನ್ನು ಕೊಡಬೇಕಾಗುತ್ತದೆ. ಆದರೆ ಒಂದು ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ನಾವು ಈ ಒಂದು ಶಾಸನದ ಮುಖೇನ ರೈತನನ್ನು ಶೋಷಣೆಗೆ ಗುರಿಪಡಿಸಬಾರದು. ಈ ಒಂದು ವಿಧೇಯಕದ ತಿದ್ದುಪಡಿ ನಾಳೆಯ ದಿವಸ ರೈತ

ಮತ್ತು ಗ್ರಾಹಕನಿಗೆ ಎಲ್ಲೋ ಒಂದು ಕಡೆ ಮರಣ ಶಾಸನವಾಗಬಾರದು ಎನ್ನತಕ್ಕಂಥ ಎಚ್ಚರಿಕೆಯನ್ನು ನಾವು ವಹಿಸಿ ತಿದ್ದುಪಡಿಯನ್ನು ತರತಕ್ಕಂಥ ಅವಶ್ಯಕತೆ ಇದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ನಾನು ಒಂದು ಮಾತನ್ನು ಬಹಳ ದುಃಖದಿಂದ ಹೇಳುತ್ತೇನೆ. ವ್ಯವಸಾಯ ಎಂದರೆ ಅದು ತೋಟಗಾರಿಕೆ ಇರಬಹುದು ಅಥವಾ ಕೃಷಿ ಉತ್ಪನ್ನಗಳ ಉತ್ಪಾದನೆ ಇರಬಹುದು, " ವ್ಯವಸಾಯ, ಮನೆ ಮಂದಿಯೆಲ್ಲ ಸಾಯ" ಎನ್ನತಕ್ಕಂಥ ಮಾತಿನಂತೆ ರೈತನಿಗೆ ಬಹಳ ಕಷ್ಟವಾಗಿದೆ. ರೈತನ ಉತ್ಪನ್ನಗಳಿಗೆ ಬೆಂಬಲಿತ ಬೆಲೆಯಾಗಲೀ, ಕನಿಷ್ಟ ಬೆಲೆಯಾಗಲೀ ಸಿಗದೇ ಇರತಕ್ಕಂಥ ಕಾಲದಲ್ಲಿ, ತರಕಾರಿಯಾಗಲೀ, ಸೊಪ್ಪಾಗಲೀ, ಹಣ್ಣುಹಂಪಲುಗಳಾಗಲೀ, ಎಲ್ಲ ವಿಚಾರದಲ್ಲಿ ನಾಳೆಯ ದಿವಸ ಮಾರುಕಟ್ಟೆಯನ್ನು ಸಂಪೂರ್ಣವಾಗಿ ಖಾಸಗಿಯವರಿಗೆ ಬಿಟ್ಟುಕೊಡುತ್ತೇವೋ ಎನ್ನುವ ಆತಂಕ ಎದುರಾಗಿದೆ. ಉದಾಹರಣೆಗಾಗಿ ಒಂದು ವಿಷಯವನ್ನು ಹೇಳುತ್ತೇನೆ. ಮುಂದೆ 10–12 ವರ್ಷಗಳಾದ ಮೇಲೆ ನಾವು ಚಿಂತನೆಯನ್ನು, ಪರಾಮರ್ಶೆ ಮಾಡುವಾಗ ಬಹುಶಃ ಗೊತ್ತಾಗಬಹುದು. ಹಿಂದೆ ಸಣ್ಣಪುಟ್ಟ ಸೋಡಾ ಮಾಡುತ್ತಿದ್ದಂಥವರು, ದೊಡ್ಡ ದೊಡ್ಡ ಕಂಪನಿಗಳು ಬಂದ ಮೇಲೆ ಏನಾದರು ಎನ್ನುವುದು ಗೊತ್ತು. ಪೆಟ್ರೋಲ್ ಬಂಕ್‌ಗಳು ಕ್ವಾಲಿಟಿ ಪದಾರ್ಥವನ್ನು ಕೊಡದೇ ಇದ್ದುದಕ್ಕೆ ಇವತ್ತು Reliance ಇರಬಹುದು, Shell ಇರಬಹುದು ಬಂದಿರುವುದನ್ನು ನೋಡಬಹುದು. ಈ ರೀತಿಯಾಗಿ ಮತ್ತೆ ನಾವು Multi National Company ಗಳ ದಾಸ್ಯಕ್ಕೆ ಒಳಗಾಗುತ್ತೇವೇನೋ ಎನ್ನುವ ಒಂದು ಆತಂಕವನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸಲಿಕ್ಕೆ ಬಯಸುತ್ತೇನೆ. Darwin's ನ Theory, survival of the fittest and settle for existence ಎನ್ನುವ ರೀತಿಯಲ್ಲಿ Market ನಲ್ಲಿ APMC ಉಳಿಯುತ್ತದೆಯೋ ಇಲ್ಲವೋ ಎನ್ನವುದು ಗೊತ್ತಿಲ್ಲ. ನಮ್ಮ ಚುನಾಯಿತರಿಂದ ನಡೆಸತಕ್ಕಂಥ APMC ಖಂಡಿತವಾಗಿಯೂ ಉಳಿಯಲಿಕ್ಕೆ ಸಾಧ್ಯವಾಗುವುದಿಲ್ಲ. ಆದರೆ, ಸರ್ಕಾರ ನಿಯಂತ್ರಣವನ್ನು ಬಿಟ್ಟುಕೊಡಬಾರದೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಈ ಅಮೆಂಡ್‌ಮೆಂಟ್ ತರತಕ್ಕಂಥದ್ದರಲ್ಲಿ ಒಂದು ಹೇಳಿದ್ದೀರಿ, 3 ಮತ್ತು 1 ತಿದ್ದುಪಡಿಯಲ್ಲಿ 'ನಿಯಂತ್ರಣ ಮತ್ತು ಸಂಸ್ಕರಣ' ಎನ್ನತಕ್ಕಂಥದ್ದನ್ನು ಮತ್ತು "ಅಭಿವೃದ್ಧಿ" ಇದರಲ್ಲಿ page no. 2, item no. 3 :1 ನೇ ಪ್ರಕರಣದ ತಿದ್ದುಪಡಿಯಲ್ಲಿ ಮಾಡುವುದು ಸೂಕ್ತ. ಇಲ್ಲವೆಂದರೆ ಬಹಳ ಕಷ್ಟವಾಗುತ್ತದೆ. ಇದನ್ನೂ ಅದರ ಜೊತೆಯಲ್ಲಿ ಸೇರಸಿಬೇಕಾಗುತ್ತದೆ ಮತ್ತು 'ಖಾಸಗಿ ಮಾರುಕಟ್ಟೆ ಪ್ರಾಂಗಣ' ಎನ್ನುವುದನ್ನು

ಹೇಳಿದ್ದೀರಿ. ಇಲ್ಲಿ ಹಿಡಿತವನ್ನು ಸಾಧಿಸಲಿಕ್ಕೆ ರೈತ ಪ್ರತಿನಿಧಿಗಳನ್ನು ಅಥವಾ ಸರಿಯಾದ ಪ್ರತಿನಿಧಿಗಳಿಗೆ ಅವಕಾಶ ಕೊಡದೇ ಹೋದರೆ ಖಂಡಿತವಾಗಿಯೂ ದೊಡ್ಡ dictatorship ಆಗುತ್ತದೆ, ಇದರಿಂದ cotrol ತಪ್ಪುತ್ತದೆ. ಬಹುಶಃ ಮುಂದಿನ ದಿನಗಳಲ್ಲಿ ಇವತ್ತು ಹೇಗೆ ಬೇರೆ ಬೇರೆ ಖಾಸಗಿಯವರು dictatorship ಮಾಡುತ್ತಾರೋ, ಆರಂಭದಲ್ಲಿ ಅವರೆಲ್ಲ ಬಹಳ ರೈತರ ಪರವಾಗಿಯೇ ಇರುತ್ತಾರೆ. ಕ್ರಮೇಣವಾಗಿ ಶೋಷಣೆಗೆ ಒಳಗಾಗುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಎಚ್ಚರಿಕೆಯ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇನ್ನು page no .4 ರಲ್ಲಿ ಕ್ರಮ ಸಂಖ್ಯೆ 6 ರ 8ನೇ ಪ್ರಕರಣದ ತಿದ್ದುಪಡಿಯಲ್ಲಿ – " ಅಥವಾ ಉಪ ಮಾರುಕಟ್ಟೆ ಪ್ರಾಂಗಣ" ಎನ್ನುವುದು ಇಲ್ಲಿದೆ. ಮುಂದೆ page no. 21 ರಲ್ಲಿ ಇದು ಬಿಟ್ಟುಹೋಗಿದೆ. ಇದು ಸೇರ್ಪಡೆಯಾಗಬೇಕು ಮತ್ತು amendment ಕೊಟ್ಟಿರುವುದರಲ್ಲಿ Nationalized Bank ಎನ್ನುವುದನ್ನು ತೆಗೆದುಹಾಕಿಬಿಟ್ಟಿದ್ದಾರೆ. ದಯವಿಟ್ಟು ಅದನ್ನು retain ಮಾಡಬೇಕು. Amendment ನಲ್ಲಿ clause 12 ನಲ್ಲಿ In the proposed New Section 64 (B) Section 2 the words in a Government Savings Banks or' Shall be omitted ಎಂದು ಇದೆ. ದಯವಿಟ್ಟು ಅದನ್ನು omit ಮಾಡುವುದು ಸೂಕ್ತವಲ್ಲ. ಯಾವುದೋ ಖಾಸಗಿ ICICI ಬ್ಯಾಂಕುಗಳು, ಇನ್ನ್ಯಾವುದೋ ಬ್ಯಾಂಕುಗಳು ಹೋಗಿ ನಾಳೆಯ ದಿವಸ ಯಾವುದೋ ಒಂದು ಲುಕ್ಸಾನು ಆಗಿ ತೊಂದರೆಯಾಗತಕ್ಕಂಥದ್ದು ಆಗಬಾರದು. ಅದನ್ನು ಸಹ ಏಕೆ ಅಮೆಂಡ್‌ಮೆಂಟ್ ಮಾಡಬಾರದು ಎಂದು ಕೇಳಿಕೊಂಡು, ನಾಳೆ ದಿವಸ strike ಗಳು ಆದರೆ, ನಾಳೆಯ ದಿವಸ ರೈತರಿಗೆ ಏನಾಗಬೇಕು? ಇವೆಲ್ಲವುಗಳ ಬಗ್ಗೆ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ತರಾತುರಿಯಲ್ಲಿ ಮಾಡಿ, ಅದಕ್ಕೆ ಒಪ್ಪಿಗೆ ಕೊಟ್ಟು ನಾಳೆಯ ದಿವಸ ಕೈಕಟ್ಟಿಕೊಂಡು ನಾವೇ ನಾವು ಹಗ್ಗ ಕೊಟ್ಟು ಕೈಕಟ್ಟಿಕೊಳ್ಳುವ ಸ್ಥಿತಿ ಬರಬಾರದೆಂಬ ಮಾತನ್ನು ಹೇಳುತ್ತಾ ಮತ್ತು ಅಲ್ಲಿ weighers ಏನಿದ್ದಾರೆ, ಅವರ ಸ್ಥಿತಿ ಏನಾಗಬೇಕು? ಅಲ್ಲಿ ಕೆಲಸ ಮಾಡುತ್ತಿದವರ ಸ್ಥಿತಿ ಏನಾಗಬೇಕು? ಆ ಕಾರ್ಮಿಕರ ಸ್ಥಿತಿ ಏನಾಗಬೇಕು? ಅವರನ್ನು ಸರ್ಕಾರದಲ್ಲಿ ವಿಲೀನ ಮಾಡುವ ಪ್ರಕ್ರಿಯೆ ಸಹ ಸರ್ಕಾರ ಕೈಗೆತ್ತಿಕೊಳ್ಳಬೇಕು. ಮತ್ತೆ Minister ರವರು amendment ಎಂದು ಏನು ಕಳುಹಿಸಿದ್ದಾರೆ, ಅದರಲ್ಲೊಂದು ತಪ್ಪಿದೆ. Karnataka Legislative Assembly ಗೆ Twelfth Assembly, Sixth Session ಎಂದು ಇದೆ. ಅದನ್ನು Fifth Session ಎಂದು ಸರಿ ಮಾಡಬೇಕು. ಬಹುಶಃ printing mistake ಅಥವಾ oversight ಆಗಿರಬೇಕು. ನಮಗೆ ಕಳುಹಿಸಿರುವ provisional admitted ನಲ್ಲಿ sixth session ಎಂದು

ಇದೆ. ಅದು fifth session ಎಂದು ಇರಬೇಕು. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಅಮೆಂಡ್‌ಮೆಂಟ್‌ಗಳನ್ನು ತಂದು ಯಾವುದೇ ಕಾರಣಕ್ಕೂ ಜನಗಳು ನಮಗೆ ಕೊಟ್ಟಿರುವ ಅಧಿಕಾರವನ್ನು ಬೇರೆಯವರಿಗೆ ಕೊಡತಕ್ಕಂಥದ್ದು, ಸರಿಯಲ್ಲ. ಏಕೆ ವಿಫಲರಾಗಿದ್ದೇವೆ? ನಾಳೆಯ ದಿವಸ 224 ಶಾಸಕರನ್ನು ಆಯ್ಕೆ ಮಾಡುತ್ತಾರೆ. ನಾಳೆಯ ದಿವಸ ಇನ್ನೊಬ್ಬರನ್ನು outsource ಮಾಡತಕ್ಕಂಥ ಅನಾಥ ದೈನೇಶಿ ಸ್ಥಿತಿಗೆ ಬರಬಾರದು. ಈ ಒಂದು ದಿಶೆಯಲ್ಲಿ ಬಹಳ ಎಚ್ಚರಿಕೆಯನ್ನು ಇಟ್ಟುಕೊಳ್ಳಬೇಕು. ಎಲ್ಲೋ ಒಂದು ಕಡೆ ರೈತ ಪ್ರತಿನಿಧಿಗಳು ಎಲ್ಲರೂ ವಿಫಲರಾಗಿರುವುದರಿಂದ ಇಂಥ ಹೀನಾಯ ಸ್ಥಿತಿಗೆ ಬಂದು ಖಾಸಗೀಕರಣ competition ಗೆ ಅವಕಾಶ ಮಾಡಿ ಕೊಡುತ್ತಿದ್ದೀರಿ. ಇವೆಲ್ಲ ಅಮೆಂಡ್‌ಮೆಂಟ್‌ಗಳನ್ನು ಮಾಡುತ್ತಾ ಮಾಡುತ್ತಾ ರೈತರನ್ನು healthy competition ಗೆ ತರಬೇಕೇ ಹೊರತು ನಾಳೆಯ ದಿವಸ ರೈತರನ್ನು ಸಂಪೂರ್ಣವಾಗಿ ನುಂಗಿ ಹಾಕುವಂಥದ್ದಾಗಬಾರದು. ಸಣ್ಣ ಮೀನು ದೊಡ್ಡ ಮೀನುಗಳನ್ನು ನುಂಗಿ ಹಾಕುವ ಹಾಗೆ ಆಗಬಾರದು ಎಂದು ಮನವಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಶ್ರೀ ವೈಜನಾಥ ಪಾಟೀಲ್ :- ಮಾನ್ಯ ಅಧ್ಯಕ್ಷರೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು :- ಎಲ್ಲರಿಗೂ ಮಾತನಾಡುವುದಕ್ಕೆ ಎಲ್ಲಿ ಅವಕಾಶವಿದೆ?

(ಗೊಂದಲ)

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ,

"2007 ನೇ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವೈಜನಾಥ ಪಾಟೀಲ್‌ರು ಸದನದ ಬಾವಿಗೆ ಆಗಮಿಸಿದರು)

ಅಧ್ಯಕ್ಷರು :- ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಡಿ.ಆರ್. ಪಾಟೀಲರು ತಿದ್ದುಪಡಿ ಸೂಚನೆಯನ್ನು ನೀಡಿದ್ದಾರೆ. ನೀವು ಏನು ಹೇಳುತ್ತೀರಿ? ಇದಕ್ಕೆ press ಮಾಡುತ್ತೀರಾ? ಹೇಗೆ? ಏನು ಮಾಡುತ್ತೀರಿ?

ಶ್ರೀ ಡಿ.ಆರ್. ಪಾಟೀಲ್ :- Government has accepted certain amendments. ಸರ್ಕಾರ ಇನ್ನೊಂದು amendment ಅನ್ನು accept ಮಾಡಬೇಕಾಗಿತ್ತು. ಮಾಡುತ್ತಿಲ್ಲ. ಆದರೂ ಅನಿವಾರ್ಯವಾಗಿ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಸಿದ್ಧರಾಮಯ್ಯ :- ಮಾನ್ಯ ವೈಜನಾಥ ಪಾಟೀಲರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು :- ಕೊಡೋಣ. ಇನ್ನೊಂದು ಸಲ ಅವಕಾಶ ಕೊಡುತ್ತೇನೆ. ತಾವು ತಮ್ಮ ಸ್ಥಾನಕ್ಕೆ ಹೋಗಿ. Next time ಅವಕಾಶ ಕೊಡೋಣ.

(ಗೊಂದಲ)

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 7 ರ ವರೆಗೆ

ಅಧ್ಯಕ್ಷರು :- " ಖಂಡ 2 ರಿಂದ 7 ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 7 ರ ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 8, 12, 13, 16, 18, 29 ಕ್ಕೆ ತಿದ್ದುಪಡಿ

ಶ್ರೀ ಶರಣಬಸಪ್ಪ ದರ್ಶನಾಪೂರ್ (ಕೃಷಿ ಮಾರುಕಟ್ಟೆ ಸಚಿವರು) :- ಮಾನ್ಯ ಅಧ್ಯಕ್ಷರೆ, ಖಂಡ 8, 12, 13, 16, 18, 29 ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಸದರಿ ವಿಧೇಯಕದ 8 ನೇ ಖಂಡದಲ್ಲಿ (ಮೂಲ ಅಧಿನಿಯಮದ 27 ನೇ ಪ್ರಕರಣಕ್ಕೆ ಸಂಬಂಧಪಟ್ಟ ತಿದ್ದುಪಡಿಯಲ್ಲಿ) "ಕೂಡಲೇ" ಎಂಬ ಪದಕ್ಕೆ "ಎರಡು ಕೆಲಸದ ದಿನಗಳೊಳಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು."

ಪ್ರಸ್ತಾವ ಮಂಡಿಸಲಾಯಿತು.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

"ಸದರಿ ವಿಧೇಯಕದ 8 ನೇ ಖಂಡದಲ್ಲಿ (ಮೂಲ ಅಧಿನಿಯಮದ 27 ನೇ ಪ್ರಕರಣಕ್ಕೆ ಸಂಬಂಧಪಟ್ಟ ತಿದ್ದುಪಡಿಯಲ್ಲಿ) "ಕೂಡಲೇ" ಎಂಬ ಪದಕ್ಕೆ "ಎರಡು ಕೆಲಸದ ದಿನಗಳೊಳಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 8 ಕ್ಕೆ ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

"ಖಂಡ 8 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 8 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 9 ರಿಂದ 11 ರ ವರೆಗೆ

ಅಧ್ಯಕ್ಷರು :- "ಖಂಡ 9 ರಿಂದ 11 ರ ವರೆಗೆ ಎರಡೂ ಸೇರಿಸಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 9 ರಿಂದ 11 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 12 ಕ್ಕೆ ತಿದ್ದುಪಡಿ

ಶ್ರೀ ಶರಣಬಸಪ್ಪ ದರ್ಶನಾಪೂರ್ (ಕೃಷಿ ಮಾರುಕಟ್ಟೆ ಸಚಿವರು) :- ಮಾನ್ಯ ಅಧ್ಯಕ್ಷರೆ, ಖಂಡ 12 ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ;

"ಸದರಿ ವಿಧೇಯಕದ 12 ನೇ ಖಂಡದಲ್ಲಿ :-

(ಎ) ಪ್ರಸ್ತಾವಿತ ಹೊಸ 64 ಬಿ ಪ್ರಕರಣದ (2) ನೇ ಉಪ ಪ್ರಕರಣದಲ್ಲಿ "ಸರ್ಕಾರಿ ಉಳಿತಾಯ ಬ್ಯಾಂಕು ಅಥವಾ" ಎಂಬ ಪದಗಳನ್ನು ಬಿಟ್ಟು ಬಿಡತಕ್ಕದ್ದು,

(ಬಿ) ಪ್ರಸ್ತಾವಿತ ಹೊಸ 64 ಸಿ ಪ್ರಕರಣದ (2) ನೇ ಉಪ ಪ್ರಕರಣದಲ್ಲಿ (ಇ) ಉಪ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಇ) ಉತ್ಪಾದಕನಿಗೆ ಸಮಂಜಸ ಲಾಭಾವಕಾಶ ದೊರಕಿಸಿಕೊಡುವುದು;

(ಎಫ್) ಯೋಜನೆಯಲ್ಲಿ ಸರ್ಕಾರವು ಆದೇಶಿಸಿರುವಂಥ ಇತರ ಅಂಶಗಳು.

<u>ಪ್ರಸ್ತಾವ ಮಂಡಿಸಲಾಯಿತು.</u>

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

"ಸದರಿ ವಿಧೇಯಕದ 12 ನೇ ಖಂಡದಲ್ಲಿ :-

(ಎ) ಪ್ರಸ್ತಾವಿತ ಹೊಸ 64 ಬಿ ಪ್ರಕರಣದ (2) ನೇ ಉಪ ಪ್ರಕರಣದಲ್ಲಿ "ಸರ್ಕಾರಿ ಉಳಿತಾಯ ಬ್ಯಾಂಕು ಅಥವಾ" ಎಂಬ ಪದಗಳನ್ನು ಬಿಟ್ಟು ಬಿಡತಕ್ಕದ್ದು,

(ಬಿ) ಪ್ರಸ್ತಾವಿತ ಹೊಸ 64 ಸಿ ಪ್ರಕರಣದ (2) ನೇ ಉಪ ಪ್ರಕರಣದಲ್ಲಿ (ಇ) ಉಪ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಇ) ಉತ್ಪಾದಕನಿಗೆ ಸಮಂಜಸ ಲಾಭಾವಕಾಶ ದೊರಕಿಸಿಕೊಡುವುದು;

(ಎಫ್) ಯೋಜನೆಯಲ್ಲಿ ಸರ್ಕಾರವು ಆದೇಶಿಸಿರುವಂಥ ಇತರ ಅಂಶಗಳು."

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.</u>

<u>ಖಂಡ 12 ಕ್ಕೆ ತಿದ್ದುಪಡಿಯಾದ ರೀತಿಯಲ್ಲಿ</u>

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

"ಖಂಡ 12 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 12 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 13 ಕ್ಕೆ ತಿದ್ದುಪಡಿ

ಶ್ರೀ. ಶರಣಬಸಪ್ಪ ದರ್ಶನಾಪೂರ್ (ಕೃಷಿ ಮಾರುಕಟ್ಟೆ ಸಚಿವರು) :- ಮಾನ್ಯ ಅಧ್ಯಕ್ಷರೆ, ಖಂಡ 13 ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ;

"ಸದರಿ ವಿಧೇಯಕದ ಖಂಡ 13 ರ ಉಪ ಖಂಡ (1) ರ ಮೂಲ ಅಧಿನಿಯಮದ 65 ನೇ ಪ್ರಕರಣದ (2) ಉಪ-ಪ್ರಕರಣಕ್ಕೆ ಸಂಬಂಧಪಟ್ಟ ತಿದ್ದುಪಡಿಯಲ್ಲಿ ಪರಂತುಕದಲ್ಲಿ "ಖಾಸಗಿ ಮಾರುಕಟ್ಟೆ ಲೈಸೆನ್ಸುದಾರನು, ಸ್ಥಾಪಿಸಿರುವ ಖಾಸಗಿ ಮಾರುಕಟ್ಟೆ ಪ್ರಾಂಗಣದಲ್ಲಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

"ಸದರಿ ವಿಧೇಯಕದ ಖಂಡ 13 ರ ಉಪ ಖಂಡ (1) ರ ಮೂಲ ಅಧಿನಿಯಮದ 65 ನೇ ಪ್ರಕರಣದ (2) ಉಪ-ಪ್ರಕರಣಕ್ಕೆ ಸಂಬಂಧಪಟ್ಟ ತಿದ್ದುಪಡಿಯಲ್ಲಿ ಪರಂತುಕದಲ್ಲಿ "ಖಾಸಗಿ ಮಾರುಕಟ್ಟೆ ಲೈಸೆನ್ಸುದಾರನು, ಸ್ಥಾಪಿಸಿರುವ ಖಾಸಗಿ ಮಾರುಕಟ್ಟೆ ಪ್ರಾಂಗಣದಲ್ಲಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 13 ಕ್ಕೆ ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

"ಖಂಡ 13 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 13 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 14 ಮತ್ತು 15 ರ ವರೆಗೆ

ಅಧ್ಯಕ್ಷರು :- "ಖಂಡ 14 ಮತ್ತು 15 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 14 ಮತ್ತು 15 ರ ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 16 ಕ್ಕೆ ತಿದ್ದುಪಡಿ

ಶ್ರೀ ಶರಣಬಸಪ್ಪ ದರ್ಶನಾಪೂರ್ (ಕೃಷಿ ಮಾರುಕಟ್ಟೆ ಸಚಿವರು) :- ಮಾನ್ಯ ಅಧ್ಯಕ್ಷರೆ, ಖಂಡ 16 ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ;

"ಸದರಿ ವಿಧೇಯಕದ 16 ನೇ ಖಂಡದಲ್ಲಿ (75 ನೇ ಪ್ರಕರಣಕ್ಕೆ ಸಂಬಂಧಪಟ್ಟ ತಿದ್ದುಪಡಿಯಲ್ಲಿ :-

(ಎ) (1) ನೇ ಉಪ ಪ್ರಕರಣದ (4) ನೇ ಬಾಬಿನಲ್ಲಿ "ಬಡ್ಡಿಯು ಸೇರಿದಂತೆ" ಎಂಬ ಪದಗಳಿಗೆ "ಅನುಸೂಚಿತ ಬ್ಯಾಂಕುಗಳು ವಿಧಿಸುವ ದರವನ್ನು ಮೀರದ ದರದ ಬಡ್ಡಿಯೂ ಸೇರಿದಂತೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು,

(ಬಿ) (3) ನೇ ಉಪ ಪ್ರಕರಣದಲ್ಲಿ "ಕಾರ್ಯ ನಿರ್ವಹಿಸಲು ಅನುಮತಿಸತಕ್ಕದ್ದಲ್ಲ" ಎಂಬ ಪದಗಳಿಗೆ "ರಾಜ್ಯದೊಳಗಿನ ಯಾವುದೇ ಮಾರುಕಟ್ಟೆ ಪ್ರದೇಶದಲ್ಲಿ ಕಾರ್ಯನಿರ್ವಹಿಸಲು ಅನುಮತಿಸತಕ್ಕದ್ದಲ್ಲ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಮಂಡಿಸಲಾಯಿತು.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

"ಸದರಿ ವಿಧೇಯಕದ 16 ನೇ ಖಂಡದಲ್ಲಿ (75 ನೇ ಪ್ರಕರಣಕ್ಕೆ ಸಂಬಂಧಪಟ್ಟ ತಿದ್ದುಪಡಿಯಲ್ಲಿ :-

(ಎ) (1) ನೇ ಉಪ ಪ್ರಕರಣದ (4) ನೇ ಬಾಬಿನಲ್ಲಿ "ಬಡ್ಡಿಯು ಸೇರಿದಂತೆ" ಎಂಬ ಪದಗಳಿಗೆ "ಅನುಸೂಚಿತ ಬ್ಯಾಂಕುಗಳು ವಿಧಿಸುವ ದರವನ್ನು ಮೀರದ ದರದ ಬಡ್ಡಿಯೂ ಸೇರಿದಂತೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು,

(ಬಿ) (3) ನೇ ಉಪ ಪ್ರಕರಣದಲ್ಲಿ "ಕಾರ್ಯ ನಿರ್ವಹಿಸಲು ಅನುಮತಿಸತಕ್ಕದ್ದಲ್ಲ" ಎಂಬ ಪದಗಳಿಗೆ "ರಾಜ್ಯದೊಳಗಿನ ಯಾವುದೇ ಮಾರುಕಟ್ಟೆ ಪ್ರದೇಶದಲ್ಲಿ ಕಾರ್ಯನಿರ್ವಹಿಸಲು ಅನುಮತಿಸತಕ್ಕದ್ದಲ್ಲ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 16 ಕ್ಕೆ ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

(ಖಂಡ **16** ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ.)

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ **16** ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 17 :

ಅಧ್ಯಕ್ಷರು :- "ಖಂಡ 17 ಈ ವಿಧೇಯಕದ ಅಂಗವಾಗಿರುತ್ತದೆ."

(ಖಂಡ 17 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 18 ಕ್ಕೆ ತಿದ್ದುಪಡಿ

ಶ್ರೀ ಶರಣಬಸಪ್ಪ ದರ್ಶನಾಪೂರ್ (ಕೃಷಿ ಮಾರುಕಟ್ಟೆ ಸಚಿವರು) :- ಮಾನ್ಯ ಅಧ್ಯಕ್ಷರೆ, ಖಂಡ 18 ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ;

"ಸದರಿ ವಿಧೇಯಕದ 18 ನೇ ಖಂಡದಲ್ಲಿ (ಸೇರಿಸಲು ಉದ್ದೇಶಿಸಿದ 78ಎ ಪ್ರಕರಣದಲ್ಲಿ) "ಕಾರ್ಯನಿರ್ವಹಿಸಲು ಅನುಮತಿಸತಕ್ಕದ್ದಲ್ಲ" ಎಂಬ ಪದಗಳಿಗೆ "ರಾಜ್ಯದೊಳಗಿನ ಯಾವುದೇ ಮಾರುಕಟ್ಟೆ ಪ್ರದೇಶದಲ್ಲಿ ಕಾರ್ಯನಿರ್ವಹಿಸಲು ಅನುಮತಿಸತಕ್ಕದ್ದಲ್ಲ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಮಂಡಿಸಲಾಯಿತು.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

"ಸದರಿ ವಿಧೇಯಕದ 18 ನೇ ಖಂಡದಲ್ಲಿ (ಸೇರಿಸಲು ಉದ್ದೇಶಿಸಿದ 78ಎ ಪ್ರಕರಣದಲ್ಲಿ) "ಕಾರ್ಯನಿರ್ವಹಿಸಲು ಅನುಮತಿಸತಕ್ಕದ್ದಲ್ಲ" ಎಂಬ ಪದಗಳಿಗೆ "ರಾಜ್ಯದೊಳಗಿನ ಯಾವುದೇ ಮಾರುಕಟ್ಟೆ ಪ್ರದೇಶದಲ್ಲಿ ಕಾರ್ಯನಿರ್ವಹಿಸಲು ಅನುಮತಿಸತಕ್ಕದ್ದಲ್ಲ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 18 ಕ್ಕೆ ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

"ಖಂಡ 18 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 18 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 19 ರಿಂದ 28 ರವರೆಗೆ :

ಅಧ್ಯಕ್ಷರು :– "ಖಂಡ 19 ರಿಂದ 28ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 19 ರಿಂದ 28 ರ ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 29 ಕ್ಕೆ ತಿದ್ದುಪಡಿ

ಶ್ರೀ ಶರಣಬಸಪ್ಪ ದರ್ಶನಾಪೂರ್ (ಕೃಷಿ ಮಾರುಕಟ್ಟೆ ಸಚಿವರು) :– ಮಾನ್ಯ ಅಧ್ಯಕ್ಷರೆ, ಖಂಡ 29 ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ;

"ಸದರಿ ವಿಧೇಯಕದ 29 ನೇ ಖಂಡದಲ್ಲಿ

(ಎ) ಸೇರಿಸಲು ಉದ್ದೇಶಿಸಿದ 131 ಡಿ ಪ್ರಕರಣದ (2) ಉಪ ಪ್ರಕರಣದಲ್ಲಿ "ಶುಲ್ಕಗಳು" ಎಂಬ ಪದಗಳಿಗೆ "ಶುಲ್ಕಗಳು ಹಾಗೂ ಭದ್ರತೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಸೇರಿಸಲು ಉದ್ದೇಶಿಸಿದ 131 ಡಿ ಪ್ರಕರಣದ (3) ನೇ ಉಪ ಪ್ರಕರಣದಲ್ಲಿ "ಶುಲ್ಕದೊಡನೆ" ಎಂಬ ಪದಗಳಿಗೆ "ಶುಲ್ಕಗಳು ಹಾಗೂ ಭದ್ರತೆಯೊಡನೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಸಿ) ಸೇರಿಸಲು ಉದ್ದೇಶಿಸಿದ 131 ಜಿ ಪ್ರಕರಣದ (1) ನೇ ಉಪ ಪ್ರಕರಣದಲ್ಲಿ, "ಸಂಧಾನ ಮತ್ತು ಮಧ್ಯಸ್ಥಿಕೆ" ಎಂಬ ಪದಗಳಿಗೆ "ಹದಿನೈದು ದಿನಗಳೊಳಗೆ ಸಂಧಾನ ಮತ್ತು ಮಧ್ಯಸ್ಥಿಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಡಿ) ಸೇರಿಸಲು ಉದ್ದೇಶಿಸಿದ 131 ಜಿ ಪ್ರಕರಣದ (2) ನೇ ಉಪ ಪ್ರಕರಣದಲ್ಲಿ, "ಅಪೀಲು ಸಲ್ಲಿಸಬಹುದು" ಎಂಬ ಪದಗಳಿಗೆ "ಮೂವತ್ತು ದಿನಗಳೊಳಗೆ ಅಪೀಲು ಸಲ್ಲಿಸಬಹುದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಮಂಡಿಸಲಾಯಿತು.

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ;

(ಎ) ಸೇರಿಸಲು ಉದ್ದೇಶಿಸಿದ 131 ಡಿ ಪ್ರಕರಣದ (2) ಉಪ ಪ್ರಕರಣದಲ್ಲಿ "ಶುಲ್ಕಗಳು" ಎಂಬ ಪದಗಳಿಗೆ "ಶುಲ್ಕಗಳು ಹಾಗೂ ಭದ್ರತೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಸೇರಿಸಲು ಉದ್ದೇಶಿಸಿದ 131 ಡಿ ಪ್ರಕರಣದ (3) ನೇ ಉಪ ಪ್ರಕರಣದಲ್ಲಿ "ಶುಲ್ಕದೊಡನೆ" ಎಂಬ ಪದಗಳಿಗೆ "ಶುಲ್ಕಗಳು ಹಾಗೂ ಭದ್ರತೆಯೊಡನೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಸಿ) ಸೇರಿಸಲು ಉದ್ದೇಶಿಸಿದ 131 ಜಿ ಪ್ರಕರಣದ (1) ನೇ ಉಪ ಪ್ರಕರಣದಲ್ಲಿ, "ಸಂಧಾನ ಮತ್ತು ಮಧ್ಯಸ್ಥಿಕೆ" ಎಂಬ ಪದಗಳಿಗೆ "ಹದಿನೈದು ದಿನಗಳೊಳಗೆ ಸಂಧಾನ ಮತ್ತು ಮಧ್ಯಸ್ಥಿಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಡಿ) ಸೇರಿಸಲು ಉದ್ದೇಶಿಸಿದ 131 ಜಿ ಪ್ರಕರಣದ (2) ನೇ ಉಪ ಪ್ರಕರಣದಲ್ಲಿ, "ಅಪೀಲು ಸಲ್ಲಿಸಬಹುದು" ಎಂಬ ಪದಗಳಿಗೆ "ಮೂವತ್ತು ದಿನಗಳೊಳಗೆ ಅಪೀಲು ಸಲ್ಲಿಸಬಹುದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 29 ಕ್ಕೆ ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ;

"ಖಂಡ 29 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 29 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 30 ರಿಂದ 33ರ ವರೆಗೆ :

ಅಧ್ಯಕ್ಷರು :– "ಖಂಡ 30 ರಿಂದ 33ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 30 ರಿಂದ 33 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

(ಈ ಹಂತದಲ್ಲಿ ಮಾನ್ಯ ವೈಜನಾಥ ಪಾಟೀಲರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಹಿಂತಿರುಗಿದರು)

ಖಂಡ 1 ಇತ್ಯಾದಿ

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ :

ಶ್ರೀ ಶರಣಬಸಪ್ಪ ದರ್ಶನಾಪೂರ್ (ಕೃಷಿ ಮಾರುಕಟ್ಟೆ ಸಚಿವರು):– ಮಾನ್ಯ ಅಧ್ಯಕ್ಷರೆ, 2007 ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ)(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ,

"2007 ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ)(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು :– ಈಗ ವಿತ್ತೀಯ ಕಾರ್ಯಕಲಾಪಗಳನ್ನು ತೆಗೆದುಕೊಳ್ಳೋಣ. ವಿರೋಧ ಪಕ್ಷದ ನಾಯಕರು ಮಾತನಾಡುತ್ತೀರಾ?

ಶ್ರೀ ಎನ್. ಧರ್ಮಸಿಂಗ್ :– ಸದನದಲ್ಲಿ ಉಪ ಮುಖ್ಯಮಂತ್ರಿಗಳು ಇಲ್ಲ, ಬೇರೆ ಮುಖ್ಯವಾದ ಮಂತ್ರಿಗಳು ಇಲ್ಲ, ನಾಳೆ ತೆಗೆದುಕೊಳ್ಳಿ.

ಶ್ರೀ ಸಿದ್ಧರಾಮಯ್ಯ :– ಅರ್ಧಗಂಟೆ ಕಾಲಾವಧಿ ಚರ್ಚೆಗೆ ಮಾನ್ಯ ಸದಸ್ಯರು ಏನು ಕೇಳಿಕೊಂಡಿದ್ದಾರೆ ಅವರಿಗೆ ಅವಕಾಶ ಕೊಡಿ.

ಶ್ರೀ ಬಸವರಾಜ ರಾಯರೆಡ್ಡಿ :– ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಏನು ನೋಟೀಸ್ ಕೊಟ್ಟಿದ್ದೇನೆ, ಅದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಿ.